" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ: 12ನೇ ಜೂನ್ 2017
ಸೋಮವಾರ

## ವಿಷಯಾನುಕ್ರಮಣಿಕೆ


1. **ಪ್ರಶ್ನೋತ್ತರಗಳು**

**(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

2749 – ಬಿಡುಗಡೆಯಾದ ಅನುದಾನದ ವಿವರ.
– ಶ್ರೀ ಎನ್.ಎಸ್.ಬೋಸರಾಜು

2666 – ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆ ಅಡಿ ಅನುದಾನ ನೀಡುವ ಬಗ್ಗೆ.
– ಶ್ರೀ ವಿಜಯಸಿಂಗ್

2652 – ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳ ಅನುದಾನದ ಬಗ್ಗೆ.
– ಶ್ರೀ ಬಿ.ಜೆ.ಪುಟ್ಟಸ್ವಾಮಿ

2778 – ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಮತ್ತು ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಬಗ್ಗೆ.
– ಶ್ರೀ ಅಮರನಾಥ ಪಾಟೀಲ್

2787 – ಜಾತಿ ಗಣತಿ ಕಾರ್ಯ ಕುರಿತು – ಶ್ರೀಮತಿ ತಾರಾ ಅನುರಾಧ

2755 + 2724 – ಮಾರುಕಟ್ಟೆಯಲ್ಲಿ ಕೃತಕ ಆಹಾರ ಪದಾರ್ಥಗಳ ಮಾರಾಟವನ್ನು ತಡೆಗಟ್ಟುವ ಬಗ್ಗೆ.
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್ & ಶ್ರೀ ರಘುನಾಥ ರಾವ್ ಮಲ್ಕಾಪೂರೆ

2736 – ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಬೆಲೆ ಅಂಗಡಿಗಳ ಕುರಿತು
– ಶ್ರೀ ಪ್ರತಾಪಚಂದ್ರ ಶೆಟ್ಟಿ

2790 – ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಕೊರೆಸಿದ ಕೊಳವೆ ಬಾವಿಗಳ ಕಾಮಗಾರಿ ಬಗ್ಗೆ
– ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.

2728 – ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಬಗ್ಗೆ
– ಶ್ರೀ ನಿರಾಣಿ ಹನುಮಂತ್ ರುದ್ರಪ್ಪ

2783 – ದಲಿತರ ಮೇಲಿನ ದೌರ್ಜನ್ಯ ಕೇಸುಗಳ ಇತ್ಯರ್ಥಕ್ಕೆ ಕ್ರಮಗಳ ಬಗ್ಗೆ.
– ಶ್ರೀ ಕೆ. ಅಬ್ದುಲ್ ಜಬ್ಬಾರ್

**(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

2. ಸದಸ್ಯರುಗಳು ಕೇಳಿದ ಚುಕ್ಕೆ ಗುರುತಿಲ್ಲದ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡದಿರುವ ಬಗ್ಗೆ.
ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)


" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**3. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು**

(ಅ) ಒಲಂಪಿಕ್ಸ್ ಕ್ರೀಡೆಯಲ್ಲಿ ಭಾಗವಹಿಸುವ ಕ್ರೀಡಾ ಪಟುಗಳಿಗೆ ಆಗಿರುವ ಸಮಸ್ಯೆಗಳ ಬಗ್ಗೆ.
ಶ್ರೀ ಭಾನು ಪ್ರಕಾಶ್ ಎಂ.ಬಿ.
ಶ್ರೀ ಕೆ.ಆರ್.ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

(ಆ) ರೈತರಿಗೆ ಒಂದು ರೂಪಾಯಿಯನ್ನು ಬೆಳೆ ಪರಿಹಾರವನ್ನಾಗಿ ನೀಡಿರುವ ಕುರಿತು
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಕೆ.ಆರ್.ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

(ಇ) ಭೂ ಒಡೆತನ ಯೋಜನೆ ಅಡಿಯಲ್ಲಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಡಾ: ಅಂಬೇಡ್ಕರ್ ನಿಗಮದಿಂದ ನಡೆದ ಅವ್ಯವಹಾರ ಕುರಿತು –
ಶ್ರೀ ಬಸನಗೌಡ ರಾ. ಪಾಟೀಲ (ಯತ್ನಾಳ್)
ಶ್ರೀ ಹೆಚ್.ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

(ಈ) ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕಗಳ ಪೂರೈಕೆ ಕುರಿತು.
ಶ್ರೀ ಅರುಣ ಶಹಾಪುರ
ಶ್ರೀ ಕೆ.ಆರ್.ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

(ಉ) ಎನ್.ಸಿ.ಟಿ.ಇ. ಹೊಸ ನಿಯಮಕ್ಕೆ–ಹಿಂದಿ ಶಿಕ್ಷಕರು ಕಂಗಾಲು, 50,000 ಅಭ್ಯರ್ಥಿಗಳ ಭವಿಷ್ಯದ ಕುರಿತು
ಶ್ರೀ ಎಸ್.ವ್ಹಿ.ಸಂಕನೂರ
ಶ್ರೀ ಕೆ.ಆರ್.ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**4. ಸಚಿವರ ಹೇಳಿಕೆಗಳು.**

ಅ) ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ದೇವಿಕೊಪ್ಪ ಗ್ರಾಮದಲ್ಲಿ ಹೆಸ್ಕಾಂನ ನಿರ್ಲಕ್ಷ್ಯತನದಿಂದ ಮೃತರಾಗಿರುವ ರೈತ ಕುಟುಂಬಕ್ಕೆ ಪರಿಹಾರ ನೀಡುವ ಬಗ್ಗೆ –
ಶ್ರೀ ಕೆ.ಆರ್.ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಆ) ಹಾಪ್‌ಕಾಮ್ಸ್‌ನಲ್ಲಿ ಮಾವಿನ ಕಾಯಿಗಳನ್ನು ಹಣ್ಣು ಮಾಡಲು ಕ್ಯಾಲ್ಷಿಯಂ ಕಾರ್ಬೈಡ್ ಅನ್ನು ಬಳಸುತ್ತಿರುವ ಬಗ್ಗೆ –
ಶ್ರೀ ಕೆ.ಆರ್.ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**5. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

– – – –

**(658) 12.06.2017 SPR-MD(VK) 11.00**

**ಕರ್ನಾಟಕ ವಿಧಾನ ಪರಿಷತ್ತು**

**ಸೋಮವಾರ, 12*ನೇ ಜೂನ್ 2017***

**ಸದನವು ವಿಧಾನಪರಿಷತ್ತಿನ ಸಭಾಂಗಣದಲ್ಲಿ**
**ಬೆಳಿಗ್ಗೆ 11 ಗಂಟೆ 07 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ)ಯವರು**
**ಪೀಠದಲ್ಲಿ ಉಪಸ್ಥಿತರಿದ್ದರು.**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ಬಹಳ ಜನ ಶ್ರೀ ರಾಹುಲ್ ಗಾಂಧಿಯವರ ತರಹ ಕೋಟನ್ನು ಹಾಕಿಕೊಂಡು ಬಂದಿದ್ದಾರೆ. ಸದಸ್ಯರುಗಳಾದ ಶ್ರೀ ಪ್ರಿಯಾಂಕ ಖರ್ಗೆ, ಶ್ರೀ ಆಂಜನೇಯ, ಶ್ರೀ ಹೆಚ್.ಎಂ.ರೇವಣ್ಣ ಅವರುಗಳು ಹಾಗೂ ನಮ್ಮ ಸರ್ಕಾರಿ ಮುಖ್ಯ ಸಚೇತಕರವರನ್ನು ನೋಡಿ, ಇವರುಗಳೆಲ್ಲರೂ ಕೂಡ ಶ್ರೀ ರಾಹುಲ್ ಗಾಂಧಿಯವರು ಬರುತ್ತಾರೆಂದು ಅವರ ತರಹ ಕೋಟನ್ನು ಧರಿಸಿದ್ದಾರೆ. ಇದನ್ನು ನೋಡಿದರೆ ಖುಷಿಯಾಗುತ್ತದೆ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಕನಿಷ್ಠ ನಮ್ಮ ಶ್ರೀ ರಾಹುಲ್ ಗಾಂಧಿಯವರ ತರಹ ಕೋಟನ್ನು ಹಾಕಿಕೊಂಡಿದ್ದೇವೆ ಎಂಬುದಾಗಿ ಹೇಳುತ್ತಿದ್ದಾರೆ ಇದನ್ನು ಕೇಳಿದರೆ ನಮಗೆ ಸಂತೋಷವಾಗುತ್ತದೆ. ಈ ಕೋಟನ್ನು ಶ್ರೀ ರಾಹುಲ್ ಗಾಂಧಿ ಅವರಿಗೋಸ್ಕರವೇ ಏನು ಹಾಕಿಕೊಂಡು ಬಂದಿಲ್ಲ. ಮಾಮೂಲಿಯಾಗಿ ಹಾಕಿಕೊಂಡು ಬಂದಿದ್ದೇವೆ. ಅಲ್ಲಿ ನೋಡಿ ಶ್ರೀ ಲಹರ್ ಸಿಂಗ್ ಸಿರೋಯಾ, ಶ್ರೀ ಬಿ.ಜೆ.ಪುಟ್ಟಸ್ವಾಮಿ ರವರುಗಳೂ ಸಹ ಕೋಟನ್ನು ಹಾಕಿಕೊಂಡು ಬಂದಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನೀವು ಎಲ್ಲಾ ಕೋಟನ್ನು ಹಾಕಿಕೊಂಡು ಬಂದಿಲ್ಲ. ನನ್ನ ಆಸೆ ಏನೆಂದರೆ ಶ್ರೀ ರಾಹುಲ್ ಗಾಂಧಿಯವರು ಬರುತ್ತಲೇ ಇರಬೇಕು. ಎಲ್ಲೆಲ್ಲಿ ಶ್ರೀ ರಾಹುಲ್ ಗಾಂಧಿ ಅವರು ಬರುತ್ತಾರೆ ಅಲ್ಲೆಲ್ಲಾ ಕಾಂಗ್ರೆಸ್ ಪಕ್ಷವು ಪರಾಜಯಗೊಂಡಿದೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರು ಬೆಳಿಗ್ಗೆ ಬೆಳಿಗ್ಗೆಯೇ ಇಂತಹ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆಂದರೆ ಇದರ ಹಿಂದೆ ಏನೋ ಹಿಡನ್ ಅಜೆಂಡಾ ಇದೆ ಎಂದರ್ಥ. ಆದ್ದರಿಂದ ಆಡಳಿತ ಪಕ್ಷದ ಸದಸ್ಯರು ಸ್ವಲ್ಪ ಹುಷಾರಾಗಿರಿ.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಶ್ರೀ ರಾಹುಲ್ ಗಾಂಧಿಯವರು ಏನು ಹಾಕಿಕೊಂಡು ಬರುತ್ತಾರೆ ಅದನ್ನೇ ನಾವು ಇವತ್ತಿನ ದಿವಸ ಹಾಕಿಕೊಂಡು ಬಂದಿದ್ದೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಎಲ್ಲೆಲ್ಲಿ ಶ್ರೀ ರಾಹುಲ್ ಗಾಂಧಿರವರು ಬಂದಿದ್ದಾರೆ ಅಲ್ಲೆಲ್ಲಾ ಕಡೆಗಳಲ್ಲಿ ಕಾಂಗ್ರೆಸ್ ಪಕ್ಷವು ಪರಾಜಯಗೊಂಡಿದೆ. ಆದುದರಿಂದ ಮತ್ತೆ ಮತ್ತೆ ಶ್ರೀ ರಾಹುಲ್ ಗಾಂಧಿಯವರು ಬರಬೇಕೆನ್ನುವುದು ನನ್ನ ಆಸೆ.

**ಸಭಾಪತಿಯವರು:-** ಆ ಎಲ್ಲಾ ಚರ್ಚೆಗಳು ಇಲ್ಲಿ ಬೇಡ.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಮುಂದಿನ ದಿನಗಳಲ್ಲಿ ಶ್ರೀ ರಾಹುಲ್ ಗಾಂಧಿಯವರು ಎಲ್ಲಿಲ್ಲಿ ಹೋಗುತ್ತಾರೆ ಅಲ್ಲೆಲ್ಲಾ ಕಾಂಗ್ರೆಸ್ ಪಕ್ಷ ಜಯಗಳಿಸುತ್ತದೆ ಹಾಗೂ ಬಿ.ಜೆ.ಪಿ. ಪಕ್ಷವು ಪರಾಜಯಗೊಳ್ಳುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇಡೀ ದೇಶದ ಇತಿಹಾಸವನ್ನು ನೋಡಿದಾಗ ಗೊತ್ತಾಗುತ್ತದೆ ಎಲ್ಲೆಲ್ಲಿ ಶ್ರೀ ರಾಹುಲ್ ಗಾಂಧಿಯವರು ಹೋಗಿದ್ದಾರೆ ಅಲ್ಲೆಲ್ಲಾ ಕಾಂಗ್ರೆಸ್ ಪಕ್ಷವು ಪರಾಜಯಗೊಂಡಿದೆ. Including Uttar Pradesh.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ ವಿರೋಧ ಪಕ್ಷದ ನಾಯಕರ ಪಟ್ಟವೂ ಸಹ ಸಿಗಲಿಲ್ಲ.

**(ಗೊಂದಲ)**

**ಸಭಾಪತಿಯವರು:-** ಆ ಎಲ್ಲಾ ಚರ್ಚೆಗಳು ಇಲ್ಲಿ ಬೇಡ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಭಾನುವಾರ ಮುಗಿದ ಮೇಲೆ ಸೋಮವಾರ ಬಂದೇ ಬರುತ್ತದೆ.

**ಸಭಾಪತಿಯವರು:-** ಈಗ ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭ ಮಾಡೋಣ. ಮೊದಲನೆಯ ಪ್ರಶ್ನೆ ಶ್ರೀ ಎನ್.ಎಸ್.ಬೋಸ್‌ರಾಜು ಅವರದ್ದು ಇದೆ. ಶ್ರೀ ಬೋಸ್‌ರಾಜುರವರು ಪತ್ರವನ್ನು ಬರೆದಿದ್ದು, ಅವರ ಪರವಾಗಿ ಶ್ರೀ ಬಸವರಾಜ್ ಪಾಟೀಲ್ ಇಟಗಿ ಅವರು ಪ್ರಶ್ನೆಯನ್ನು ಕೇಳುತ್ತಾರೆ ಎಂದು ತಿಳಿಸಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 1. ಪ್ರಶ್ನೋತ್ತರಗಳು

### (ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

**(659)12.06.2017 MSS-MD(VK)11.10**

**ಪ್ರಶ್ನೆ ಸಂಖ್ಯೆ:2749**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) (ಶ್ರೀ ಎನ್.ಎಸ್.ಬೋಸ್‌ರಾಜುರವರ ಪರವಾಗಿ):–** ಮಾನ್ಯ ಸಭಾಪತಿಯವರೆ, ಕಳೆದ 2016–17 ಮತ್ತು 2017–18ನೇ ಸಾಲಿನಲ್ಲಿ ನಮ್ಮ ಹೈದರಾಬಾದ್–ಕರ್ನಾಟಕ ಜಿಲ್ಲೆಗಳಿಗೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ. ಅದರೂ ಕೂಡ ತಮ್ಮ ಮುಖಾಂತರ ಸನ್ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸಾಕಷ್ಟು ಐತಿಹಾಸಿಕ ಸ್ಥಳಗಳು ಮತ್ತು ತುಂಗಾಭದ್ರ ಮತ್ತು ಕೃಷ್ಣ ನದಿ ಮತ್ತು ಸಾಕಷ್ಟು ನದಿಗಳಿವೆ. ಆ ನದಿಗಳ ಪಾತ್ರದಲ್ಲಿ ಸ್ನಾನಘಟ್ಟಗಳನ್ನು ಮಾಡಿಕೊಡುವುದಕ್ಕೆ ಹೆಚ್ಚು ಕಾಳಜಿಯನ್ನು ವಹಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ರಾಯಚೂರು ಜಿಲ್ಲೆಯ ಶಕ್ತಿ ನಗರದ ಕೃಷ್ಣಾ ನದಿ ತೀರದಲ್ಲಿ ಸ್ನಾನಘಟ್ಟ ಹಾಗೂ ಪುಷ್ಕರಣಿ ಮತ್ತು ಇತರೆ ಸೌಲಭ್ಯಗಳ ಅಭಿವೃದ್ಧಿಗೆ ಒಂದು ಕೋಟಿ ರೂಪಾಯಿಗಳನ್ನು ಕಳೆದ ಸಾರಿಯೇ ಬಿಡುಗಡೆ ಮಾಡಿದ್ದೇವೆ. ಅದೇ ರೀತಿಯಲ್ಲಿ ಯಾವುದಾದರು ನೀಲಿ ನಕ್ಷೆಯನ್ನು ತಯಾರು ಮಾಡಿದರೆ ಖಂಡಿತವಾಗಿ ಅನುದಾನವನ್ನು ಮಾಡಿಕೊಡುತ್ತೇವೆ. ಅದೇ ರೀತಿಯಲ್ಲಿ *Hyderabad Karnataka Tourism Advisory Committee* ಯನ್ನು ಮೊದಲ ಬಾರಿ ನಾವು ಸ್ಥಾಪನೆ ಮಾಡಿ ವಿಶೇಷವಾಗಿ ಈ ಆರು ಜಿಲ್ಲೆಗಳಲ್ಲಿ ಪ್ರವಾಸಿ ತಾಣಗಳನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಬೇಕೆಂದು ಪರಿಶೀಲನೆ ಮಾಡುತ್ತೇವೆ. ಖಂಡಿತವಾಗಿ ನಾವು ರಾಯಚೂರಿಗೆ ಆದ್ಯತೆಯನ್ನು ಕೊಟ್ಟು ಮಾನ್ಯ ಸದಸ್ಯರು ಹೇಳಿದ ಹಾಗೆ ಮಾಡುತ್ತೇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ: 2666**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿಜಯ ಸಿಂಗ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಸಚಿವರು ಅನುದಾನವನ್ನೂ ಕೂಡ ಬಿಡುಗಡೆ ಮಾಡುತ್ತಿರುವುದರಿಂದ ತಮ್ಮ ಮುಖಾಂತರ ಅವರಿಗೆ ಅಭಿನಂದನೆಗಳನ್ನು ಹೇಳುತ್ತಿದ್ದೇನೆ. ಆದರೆ 2013ನೇ ಇಸವಿಯಿಂದ 2016ನೇ ಇಸವಿಯವರೆಗೂ 1316.65 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಅದರಲ್ಲಿ 512.15 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಲಾಗಿದೆ. ಇನ್ನು 804.5 ಕೋಟಿ ರೂಪಾಯಿಗಳ ಹಣ ಖರ್ಚಾಗಿಲ್ಲ. ಆ ಹಣವನ್ನು ಕೂಡ ಅಭಿವೃದ್ಧಿ ಕಾರ್ಯಕ್ಕೆ ಖರ್ಚು ಮಾಡಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಎಂ.ಆರ್.ಸೀತಾರಾಂ:–** ಮಾನ್ಯ ಸಭಾಪತಿಯವರೆ, ಇದರಲ್ಲಿ 2013–14, 2014–15, 2015–16 ಮತ್ತು 2016–17 ಈ ನಾಲ್ಕು ವರ್ಷಗಳಲ್ಲಿ ಒಟ್ಟು 233.40 ಕೋಟಿ ರೂಪಾಯಿಗಳನ್ನು ಮೀಸಲು ಇಟ್ಟು ಅದರಲ್ಲಿ 161 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದ ಪೈಕಿ ಅದರಲ್ಲಿ 149 ಕೋಟಿ ರೂಪಾಯಿಗಳು ವೆಚ್ಚವಾಗಿದೆ. ಆದರೆ ಕೆಲವು ಕಾರಣದಿಂದ ಪೂರ್ಣ ಹಣ ಖರ್ಚು ಮಾಡುವುದಕ್ಕೆ ಸಾಧ್ಯವಾಗಿರುವುದಿಲ್ಲ. ಕಾರಣ ಸ್ಥಳ ಬದಲಾವಣೆ ಇರಬಹುದು, ಸ್ಥಳದಲ್ಲಿ ಸಮಸ್ಯೆಗಳಾಗಿರಬಹುದು, ಕಾನೂನು ತೊಡಕುಗಳಿರಬಹುದು ಇಂತಹ ಸಮಸ್ಯೆಗಳಿಂದ ಸುಮಾರು 420 ಕಾಮಗಾರಿಗಳು ಆಗಬೇಕಾಗಿದೆ. ತದನಂತರ ಇದೆಲ್ಲಾ ಖಂಡಿತವಾಗಿ ಮುಗಿಯುತ್ತದೆಂದು ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ಭರವಸೆಯನ್ನು ಕೊಡುತ್ತಿದ್ದೇನೆ. 2017–18ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಸುಮಾರು 129 ಕೋಟಿ ರೂಪಾಯಿಗಳ ಒಟ್ಟು ಕೆಲಸಗಳನ್ನು ತೆಗೆದುಕೊಂಡು ವಿಲೇವಾರಿ ಮಾಡುತ್ತಿದ್ದೇವೆ.

**<u>ಪ್ರಶ್ನೆ ಸಂಖ್ಯೆ: 2652</u>**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳಿರತಕ್ಕಂಥದ್ದು ಯಾರು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿದ್ದಾರೆ ಅವರಿಗೆ ಅನುಕೂಲವಾಗಲಿ ಎನ್ನುವಂಥದ್ದು ಒಂದು ಪ್ರಶ್ನೆಯಾಗಿದೆ. ಮತ್ತು ವಿದ್ಯಾಸಿರಿಯಲ್ಲಿ ಅಗುವಂತಹ ಅನ್ಯಾಯವನ್ನು ತಡೆಗಟ್ಟುವುದಕ್ಕೆ ಈ ಹಿಂದುಳಿದ ವರ್ಗಗಳು ಹಾಗೂ ಇತರರು ಸಂಘ ಸಂಸ್ಥೆಗಳವರು ಅವರದ್ದೇ ಆದ ಸ್ವಂತ ಕಟ್ಟಡದಲ್ಲಿ ವಿದ್ಯಾರ್ಥಿ ನಿಲಯ ಕಟ್ಟಿದ್ದರೆ, ಅಂತಹ ಹಾಸ್ಟೆಲ್‌ಗಳಿಗೆ ಪ್ರಥಮ ವರ್ಷದಿಂದಲೇ ಅನುದಾನವನ್ನು ನೀಡಲು ಸರ್ಕಾರಕ್ಕೆ ಇರುವ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೊಂದರೇನು? ದುರ್ಬಲ ವರ್ಗದವರಿಗೆ ಆರ್ಥಿಕ ಸಹಾಯವಾಗಬೇಕಾಗುತ್ತದೆ. ಸರ್ಕಾರದ ವತಿಯಿಂದ ವಿದ್ಯಾಸಿರಿ ಯೋಜನೆಯಲ್ಲಿ ಒಂದು ತಿಂಗಳಿಗೆ ಒಬ್ಬ ವಿದ್ಯಾರ್ಥಿಗೆ ವಸತಿ ಮತ್ತು ಊಟಕ್ಕೆ ಎಂದು 1,500 ರೂಪಾಯಿಗಳನ್ನು ಕೊಡಲಾಗುತ್ತಿದೆ. ನಾನು ತಮ್ಮ ಮುಖಾಂತರ ಸಚಿವರನ್ನು ಕೇಳುವುದೇನೆಂದರೆ, ಇತ್ತೀಚಿನ ದಿನಗಳಲ್ಲಿ ಸರ್ಕಾರದಿಂದ ಮಾನ್ಯತೆಯನ್ನು ಪಡೆದುಕೊಂಡು ಏನು ಹಾಸ್ಟೆಲ್ ಕಟ್ಟಡಗಳನ್ನು ಕಟ್ಟಿದ್ದಾರೆ, ಆ ಹಾಸ್ಟೆಲ್‌ಗಳಲ್ಲಿ ವಸತಿ ಸೌಕರ್ಯ ಇರುವಾಗ ಎರಡು ವರ್ಷಗಳ ನಂತರ ಅವರಿಗೆ ಅನುದಾನಕ್ಕೆ ಒಳಪಡಿಸುತ್ತೀರಿ, ಅದರ ಬದಲು ಪ್ರಾರಂಭದಲ್ಲಿಯೇ ಅನುದಾನವನ್ನು ಕೊಟ್ಟರೆ ವಿದ್ಯಾರ್ಥಿಗಳಿಗೆ ಸುಸಜ್ಜಿತವಾದ ವಸತಿ ಸಿಗುತ್ತದೆ. ಊಟಕ್ಕೆ ಮಾತ್ರ ಹಣ ಖರ್ಚಾಗುತ್ತದೆ. ಅದುದರಿಂದ ಸ್ವಂತ ಕಟ್ಟಡ ಇದ್ದು ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಿದ್ದರೆ ಅಂತಹ ಹಾಸ್ಟೆಲ್‌ಗಳಿಗೆ ಅನುದಾನವನ್ನು ಕೊಟ್ಟರೆ ಸರ್ಕಾರಕ್ಕೆ ಹಣ ಉಳಿಯುತ್ತದೆ ಮತ್ತು ದುರುಪಯೋಗವಾಗುವುದು ಕೂಡ ಕಡಿಮೆಯಾಗುತ್ತದೆ. ಹಾಗೂ ವಿದ್ಯಾರ್ಥಿಗಳಿಗೆ ಓದುವುದಕ್ಕೆ ಒಳ್ಳೆಯ ಕೊಠಡಿ ಕೂಡ ಸಿಗುತ್ತದೆ. ಅದನ್ನು ಮಾಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ?

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಾವು ವಿದ್ಯಾರ್ಥಿ ನಿಲಯಗಳನ್ನು ನಾವೇ ನಡೆಸುತ್ತಿದ್ದೇವೆ. ನಡೆಸುವಂತಹ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದಿಂದ ಬರುವಂತಹ ಬಹಳಷ್ಟು ಅರ್ಹ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳಲ್ಲಿ ಪ್ರವೇಶ ಸಿಗುತ್ತಿರಲಿಲ್ಲ. ಅದರಿಂದ ವಂಚಿತರಾಗುತ್ತಿದ್ದರು. ಕೆಲವು ಕಡೆ backward class students ಗಳಿಗೆ UBL ಎಂದು ಬರೀ 200 ರೂಪಾಯಿಗಳನ್ನು ಕೊಡಲಾಗುತ್ತಿತ್ತು. ನಮ್ಮ ಕಾಂಗ್ರೆಸ್ ಪಕ್ಷದ ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾದ ಮೇಲೆ ಅವರೇ ಸ್ವತಃ ಆಲೋಚನೆ ಮಾಡಿ, ಅವರ ಅನುಭವದಲ್ಲಿಯೇ ಅನುಭವಿಸಿದಂತಹ ಕಷ್ಟವನ್ನು ಇತರೆ ವಿದ್ಯಾರ್ಥಿಗಳು ಪಡಬಾರದು ಎನ್ನುವ ದೃಷ್ಟಿಯಿಂದ ವಿದ್ಯಾಸಿರಿ ಎನ್ನುವಂತಹ ಒಂದು ಯೋಜನೆಯನ್ನು ಜಾರಿಗೆ ತರಲಾಯಿತು. ಎಂತಹ ಯೋಜನೆ ರಾಷ್ಟ್ರದ ಯಾವುದೇ ಒಂದು ರಾಜ್ಯದಲ್ಲಿಯೂ ಕೂಡ ಇಲ್ಲ. ಆದರೆ ನಮ್ಮ ರಾಜ್ಯದಲ್ಲಿ ಮಾಡಿದ್ದೇವೆ. ಸುಮಾರು ಈಗಾಗಲೇ 2.5 ಲಕ್ಷ ವಿದ್ಯಾರ್ಥಿಗಳಿಗೆ ಯೋಜನೆಯಲ್ಲಿ ಹಣವನ್ನು ಕೊಟ್ಟಿದ್ದೇವೆ. ಈ ವರ್ಷ ವಿದ್ಯಾಸಿರಿ ಯೋಜನೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಹಣವನ್ನು ಕೊಡಬೇಕೆಂಬ ಗುರಿಯನ್ನಿಟ್ಟುಕೊಂಡಿದ್ದೇವೆ. ಇಲ್ಲಿ ಮಾನ್ಯ ಸದಸ್ಯರು ಮೂಲಭೂತವಾದ ಪ್ರಶ್ನೆಯನ್ನು ಏನು ಕೇಳುತ್ತಿದ್ದಾರೆಂದರೆ, ವಿದ್ಯಾಸಿರಿ ಯೋಜನೆಯಲ್ಲಿ ಒಬ್ಬ ವಿದ್ಯಾರ್ಥಿಗೆ ಒಂದು ತಿಂಗಳಿಗೆ 1,500 ರೂಪಾಯಿಗಳಂತೆ 10 ತಿಂಗಳಿಗೆ 15,000 ರೂಪಾಯಿಗಳನ್ನು ಯಾವುದೇ ಮಧ್ಯವರ್ತಿಗಳಿಲ್ಲದೇ ಆನ್‌ಲೈನ್ ಮುಖಾತರ ಅರ್ಜಿಯನ್ನು ಕರೆದು ಆರ್‌ಟಿಜಿಎಸ್ ಮುಖಾಂತರ ನೇರವಾಗಿ ವಿದ್ಯಾರ್ಥಿಯ ಬ್ಯಾಂಕ್ ಅಕೌಂಟ್‌ಗೆ ಜಮಾ ಆಗುತ್ತಿದೆ. ಇದು ಬಹಳ ಒಳ್ಳೆಯ ಯೋಜನೆಯಾಗಿದೆ. ಈ ಯೋಜನೆ ಅಡಿಯಲ್ಲಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಓದಿದವರಲ್ಲಿ ಕೆಲವರು ರ್‍ಯಾಂಕ್ ಬಂದಿದ್ದಾರೆ. ಇದರಿಂದ ಆ ವಿದ್ಯಾರ್ಥಿಗಳು ನಮಗೆ ಅನುಕೂಲವಾಗಿದೆ ಎಂದು ಹೇಳಿದ್ದಾರೆ. ಸರ್ಕಾರಿ ಹಾಸ್ಟೆಲ್‌ಗಳನ್ನು ಕೂಡ ಸುಧಾರಣೆಯಾಗಿದೆ. ಇದಲ್ಲದೇ ಮಠಮಾನ್ಯಗಳು, ಸಮಾಜ ಸುಧಾರಕರು, ಸಮಾಜದ ಬಗ್ಗೆ ಕಳಕಳಿ ಇರುವಂಹವರು ಕೂಡ ಯಾರ್‍ಯಾರು ಹಾಸ್ಟೆಲ್‌ಗಳನ್ನು ತೆರೆದಿದ್ದಾರೆ ಅಂಥವರಿಗೂ ಎರಡು ವರ್ಷಗಳ ನಂತರ ಅವರಿಗೆ ಅನುದಾನಕ್ಕೆ ಒಳಪಡಿಸಿ ವಿದ್ಯಾರ್ಥಿ ವೇತನವನ್ನು ಕೊಡುತ್ತಿದ್ದೇವೆ. ಮೊದಲು ಮೂರು ವರ್ಷಗಳ ಕಾಲ ಹಾಸ್ಟೆಲ್ ಅನ್ನು ತೃಪ್ತಿಕರವಾಗಿ ನಡೆಸಿರಬೇಕೆಂದು ಇತ್ತು ನಂತರ ಆ ಹಾಸ್ಟೆಲ್‌ಗಳನ್ನು ಅನುದಾನಕ್ಕೆ ಒಳಪಡಿಸಬೇಕೆಂಬ ನಿಯಮ ಇತ್ತು. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅದನ್ನು ಎರಡು ವರ್ಷಕ್ಕೆ ಇಳಿಸಿದ್ದೇವೆ. ಅವರು ಎರಡು ವರ್ಷಗಳ ಕಾಲ ತೃಪ್ತಿಕರವಾಗಿ ಅವರು 25 ವಿದ್ಯಾರ್ಥಿಗಳಿಗೆ ಊಟ ಹಾಕಲಿ, ಆದರೆ, ಇದಕ್ಕೆ ಮೊದಲೇ ನಮ್ಮಿಂದ ಮಾನ್ಯತೆಯನ್ನು ಪಡೆದುಕೊಂಡಿರಬೇಕು. ನಾವು ಅಂಥವರಿಗೆ ಮಾನ್ಯತೆಯನ್ನು ಕೊಡುತ್ತೇವೆ. ಮಾನ್ಯತೆಯನ್ನು ಪಡೆದು ಎರಡು ವರ್ಷಗಳು ತೃಪ್ತಿಕರವಾಗಿ ನಡೆಸಬೇಕು. ಎರಡು ವರ್ಷದ ನಂತರ automatic ಅಗಿ ಆ ವಿದ್ಯಾರ್ಥಿ ನಿಲಯವನ್ನು ಅನುದಾನಕ್ಕೆ ಒಳಪಡಿಸುವಂತಹ ವ್ಯವಸ್ಥೆ ಇದೆ. ಆದರೆ ಮಾನ್ಯ ಸದಸ್ಯರು ಪ್ರಥಮ ವರ್ಷದಲ್ಲಿ ಎಲ್ಲಾ ರೀತಿಯ ಸೌಲಭ್ಯಗಳಿದ್ದರೆ ಅನುದಾನವನ್ನು ಕೊಡುವುದಕ್ಕೆ ಏಕೆ ಹಿಂದೆ ಮುಂದೆ ನೋಡಲಾಗುತ್ತದೆ ಎಂದು ಕೇಳುತ್ತಿದ್ದಾರೆ. ಇದರ ಬಗ್ಗೆ ನಮ್ಮ ಅಧಿಕಾರಿಗಳ ಹತ್ತಿರ ಮಾತನಾಡಿ, ಪರಿಶೀಲನೆ ಮಾಡುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಎಲ್ಲಿ ವಸತಿ ನಿಲಯದ ಕೊರತೆ ಮತ್ತು ವಸತಿ ನಿಲಯ ಇರುವುದಿಲ್ಲ ಅಲ್ಲಿ ವಿದ್ಯಾಸಿರಿ ಯೋಜನೆಯನ್ನು ಕೊಡಲಾಗುವುದೆಂದು ಸಚಿವರು ಹೇಳುತ್ತಾರೆ. ಆದರೆ ಹಾಸ್ಟೆಲ್‌ಗಳು ಇರುವಾಗ ವಸತಿಗಾಗಿ ಕೊಡುತ್ತಿರುವ 850 ರೂಪಾಯಿಗಳ ಹಣ ಸರ್ಕಾರಕ್ಕೆ ಉಳಿತಾಯವಾಗುತ್ತದೆ. ಅಂತಹ ವಿದ್ಯಾರ್ಥಿಗಳಿಗೆ ಒಳ್ಳೆಯ ರೂಂ ಸಿಗುತ್ತದೆ. 1,500 ರೂಪಾಯಿಗಳನ್ನು ವಿದ್ಯಾರ್ಥಿಗೆ ವಿದ್ಯಾಸಿರಿಯಲ್ಲಿ ಕೊಟ್ಟಾಗ ಅವನು ಹೋಟೆಲ್‌ನಲ್ಲಿ ಊಟ ಮಾಡುತ್ತೇನೆಯೋ ಇಲ್ಲವೋ, ಓದುತ್ತಾನೆಯೋ ಇಲ್ಲವೋ ಗೊತ್ತಾಗುವುದಿಲ್ಲ. ಆದರೆ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳಿಗೆ ಸೌಲಭ್ಯವನ್ನು ಕಲ್ಪಿಸಿದಾಗ 50% ಹಣ ಕೂಡ ಸರ್ಕಾರಕ್ಕೆ ಉಳಿತಾಯವಾಗುತ್ತದೆ ಮತ್ತು ವಿದ್ಯಾಭ್ಯಾಸವನ್ನು ಮಾಡುವುದಕ್ಕೆ ಒಳ್ಳೆಯ ವಾತಾವರಣ ಕೂಡ ಸಿಗುತ್ತದೆ. ಸಂಘ ಸಂಸ್ಥೆಗಳು ಮಾಡಿರುವಂತಹ ವಿದ್ಯಾರ್ಥಿ ನಿಲಯದಲ್ಲಿ ಎಲ್ಲಾ ರೀತಿಯ ಸೌಲಭ್ಯಗಳು ಇದ್ದರೆ ಸ್ಥಳ ಪರಿಶೀಲನೆ ಮಾಡಿ ಅಂತಹ ಹಾಸ್ಟೆಲ್‌ಗಳಿಗೆ ಅನುದಾನವನ್ನು ಕೊಡುವುದಕ್ಕೆ ಸರ್ಕಾರಕ್ಕೆ ತೊಂದರೆ ಏನಿದೆ? ಸರ್ಕಾರಕ್ಕೂ ಕೂಡ ಹಣ ಉಳಿತಾಯವಾಗುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ಭರವಸೆಯನ್ನಾದರು ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಬಂದಿಖಾನೆಯಲ್ಲಿರುವಂತಹ ಖೈದಿಗಳಿಗೆ ಒಳ್ಳೆಯ ಅಕ್ಕಿಯನ್ನು ಸರ್ಕಾರ ಪೂರೈಕೆ ಮಾಡಲಾಗುತ್ತದೆ. ಆದರೆ ಹಾಸ್ಟೆಲ್‌ಗಳಲ್ಲಿರುವಂತಹ ವಿದ್ಯಾರ್ಥಿಗಳ ಊಟಕ್ಕೆ ಕೊಡುವಂತಹ ಅಕ್ಕಿ ಬಹಳ ಕಳಪೆಯಾಗಿದೆ. ಇದು ಯಾವ ನ್ಯಾಯ?

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಏನೂ ಇಲ್ಲ. ಮಾನ್ಯ ಶ್ರೀ ಕೆ.ಟಿ.ಶ್ರೀಕಂಠೇಗೌಡರೆ ಅದಕ್ಕೂ ಇದಕ್ಕೂ ಏನೋ ಹೇಳುವುದಕ್ಕೆ ಹೋಗಬೇಡಿ.

**ಸಭಾಪತಿಯವರು:-** ಈಗ ಹಾಸ್ಟೆಲ್‌ಗಳಿಗೆ ಅನುದಾನ ನೀಡುವ ಬಗ್ಗೆ ಇರುವಂತಹ ವಿಷಯ, ಈಗ ಸಾಮಾನ್ಯ ಚರ್ಚೆ ಬೇಡ.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಬಿ.ಜೆ.ಪುಟ್ಟಸ್ವಾಮಿಯವರಿಗೆ practical ಅಗಿ ಹಿಂದುಳಿದ ವಿದ್ಯಾರ್ಥಿಗಳ ಬಗ್ಗೆ ಎಲ್ಲಾ ಚೆನ್ನಾಗಿ ಗೊತ್ತಿದೆ. ಹಿಂದುಳಿದ ವರ್ಗಗಳ ಎಷ್ಟೋ ಹಾಸ್ಟೆಲ್‌ಗಳನ್ನು ಮುಚ್ಚಲಾಗಿದೆ. ಎಷ್ಟೋ ಮಕ್ಕಳುಗಳು ಹಳೆಯ ಹಾಸ್ಟೆಲ್‌ಗಳಿಗೆ ಹೋಗುತ್ತಿಲ್ಲ. ಹೊಸದಾಗಿ ನಾವು ಹಾಸ್ಟೆಲ್‌ಗಳನ್ನು ಕಟ್ಟುತ್ತಿದ್ದೇವೆ. ಈ ವರ್ಷ 300 ಹಾಸ್ಟೆಲ್‌ಗಳನ್ನು ಕಟ್ಟಬೇಕೆಂದು ಈ ವರ್ಷದ ಬಜೆಟ್‌ನಲ್ಲಿ 300 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಆ ಎಲ್ಲಾ ಕಟ್ಟಡಗಳು ಪೂರ್ಣವಾದ ಮೇಲೆ ವಿದ್ಯಾರ್ಥಿಗಳು ನಮ್ಮ ಹಾಸ್ಟೆಲ್‌ಗಳಿಗೆ ಬರುತ್ತಾರೆಯೇ ಹೊರತು, ಖಾಸಗಿಯವರ ಹಾಸ್ಟೆಲ್ ಕಟ್ಟಡದಲ್ಲಿ ಅವರು ಇರುವುದಿಲ್ಲ. ಈಗಾಗಲೇ ಸುಮಾರು ಹಾಸ್ಟೆಲ್‌ಗಳು ಕ್ಲೋಸ್ ಅಗಿದೆ. ಹಿಂದೆ ಮಾನ್ಯತೆಯನ್ನು ಪಡೆದಂತಹ ಹಾಸ್ಟೆಲ್‌ಗಳಿಗೆ ವಿದ್ಯಾರ್ಥಿಗಳು ಹೋಗುತ್ತಿಲ್ಲ. ನಾವೆಲ್ಲರೂ ಬಡವರ ಪರವಾಗಿ ಕಳಕಳಿ ಇರತಕ್ಕಂಥವರು. ನಾವೆಲ್ಲರೂ ಇದ್ದುದರಿಂದ ಶಾಲೆಯಲ್ಲಿ ಮಧ್ಯಾಹ್ನದ ಊಟವನ್ನು ಕೊಡುತ್ತಿದ್ದೇವೆ. ಬಿಪಿಎಲ್ ಕಾರ್ಡ್‌ದಾರರನಿಗೆ ಉಚಿತವಾಗಿ ಅಕ್ಕಿಯನ್ನು ಕೊಡುತ್ತಿದ್ದೇವೆ. ಎಷ್ಟೋ ಮಕ್ಕಳು ಅಲ್ಲಿಯೇ ಊಟ ಮಾಡಿಕೊಂಡು ಓದುತ್ತಾರೆ. ಊಟಕ್ಕೆಂದು ಹಾಸ್ಟೆಲ್‌ಗೆ ಬರುತ್ತಿಲ್ಲ. ಹಾಸ್ಟೆಲ್‌ಗೆ ಮಧ್ಯಾಹ್ನದ ಊಟವನ್ನು ಹುಡುಕಿಕೊಂಡು ಬರುತ್ತಿಲ್ಲ. ಯಾವುದು ಆ ರೀತಿಯಾಗಿ ಪೂರ್ಣ ಮೂಲಭೂತ ಸೌಕರ್ಯ ಇರುವಂತಹ ಖಾಸಗಿ ಹಾಸ್ಟೆಲ್‌ಗಳನ್ನು ಪರಿಶೀಲನೆ ಮಾಡಿ ಕೊಡುತ್ತೇವೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಖಾಸಗಿಯವರು ಮಾಡಿರುವಂತಹ ಹಾಸ್ಟೆಲ್ ಕಟ್ಟಡ ಮತ್ತು ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳಿದ್ದರೆ ಅಂತಹವುಗಳಿಗೆ ಪ್ರಥಮ ವರ್ಷದಿಂದಲೇ ಅನುದಾನವನ್ನು ಕೊಡಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(660) 12.06.2017 11.20 SV-AK**

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಅಂತಹ ಹಾಸ್ಟೆಲ್‌ಗಳ ಬಗ್ಗೆ ಮಾಹಿತಿಯನ್ನು ಕೊಡಲಿ, ನಾವು ಪರಿಶೀಲನೆ ಮಾಡುತ್ತೇವೆ. ಸ್ವಂತಕ್ಕಾಗಿ ಕೇಳುವುದರಲ್ಲಿ ತಪ್ಪೇನಿದೆ? ಅವರು ನಾಲ್ಕೈದು ವಿದ್ಯಾರ್ಥಿ ನಿಲಯಗಳನ್ನು ನಡೆಸುತ್ತಿದ್ದಾರೆ. ನಾನು ಕೂಡ ವಿದ್ಯಾರ್ಥಿ ನಿಲಯಗಳನ್ನು ನಡೆಸುತ್ತಿದ್ದೇನೆ. ಅದರಲ್ಲಿ ತಪ್ಪೇನಿದೆ? ಖಾಸಗಿಯವರಲ್ಲಿ ಎಂತೆಂತಹ ಒಳ್ಳೆಯವರಿದ್ದಾರೆ ಎಂಬುದು ಮಾನ್ಯ ಪುಟ್ಟಸ್ವಾಮಿಯವರಿಗೆ ತಿಳಿದಿದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ವಿದ್ಯಾರ್ಥಿ ನಿಲಯಗಳ ಹೆಸರಿನಲ್ಲಿ ಹಣವನ್ನು ದುರುಪಯೋಗ ಪಡಿಸುವವರನ್ನು ಹ್ಯಾಂಗ್ ಮಾಡಲಿ.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಯಾವುದು ಎಂಬುದನ್ನು ಸ್ಪಷ್ಟವಾಗಿ ತಿಳಿಸಲಿ. ಏಕೆಂದರೆ ವಿದ್ಯಾರ್ಥಿಗಳಿಲ್ಲದೆಯೇ ಬಿಲ್ಲುಗಳನ್ನು ಬರೆದುಕೊಳ್ಳುವಂತಹ ಜನರಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರು ದಯವಿಟ್ಟು ಕುಳಿತುಕೊಳ್ಳಿ. ಮುಂದಿನ ಪ್ರಶ್ನೆ ಶ್ರೀಮತಿ ಜಯಮ್ಮ ಅವರದ್ದಾಗಿದೆ. ಅವರು ಗೈರು ಹಾಜರಾಗಿರುವುದರಿಂದ ಮುಂದಿನ ಪ್ರಶ್ನೆ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ ಅವರದ್ದು.

**ಪ್ರಶ್ನೆ ಸಂಖ್ಯೆ: 2680**
**(ಮಾನ್ಯ ಸದಸ್ಯರಾದ ಶ್ರೀಮತಿ ಜಯಮ್ಮನವರು ಗೈರು ಹಾಜರಾಗಿದ್ದರು)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಇಲ್ಲ ಅಲ್ಲವೆ?

**ಸಭಾಪತಿಯವರು:-** ತಮ್ಮ ಪ್ರಶ್ನೆಗೆ ಉತ್ತರಿಸಬೇಕಾದ ಸಚಿವರು ಯಾರು?

**ಶ್ರೀ ಐವನ್ ಡಿ'ಸೋಜ:-** ಮಾನ್ಯ ಸಭಾಪತಿಯವರೆ, ಶ್ರೀ ಯು.ಟಿ.ಖಾದರ್ ಅವರು ಉತ್ತರಿಸಬೇಕು.

**ಸಭಾಪತಿಯವರು:-** ಹಾಗಿದ್ದಲ್ಲಿ ಅವರು ಬಂದ ಮೇಲೆ ತಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 2778**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಉತ್ತರವನ್ನು ನೀಡಲಾಗಿದೆ. ನಾನು ಸವಿಸ್ತಾರವಾಗಿ ಹೋಗದಿದ್ದರೂ ಸಹ ಬಹಳ ದೊಡ್ಡ ಸಂಖ್ಯೆಯಲ್ಲಿ ಅಲ್ಲಿ ಹುದ್ದೆಗಳು ಖಾಲಿ ಇರುವುದನ್ನು ನೋಡುತ್ತಿದ್ದೇವೆ. ನಾನು ಹೈದರಾಬಾದ್ ಕರ್ನಾಟಕದ ಆರೂ ಜಿಲ್ಲೆಗಳಲ್ಲಿ ಸಂವಿಧಾನದ 371(ಜೆ) ಪರಿಚ್ಛೇದದ ಅನ್ವಯ ಮೀಸಲಿಟ್ಟಿರುವಂತಹ ಹುದ್ದೆಗಳ ಬಗ್ಗೆ ಕೇಳಿದ್ದೆನು. ಅದಕ್ಕಾಗಿ ಅವರು ಸಮಾಜ ಕಲ್ಯಾಣ ಇಲಾಖೆಯಲ್ಲಿ 3198, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ 192, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ 934 ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ 2539 ಈ ರೀತಿಯಾಗಿ 6863 ಹುದ್ದೆಗಳು ಖಾಲಿ ಇದ್ದು, ಇವುಗಳನ್ನು ಕೆ.ಪಿ.ಎಸ್.ಸಿ. ಅಥವಾ ಜಿಲ್ಲಾ ನೇಮಕಾತಿ ಸಮಿತಿಯಲ್ಲಿ ನೇರ ನೇಮಕಾತಿ ಅಥವಾ ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುವುದು ಎಂದು ಹೇಳುತ್ತಾರೆ. ಈ ಹುದ್ದೆಗಳು ಕಳೆದ ನಾಲ್ಕೈದು ವರ್ಷಗಳಿಂದ ಖಾಲಿ ಇವೆ. ಇನ್ನೊಂದು ಕಡೆ ಇಡೀ ರಾಜ್ಯದಲ್ಲಿ 22,000 ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಪತ್ರಿಕಾ ಹೇಳಿಕೆಯನ್ನು ಕೊಡುತ್ತಾರೆ. ಬಡವರ ಬಗ್ಗೆ ಕಾಳಜಿ ಇರುವಂತಹ ಹಾಗೂ ಇಂತಹ ಒಂದು ಪ್ರಮುಖ ಇಲಾಖೆಯ ಸಚಿವರಿಗೆ ಹೈದರಾಬಾದ್-ಕರ್ನಾಟಕದಲ್ಲಿ ಖಾಲಿ ಇರುವ ಹುದ್ದೆಗಳನ್ನು ನಿಖರವಾಗಿ ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುತ್ತದೆ ಎಂದು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಈಗಾಗಲೇ ಅವರು ಹೇಳಿದಂತೆ 6863 ಹುದ್ದೆಗಳನ್ನು ತುಂಬುವುದಕ್ಕೆ ಕ್ರಮ ಕೈಗೊಂಡಿದ್ದೇವೆ. ಡಿ ದರ್ಜೆ ನೌಕರರನ್ನು ಇನ್ನೆರಡು ಮೂರು ತಿಂಗಳಿನಲ್ಲಿ ಭರ್ತಿ ಮಾಡಲಾಗುತ್ತದೆ. ಉಳಿದಂತೆ ಪ್ರಥಮ ದರ್ಜೆ ಸಹಾಯಕ ಇತ್ಯಾದಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಯಾವ ನಿರ್ಬಂಧವೂ ಇರುವುದಿಲ್ಲ. 371(ಜೆ) ಪ್ರಕಾರ ಆರ್ಥಿಕ ಇಲಾಖೆಯ ಅನುಮತಿಯೂ ಬೇಕಾಗಿರುವುದಿಲ್ಲ. ನೇರ ನೇಮಕಾತಿ ಮಾಡುವುದಕ್ಕೆ ಏನೂ ತೊಂದರೆ ಇರುವುದಿಲ್ಲ. ಈಗ ಸದ್ಯದಲ್ಲಿಯೇ ಡಿ ದರ್ಜೆ ನೌಕರರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಉಳಿದ ಹುದ್ದೆಗಳನ್ನು ಕೆ.ಪಿ.ಎಸ್.ಸಿ. ಮುಖಾಂತರ ವರ್ಷದೊಳಗಾಗಿ ಆದಷ್ಟು ಶೀಘ್ರವಾಗಿ ಭರ್ತಿ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ವರ್ಷದ ನಂತರ ಮಾನ್ಯ ಸಚಿವರು ಆ ಹುದ್ದೆಯಲ್ಲಿರುವುದಿಲ್ಲ. The Finance Department's concurrence is deemed. ಆರ್ಥಿಕ ಇಲಾಖೆಯ ಒಪ್ಪಿಗೆ ಬೇಡವಾಗಿದ್ದರೂ ಸಹ ಈ ರೀತಿ ಈಗ ನಾಲ್ಕು ವರ್ಷಗಳಿಂದಲೂ ಹೇಳುತ್ತಾ ಬಂದಿರುತ್ತಾರೆ. ಇನ್ನು ಇವರು ಮಾಡುವುದು ಯಾವಾಗ?

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, 371(ಜೆ) ಅನ್ನು ತಂದದ್ದು ಯಾರು? ನಾವೇ ಅದನ್ನು ಜಾರಿಗೆ ತಂದಿದ್ದೇವೆ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, 371(ಜೆ) ಅನ್ನು ಜಾರಿಗೆ ತರುವಲ್ಲಿ ನಮ್ಮ ಕೊಡುಗೆಯೂ ಇದೆ. ಹಾಗಾದರೆ ನಾಲ್ಕು ವರ್ಷಗಳಿಂದ ಇವರು ಮಾಡಿರುವುದೇನು?

**ಶ್ರೀ ರಘುನಾಥ ರಾವ್ ಮಲ್ಕಾಪುರೆ:–** ಮಾನ್ಯ ಸಭಾಪತಿಯವರೆ, ಇದರಲ್ಲಿ ಯಾರದ್ದೂ ಸ್ವಂತ ಕೊಡುಗೆ ಇರುವುದಿಲ್ಲ. ನಾವೂ ಹೋರಾಟ ಮಾಡಿದ್ದೇವೆ. ಅವರೂ ಹೋರಾಟ ಮಾಡಿದ್ದಾರೆ. ಆ ಭಾಗದ ಜನರ ಹಿತದೃಷ್ಟಿಯಿಂದ ಎಲ್ಲರೂ ಹೋರಾಟ ಮಾಡಿದ್ದಾರೆ. ದಯವಿಟ್ಟು ಮಾನ್ಯ ಸಚಿವರು ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳಬಾರದು.

**ಸಭಾಪತಿಯವರು:–** ಮಾನ್ಯ ಸಚಿವರೆ, ಮಾನ್ಯ ಸದಸ್ಯರು ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುತ್ತದೆ ಎಂದು ಕೇಳುತ್ತಿದ್ದಾರೆ. ಉತ್ತರ ಸಿದ್ಧವಾಗಿದ್ದಲ್ಲಿ ಉತ್ತರವನ್ನು ಹೇಳಿ. ಇಲ್ಲವಾದಲ್ಲಿ ತರಿಸಿಕೊಡಲಾಗುವುದು ಎಂದು ಹೇಳಿ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, 371(ಜೆ) ಅನ್ನು ತಂದವರು ನಾವು ಎಂದು ಮಾನ್ಯ ಅಮರನಾಥ ಪಾಟೀಲರಿಗೆ ಹೇಳಬಯಸುತ್ತೇನೆ. ಅದರ ಮೂಲಕ ಎಲ್ಲೆಲ್ಲಿ ಖಾಲಿ ಹುದ್ದೆಗಳಿವೆಯೋ ಅದನ್ನು ತುಂಬುವುದಕ್ಕೆ ಏನೇನು ಬೇಕೆಂಬುದೆಲ್ಲವನ್ನೂ ಪರಿಶೀಲನೆ ಮಾಡಿ ಈ ವರ್ಷದಲ್ಲಿಯೇ ತುಂಬುತ್ತೇವೆ.

**ಸಭಾಪತಿಯವರು:–** ಮಾನ್ಯ ಅಮರನಾಥ ಪಾಟೀಲರೆ, ನಿಮ್ಮ ಪ್ರಶ್ನೆಗಷ್ಟೇ ಸೀಮಿತವಾಗಿರಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹಾರಿಕೆ ಉತ್ತರವನ್ನು ನೀಡುತ್ತಿದ್ದಾರೆ. ಅವರು ಹೇಳುತ್ತಿರುವುದನ್ನು ನಾನು ನಂಬಬೇಕೆ? ನಾಲ್ಕು ವರ್ಷದಿಂದ ಮಾಡಿರುವುದಿಲ್ಲ. ಇನ್ನೊಂದು ವರ್ಷದಲ್ಲಿ ಅವರು ಆ ಸ್ಥಾನದಲ್ಲಿಯೇ ಇರುವುದಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಅದೆಲ್ಲಾ ಇವರಿಗೇಕೆ? ಇವರೇನು ಶಾಸ್ತ್ರ ಹೇಳುತ್ತಿದ್ದಾರೆಯೇ? ನಾವೇ ಮತ್ತೆ ಅಧಿಕಾರಕ್ಕೆ ಬರುತ್ತೇವೆ. ಇರುವುದಿಲ್ಲ ಎಂದು ಹೇಗೆ ಹೇಳುತ್ತಾರೆ?

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ತಮ್ಮ ಹೇಳಿಕೆಯನ್ನು ವಾಪಸ್ ತೆಗೆದುಕೊಳ್ಳಲಿ. ನಿಖರವಾದಂತಹ ಕಾಲಮಿತಿಯೊಳಗೆ, ಇವರ ಅಧಿಕಾರಾವಧಿಯೊಳಗೆ ಮಾಡಬೇಕು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರೆ, ತಮ್ಮ ಪರವಾಗಿ ಬೇರೆ ಯಾರಿಗಾದರೂ authorise ಮಾಡಿದ್ದರೆ ಆ ಸಚಿವರು ಎದ್ದು ನಿಂತು ಮಾತನಾಡಬಹುದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈ ಸರ್ಕಾರದಲ್ಲಿ ನಾಲ್ಕು ಜನ ಸಮಾಜ ಕಲ್ಯಾಣ ಸಚಿವರಿದ್ದಾರೆಯೇ? ಎಲ್ಲರೂ ಎದ್ದು ನಿಂತು ಮಾತನಾಡುತ್ತಿದ್ದಾರೆ.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಹಾಗಾದರೆ ವಿರೋಧಪಕ್ಷದಲ್ಲಿ ಮಾತನಾಡುವವರೆಲ್ಲಾ ವಿರೋಧಪಕ್ಷದ ನಾಯಕರೆ?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಅವರು 371(ಜೆ) ಬಗ್ಗೆ ಮಾತನಾಡಿದ್ದಕ್ಕೆ ನಾವೂ ಮಾತನಾಡಿದ್ದೇವೆ.

**ಶ್ರೀ ಶರಣಪ್ರಕಾಶ್ ಪಾಟೀಲ್:-** ಮಾನ್ಯ ಸಭಾಪತಿಯವರೆ, ಅಂದು ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಶ್ರೀ ಧರಂ ಸಿಂಗ್‌ರವರ ಪ್ರಯತ್ನದ ಫಲವಾಗಿ 371(ಜೆ) ಜಾರಿಗೆ ಬಂದಿತು.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೆ, ಹಾಗಾದರೆ ಅದು ಹೇಗೆ ಆಯಿತು ಎಂದು ಹೇಳಲಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ರಘುನಾಥ ರಾವ್ ಮಲ್ಕಾಪುರೆ:-** ಮಾನ್ಯ ಸಭಾಪತಿಯವರೆ, ತಾವು ಅನುಮತಿ ಕೊಟ್ಟರೆ ಅದನ್ನು ನಾನು ಮಾನ್ಯ ಖರ್ಗೆ ಅವರಿಗೆ ಹೇಳುತ್ತೇನೆ.

**ಸಭಾಪತಿಯವರು:-** ಎಲ್ಲಾ ಸಚಿವರೂ ದಯಮಾಡಿ ಕುಳಿತುಕೊಳ್ಳಿ. ನಾನು ಯಾರಿಗೂ ಅನುಮತಿ ಕೊಟ್ಟಿರುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಇದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಮೂರು ಜನ ಮಂತ್ರಿಗಳೇ ಎದ್ದು ನಿಂತು ಮಾತನಾಡುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಅಮರನಾಥ ಪಾಟೀಲರೆ, ದಯಮಾಡಿ ಕುಳಿತುಕೊಳ್ಳಿ. ಇದು ಪ್ರಶ್ನೋತ್ತರ ಅವಧಿ. ನಿರ್ದಿಷ್ಟವಾದ ಪ್ರಶ್ನೆಯು ಸಂಬಂಧಪಟ್ಟ ಸಚಿವರಿಗೆ ಇರುತ್ತದೆ. ಸಂಬಂಧಪಟ್ಟ ಸಚಿವರು ಉತ್ತರಿಸಬೇಕು. ಅಕಸ್ಮಾತ್ ಅವರು ಬೇರೆ ಯಾರಾದರೂ ಮಂತ್ರಿಗಳಿಗೆ authorise ಮಾಡಿದ್ದರೆ ಅವರು ಮಾತ್ರ ಎದ್ದು ನಿಂತು ಮಾತನಾಡಬೇಕೆ ವಿನಃ ಮೂರು ನಾಲ್ಕು ಜನ ಮಂತ್ರಿಗಳೂ ಎದ್ದು ನಿಂತು ಮಾತನಾಡುವ ಪದ್ಧತಿ ಸದನಕ್ಕೆ ಶೋಭೆ ತರುವುದಲ್ಲ. ದಯವಿಟ್ಟು ಯಾರೂ ಹಾಗೆ ಮಾಡಬೇಡಿ. ಈಗ ಸಚಿವರಿಗೆ ಮಾನ್ಯ ಪಾಟೀಲರು ಯಾವಾಗ ಮಾಡುತ್ತೀರೆಂದು ಕೇಳಿದ್ದಾರೆ. ಸಚಿವರು ಉತ್ತರ ಹೇಳುವುದಾದರೆ ಹೇಳಲಿ. ಇಲ್ಲವಾದಲ್ಲಿ ಇಲ್ಲವೆನ್ನಿ.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಈಗ 371(ಜೆ) ...

**ಸಭಾಪತಿಯವರು:-** ಮಾನ್ಯ ಸಚಿವರೆ, ಅವರು ಆ ಪ್ರಶ್ನೆಯನ್ನು ಕೇಳಿರುವುದಿಲ್ಲ. ಯಾವಾಗ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಅವರು ಕೇಳಿರುವುದು.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, 371(ಜೆ) ತರುವ ಮೂಲಕ ಹೈದರಾಬಾದ್ ಕರ್ನಾಟಕಕ್ಕೆ ಅಭಿವೃದ್ಧಿಯ ಹೊಳೆಯನ್ನೇ ಹರಿಸಿದ್ದೇವೆ. ನಿರುದ್ಯೋಗಿ ಯುವಕರಿಗೆ ...

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮಾನ್ಯ ಸಚಿವರೆ, ಇದನ್ನು ಯಾವಾಗ ಮಾಡುತ್ತೀರಿ? ಅಷ್ಟನ್ನು ಹೇಳಿ. ಮಾನ್ಯ ಪಾಟೀಲರೆ, ನೀವು ನಿಮ್ಮ ಪ್ರಶ್ನೆಯ ದಾರಿಯನ್ನು ತಪ್ಪಿಸುತ್ತಿದ್ದೀರಿ. ಅವರು ಏನು ಬೇಕಾದರೂ ಮಾಡುತ್ತಾರೆ. ನೀವು ಏಕೆ ದಾರಿ ತಪ್ಪುತ್ತೀರಿ? Why do you change your root question? You have to stick to your question? ನೀವು ಕೇಳಿರುವ ಪ್ರಶ್ನೆಗೆ ಉತ್ತರ ಕೊಡುವ ಜವಾಬ್ದಾರಿ ಸರ್ಕಾರದ್ದಾಗಿದೆ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಯ ಹರಿಕಾರರಾದಂತಹ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಹೋರಾಟದ ಫಲವಾಗಿ ಇಷ್ಟು ಉದ್ಯೋಗಗಳು ಸೃಷ್ಟಿಯಾಗಿವೆ. ಈ ವರ್ಷದೊಳಗಾಗಿ ನಾವು ಎಲ್ಲಾ ಹುದ್ದೆಗಳನ್ನೂ ಭರ್ತಿ ಮಾಡುತ್ತೇವೆ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ಸಚಿವರು ಹೊರಗೆ ಪತ್ರಿಕಾಗೋಷ್ಠಿಯನ್ನು ನಡೆಸಿ ಅದರಲ್ಲಿ ನೀಡಿರುವ ಅಂಕಿ ಅಂಶಗಳು ಏನು ಇತ್ತು ಆ ಅಂಶಗಳು ಈಗ ಕೊಟ್ಟಿರುವ ಉತ್ತರದಲ್ಲಿಲ್ಲ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯವರ ಬೇಡಿಕೆ ಏನಿವೆ, ಅವುಗಳನ್ನೂ ಕೂಡ ಈಡೇರಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**(661) 12.06.2017 11.30 ಆರ್‌ಸಿ–ಎಕೆ**

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಹೈದರಾಬಾದ್–ಕರ್ನಾಟಕದ ಸಮಗ್ರ ಅಭಿವೃದ್ಧಿಯ ಹರಿಕಾರರಾದಂತಹ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಹೋರಾಟದ ಫಲವಾಗಿ ಇಷ್ಟು ಉದ್ಯೋಗಗಳು ಸೃಷ್ಟಿಯಾಗಿವೆ. ಈ ವರ್ಷದೊಳಗಾಗಿ ನಾವು ಎಲ್ಲಾ ಹುದ್ದೆಗಳನ್ನೂ ಭರ್ತಿ ಮಾಡುತ್ತೇವೆ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ಸಚಿವರು ಹೊರಗೆ ಪತ್ರಿಕಾಗೋಷ್ಠಿಯನ್ನು ನಡೆಸಿ ಅದರಲ್ಲಿ 22 ಸಾವಿರ ಹುದ್ದೆಗಳನ್ನು ಇಡೀ ರಾಜ್ಯದಲ್ಲಿ ತುಂಬುತ್ತೇವೆಂದು ಹೇಳುತ್ತಾರೆ. ಆದರೆ ಇವತ್ತಿನ ದಿವಸ ಸರ್ಕಾರ ನೀಡಿರುವ ಅಂಕಿ ಅಂಶಗಳು ಈಗ ಕೊಟ್ಟಿರುವ ಉತ್ತರದಲ್ಲಿಲ್ಲ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯವರ ಬೇಡಿಕೆ ಏನಿವೆ, ಅವುಗಳನ್ನೂ ಕೂಡ ಈಡೇರಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:–** ನಿಮ್ಮ ಪ್ರಶ್ನೆಯನ್ನು ಇನ್ನೊಂದು ಸಲ ಕೇಳಿ. ಮಾನ್ಯ ಸಚಿವರು ನೀವು ಹೇಳಿದ್ದನ್ನು ಕೇಳಿಸಿಕೊಳ್ಳಲಿಲ್ಲ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ಸಚಿವರು ಹೊರಗೆ ಪತ್ರಿಕಾಗೋಷ್ಠಿಯನ್ನು ನಡೆಸಿ ಅದರಲ್ಲಿ 22 ಸಾವಿರ ಹುದ್ದೆಗಳನ್ನು ಇಡೀ ರಾಜ್ಯದಲ್ಲಿ ತುಂಬುತ್ತೇವೆಂದು ಹೇಳುತ್ತಾರೆ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಇಡೀ ರಾಜ್ಯದಲ್ಲಿ ಅಷ್ಟು ಹುದ್ದೆಗಳು ಖಾಲಿ ಇವೆ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ಸಚಿವರು ಈಗ ಕೊಟ್ಟಿರುವಂತಹ ಉತ್ತರದಲ್ಲಿ ಅದು ಇಲ್ಲ. ಈ ಅಂಕಿ–ಸಂಖ್ಯೆಗಳು ಅದಕ್ಕೆ ಟ್ಯಾಲಿ ಆಗುತ್ತಿಲ್ಲ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಟ್ಯಾಲಿ ಆಗದಿದ್ದರೆ ಟ್ಯಾಲಿ ಮಾಡಿ ಕೊಡುತ್ತೇನೆ.

**ಶ್ರೀ ಅಮರನಾಥ ಪಾಟೀಲ್:–** ಹಾಗಾದರೆ ಈಗ ನೀವು ಕೊಟ್ಟಿರುವಂತಹ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳುತ್ತೀರಾ? ಈ ಉತ್ತರವನ್ನು withdraw ಮಾಡಿ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಪತ್ರಿಕೆಯಲ್ಲಿ ಬಂದಂತಹ ಅಂಕಿ–ಸಂಖ್ಯೆಗಳು ಏನಿದೆ ಅದನ್ನು ನಾವು ಹೇಳಿರುತ್ತೇವೆ. ಅದು ಬಂದಿದೆ. ಕೆಲವು ಸಂದರ್ಭದಲ್ಲಿ ಪತ್ರಿಕೆಯವರೇ ಬರೆಯುವಂತಹ ಸಂದರ್ಭದಲ್ಲಿ 3 ಸಾವಿರದ ಬದಲು 4 ಸಾವಿರ ಎಂದು ಬರೆದಿರುತ್ತಾರೆ. ಪತ್ರಿಕೆಯಲ್ಲಿ ಒಂದೊಂದು ಸಲ ವ್ಯತ್ಯಾಸ ಆಗಬಹುದು. ಅಥವಾ ನಾವು ಹೇಳುವುದರಲ್ಲಿ ವ್ಯತ್ಯಾಸ ಆಗಿರಬಹುದು. ಅಧಿಕೃತವಾಗಿ ಒಟ್ಟು ಎಷ್ಟು ಹುದ್ದೆಗಳು ಖಾಲಿ ಇವೆ ಎಂಬುದನ್ನು ನಾವು ನಿಮಗೆ ಲಿಖಿತ ಮೂಲಕ ಕೊಡುತ್ತೇವೆ. ಒಟ್ಟು ಹುದ್ದೆಗಳನ್ನು ನಾವು ಭರ್ತಿ ಮಾಡುವುದಕ್ಕೆ ಎಲ್ಲಾ ಕ್ರಮಗಳನ್ನು ಕೈಗೊಂಡಿದ್ದೇವೆ.

**ಶ್ರೀ ಅಮರನಾಥ ಪಾಟೀಲ್:–** ಸನ್ಮಾನ್ಯ ಸಭಾಪತಿಯವರೆ, ನಮ್ಮ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ ಸಿಬ್ಬಂದಿಯವರಿಗೆ ಅವರ ಪದೋನ್ನತಿ ಹಾಗೂ ಅವರ ಬೇಡಿಕೆಗಳಿಗೂ ಸಹ ತಾವು ಸ್ಪಂಧಿಸುತ್ತಿಲ್ಲ. ಅವರು ಅದರ

" ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಗ್ಗೆ ಕೇಳುವುದಕ್ಕೆ ಹೋದರೆ ಅವರನ್ನು ಬೆದರಿಸುವಂತಹ ಕೆಲಸ ಆಗುತ್ತಿದೆ. ಆದುದರಿಂದ ಅವರ ಬೇಡಿಕೆಗಳನ್ನು ಸಹ ಸ್ಪಂದಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಹೆಚ್.ಆಂಜನೇಯ:-** ಆಯಿತು.

**ಶ್ರೀ ಅರುಣ ಶಹಾಪುರ:-** ಸನ್ಮಾನ್ಯ ಸಭಾಪತಿಯವರೆ, ಈ ವಿಷಯದ ಬಗ್ಗೆ ಒಂದು ಮಾಹಿತಿಯನ್ನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ. ಇದು ಬಹಳ ಗಂಭೀರವಾದಂತಹ ವಿಷಯವಿದೆ. ಈಗ ಕ್ರೈಸ್ತ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುವಂತಹ ಶಿಕ್ಷಕರು ಇವತ್ತು ಮತ್ತು ನಾಳೆ ಫ್ರೀಡಂ ಪಾರ್ಕ್‌ನಲ್ಲಿ ಹೋರಾಟ ಮಾಡಬೇಕೆಂದು ಒಂದು association form ಮಾಡಿಕೊಂಡು ಹೋರಾಟಕ್ಕೆ ಕರೆ ಕೊಟ್ಟಿದ್ದರು. ಈ ವಿಷಯ ಸನ್ಮಾನ್ಯ ಸಚಿವರಿಗೂ ಸಹ ತಿಳಿದಿದೆ. ಡಿಸೆಂಬರ್ ತಿಂಗಳಿನಲ್ಲಿ ಅದರ ಬಗ್ಗೆ ಒಂದು ಸುತ್ತಿನ ಮಾತುಕತೆ ಸಹ ನಡೆಸಿದ್ದೀರಿ. ಆದರೆ ಮೂರು ದಿವಸದ ಹಿಂದೆ ನಿಮ್ಮ ಅಧಿಕಾರಿಗಳು 'Team KREIS' ಎನ್ನುವಂತಹ ಟೆಲಿಗ್ರಾಂ ಗ್ರೂಪ್‌ನಲ್ಲಿ ನೇರವಾಗಿ ಶಿಕ್ಷಕರಿಗೆ ನೀವು ಈ ರೀತಿ association form ಮಾಡಿ ಫ್ರೀಡಂ ಪಾರ್ಕಿನಲ್ಲಿ ಹೋರಾಟ ಮಾಡಿದ್ದೇ ಆದರೆ ಅವರನ್ನು ನೌಕರಿಯಿಂದ ಕಿತ್ತು ಹಾಕಿ ಎಂದು ಹೇಳಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಇದು ಯಾವ ಪ್ರಾವಿಷನ್‌ನಲ್ಲಿದೆ?

(ಗೊಂದಲ)

**ಸಭಾಪತಿಯವರು:-** ಇದು 371(ಜೆ) ವಿಷಯ.

**ಶ್ರೀ ಅರುಣ ಶಹಾಪುರ:-** ಅವರನ್ನು ನೌಕರಿಯಿಂದ ತೆಗೆದುಹಾಕಿ ಎಂದು ನಿಮ್ಮ ಅಧಿಕಾರಿಗಳು ಹೆದರಿಸುತ್ತಿದ್ದಾರೆ. ಇದಕ್ಕೆ ನೀವು ಸ್ಪಷ್ಟವಾದಂತಹ ಉತ್ತರ ಕೊಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಲಿಖಿತವಾಗಿ ಪ್ರಶ್ನೆ ಕೇಳಿದ್ದಾರೆ, ಆ ಪ್ರಶ್ನೆಯೊಳಗೆ ಉಪ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಸರ್ಕಾರದ ಹತ್ತಿರ ಅವರು ಕೇಳಿದಂತಹ ಉಪ ಪ್ರಶ್ನೆಗೆ ಉತ್ತರ ರೆಡಿ ಇರಬಹುದು ಅಥವಾ ಇಲ್ಲದೆ ಇರಬಹುದು. ರೆಡಿ ಇದ್ದರೆ ಉತ್ತರ ಹೇಳುತ್ತಾರೆ ಇಲ್ಲದಿದ್ದರೆ ಸ್ವಲ್ಪ ಸಮಯ ತೆಗೆದುಕೊಂಡು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆನಂತರ ಉತ್ತರವನ್ನು ಕೊಡುತ್ತಾರೆ. ಮಾನ್ಯ ಸಚಿವರು ಅವರ ಪ್ರಶ್ನೆಗೆ ಉತ್ತರ ರೆಡಿ ಇದ್ದರೆ ಕೊಡಿ, ಇಲ್ಲದಿದ್ದರೆ ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡಿ.

**ಶ್ರೀ ಹೆಚ್.ಆಂಜನೇಯ:-** ಆಯಿತು ಕಳುಹಿಸಿ ಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ 2787**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ತಾರಾ ಅನೂರಾಧ:-** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳಿದಂತಹ ಪ್ರಶ್ನೆ ಏನೆಂದರೆ, ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಜಾತಿ ಗಣತಿ ಕಾರ್ಯ ಪ್ರಾರಂಭವಾಗಿದ್ದು ಯಾವಾಗ: ಸದರಿ ಜಾತಿ ಗಣತಿಗೆ ಯಾವ ನೌಕರರನ್ನು ಬಳಸಿಕೊಳ್ಳಲಾಗಿದೆ ಎಂಬ ಪ್ರಶ್ನೆಗೆ ಉತ್ತರವಾಗಿ ರಾಜ್ಯದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು 2015ರಲ್ಲಿ ಪ್ರಾರಂಭಿಸಲಾಯಿತು ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಈ ಜಾತಿ ಗಣತಿಗೆ ಯಾವ ನೌಕರರನ್ನು ಬಳಸಿಕೊಳ್ಳಲಾಗಿದೆ ಎಂಬ ಪ್ರಶ್ನೆಗೆ ಸಮೀಕ್ಷೆಯ ಗಣತಿ ಕಾರ್ಯವನ್ನು ನಿರ್ವಹಿಸಲು ಶಿಕ್ಷಣ ಇಲಾಖೆಯ ಶಿಕ್ಷಕರನ್ನು ಗಣತಿದಾರರನ್ನಾಗಿ ನೇಮಕ ಮಾಡಿಕೊಳ್ಳಲಾಗಿತ್ತು. ಸಮೀಕ್ಷಾ ಕಾರ್ಯವನ್ನು ಉಸ್ತುವಾರಿ ಮತ್ತು ಮೇಲ್ವಿಚಾರಣೆ ಮಾಡಲು ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಪೌರಾಡಳಿತ, ನಗರಾಭಿವೃದ್ಧಿ, ಆರ್ಥಿಕ ಮತ್ತು ಸಾಂಖ್ಯಿಕ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ/ನೌಕರರುಗಳ ಸೇವೆಯನ್ನು ಬಳಸಿಕೊಳ್ಳಲಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಪಾಪ ಶಿಕ್ಷಕರನ್ನು ರಜಾ ದಿವಸಗಳಲ್ಲಿಯೂ ಸಹ ಅವರನ್ನು ಬಿಡುವುದಿಲ್ಲ. ಈ ಸದನದಲ್ಲಿ ಅನೇಕ ಶಿಕ್ಷಕರುಗಳಿದ್ದಾರೆ. ಆದರೆ ನೀವು ಎಲ್ಲರಿಗೂ ಸೇರಿ ಅತ್ಯಂತ ಕಡಿಮೆ ಗೌರವ ಧನವನ್ನು ಕೊಡುತ್ತಿದ್ದೀರಿ ಎಂದು ಹೇಳಲ್ಪಟ್ಟಿದ್ದೇನೆ, ಹಾಗೂ ಆ ಹಣ ಇನ್ನೂ ಸಹ ಸಿಕ್ಕಿಲ್ಲ ಎನ್ನುವಂತಹ ಕೂಗಿದೆ. ಅದಕ್ಕೆ ಮಾನ್ಯ ಸಚಿವರು ಏನು ಹೇಳುತ್ತಾರೆಂದು ತಿಳಿಸಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಜಾತಿ ಗಣತಿಯ ವರದಿ ಸಿದ್ಧವಾಗಿದೆಯೇ, ವರದಿಯನ್ನು ಯಾವಾಗ ಬಹಿರಂಗ ಪಡಿಸಲಾಗುವುದು ಎಂದು ಕೇಳಿದಾಗ ಪ್ರತೀ ಸಾರಿಯು ನೀವು ಹೇಳುವುದು ಮುಂದಿನ ಸಲ ಅಧಿವೇಶನದಲ್ಲಿ ಬಿಡುಗಡೆ ಮಾಡುತ್ತೇವೆ, ಮುಂದಿನ ಬಜೆಟ್‌ನಲ್ಲಿ ಬಿಡುಗಡೆ ಮಾಡುತ್ತೇವೆ, ಯಾವ ಸರ್ಕಾರವು ಮಾಡದ ಮೂರು ದಶಕದ ಮೇಲೆ ನಾವು ಜನಗಣತಿಯನ್ನು ಮಾಡುತ್ತಿದ್ದೇವೆ ಎಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಆದರೆ ಇನ್ನು

ಏಕೆ ವರದಿಯನ್ನು ಬಿಡುಗಡೆ ಮಾಡಲಿಲ್ಲ ಎನ್ನುವುದರ ಬಗ್ಗೆ ಸರಿಯಾದಂತಹ ಉತ್ತರವನ್ನು ಕೊಟ್ಟಿಲ್ಲ. ಅಡ್ಡ ಗೋಡೆಯ ಮೇಲೆ ದೀಪವನ್ನು ಇಟ್ಟಿದ್ದಾರೆ. ನನಗನ್ನಿಸುವುದು ಬಿಡುಗಡೆ ಮಾಡಿದರೆ ದೊಡ್ಡ ಗಂಡಾಂತರ ಬರುತ್ತದೆ ಎಂದು ಮಾಧ್ಯಮಗಳು ವರದಿ ಮಾಡಿವೆ, ಅದಕ್ಕೋಸ್ಕರ ಹೆದರಿಕೊಂಡಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಹಿಂದುಳಿದವರ ಬಗ್ಗೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಬಗ್ಗೆ, ಬಡವರ ಬಗ್ಗೆ ತುಂಬಾ ಕಾಳಜಿ ಇದೆ. ಅದಕ್ಕೋಸ್ಕರ ಜನಗಣತಿ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಎರಡು ವರ್ಷವಾದರೂ ಮಾಡಿಲ್ಲ. ಮೊದಲು ನಾವು ಕೇಳಿದ ಪ್ರಶ್ನೆಗೆ 200 ಕೋಟಿ ರೂಪಾಯಿಗಳನ್ನು ಖರ್ಚಿಗೆ ಇಟ್ಟಿದ್ದೇವೆಂದು ಹೇಳಿದ್ದಿರಿ. ಈಗಾಗಲೇ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗಾಗಿ ಇಲ್ಲಿಯವರೆಗೆ ರೂ. 148.74 ಕೋಟಿ ರೂಪಾಯಿಗಳಷ್ಟು ವೆಚ್ಚ ಮಾಡಲಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದೀರಿ. ಆದರೂ ಸಹ ವರದಿಯನ್ನು ಬಿಡುಗಡೆ ಮಾಡಿಲ್ಲ, ಯಾವಾಗ ಮಾಡುತ್ತೀರಿ? ಯಾವ ದಿನಾಂಕ ನಿಗಧಿ ಪಡಿಸುತ್ತೀರಿ? ಪುನಃ ಇನ್ನು ಒಂದು ವರ್ಷದಲ್ಲಿ ಬಿಡುಗಡೆ ಮಾಡುತ್ತೇವೆಂದು ಹೇಳಬೇಡಿ. ಆಮೇಲೆ ಮಾಧ್ಯಮದವರ ಮೇಲೆ ಹೇಳಬೇಡಿ. ಇಲ್ಲಿ ನೀವು 6 ಸಾವಿರ ಎಂದು ಉತ್ತರ ಕೊಡುತ್ತೀರಿ, ಆದರೆ ಪತ್ರಿಕಾ ಘೋಷ್ಠಿಯಲ್ಲಿ 22 ಸಾವಿರ ಹುದ್ದೆಗಳನ್ನು ತುಂಬುತ್ತೇವೆಂದು ಹೇಳುತ್ತೀರಿ. ನೀವು ಹೇಳುವಂತಹ ಉತ್ತರದಲ್ಲಿ ಅಜ–ಗಜಾಂತರವಿದೆ. ಆದುದರಿಂದ ದಯವಿಟ್ಟು ನೀವೇ ನಮ್ಮ ಸಂದೇಹಗಳಿಗೆ ಉತ್ತರವನ್ನು ಕೊಡಬೇಕು.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಸಂಬಂಧ ಇಲ್ಲದೆ ಇರುವಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಅದರ ಬಗ್ಗೆ ಹೇಳುತ್ತೇನೆ. ಏಕೆಂದರೆ ಮಾಧ್ಯಮದವರು ಅದರ ಬಗ್ಗೆಯು ಸಹ highlight ಮಾಡುತ್ತಾರೆ. ಸುಮಾರು 6,800 ಹುದ್ದೆಗಳು ಏನಿವೆ ಅದು ಹೈದ್ರಾಬಾದ್ ಕರ್ನಾಟಕಕ್ಕೆ ಸೇರಿದಂತಹ ಹುದ್ದೆಗಳು. ಸುಮಾರು 20,000 ಹುದ್ದೆಗಳು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರುವಂಥದ್ದು. ಅವರು ಅಂಕಿ–ಸಂಖ್ಯೆ ಸರಿ ಇಲ್ಲವೆಂದು ಹೇಳಿದರು. ಒಂದು ವೇಳೆ ಒಂದರಿಂದ ಎರಡು ಸಾವಿರ ಹೆಚ್ಚು ಕಡಿಮೆ ಆಗಿರಬಹುದು. ಅದನ್ನು ಸರಿಪಡಿಸಿ ಹೇಳುತ್ತೇನೆಂದು ಹೇಳಿದ್ದೇನೆ. ಹಾಗಾಗಿ ಗೊಂದಲಕ್ಕೀಡಾಗುವಂತಹ ಪ್ರಶ್ನೆ ಬೇಡ. ಯಾವ ಶಿಕ್ಷಕರಿಂದ ನಾವು ರಾಜ್ಯದಲ್ಲಿ ಜನಗಣತಿ ಸಮೀಕ್ಷೆಯನ್ನು ಮಾಡಿಸಿದ್ದೇವೆಯೋ ಅವರೆಲ್ಲರಿಗೂ ಸಹ ಪೂರ್ಣವಾಗಿ ಗೌರವಧನವನ್ನು ಕೊಡಲಾಗಿದೆ. ನಿಮಗೆ ಯಾರು ತಪ್ಪು ಮಾಹಿತಿಯನ್ನು ಹೇಳಿದರೋ ಗೊತ್ತಿಲ್ಲ. ಶಿಕ್ಷಕರನ್ನು, ಕಂದಾಯ ಇಲಾಖೆಯ ಅಧಿಕಾರಿಗಳನ್ನು ಯಾರು ಯಾರನ್ನು ಈ ಸಮೀಕ್ಷೆ ಕಾರ್ಯಕ್ಕೆ ಬಳಸಿಕೊಂಡಿದ್ದೆವು ಅವರೆಲ್ಲರಿಗೂ ಗೌರವಧನವನ್ನು ಬಿಡುಗಡೆ ಮಾಡಿದ್ದೇವೆ. ಭಾನುವಾರ ಸಮೀಕ್ಷೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಿದರೋ, ಸೋಮವಾರ ಸಮೀಕ್ಷೆ ಮಾಡಿದರೋ ಒಟ್ಟಿನಲ್ಲಿ ಶಾಲೆಗೆ ತೊಂದರೆ ಆಗದಂತೆ ರಜಾ ದಿನಗಳಲ್ಲಿ ಅವರ ಸೇವೆಯನ್ನು ಉತ್ತಮವಾದಂತಹ ಕಾರ್ಯಕ್ಕೆ ಬಳಸಿಕೊಂಡಿದ್ದೇವೆ, ಅವರು ಉತ್ತಮವಾಗಿ ಕೆಲಸ ನಿರ್ವಹಿಸಿದ್ದ ಕಾರಣ ಅವರಿಗೆ ಗೌರವಧನವನ್ನು ಬಹಳ ಗೌರವವಾಗಿ ಕೊಟ್ಟಿದ್ದೇವೆ. ಎಲ್ಲಿಯೂ ಸಹ ಬಾಕಿ ಉಳಿಸಿಕೊಂಡಿಲ್ಲ. ಎಷ್ಟು ಹಣವನ್ನು ಖರ್ಚು ಮಾಡಬೇಕೋ ಅಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ವರದಿ ಬರಬೇಕು. ವರದಿ ತಯಾರಿಸುವುದರಲ್ಲಿ ಸ್ವಲ್ಪ ಬರಬಹುದಾದಂತಹ ಅಂಕಿ-ಅಂಶಗಳು ಮತ್ತು ಮಾಹಿತಿಗಳನ್ನೆಲ್ಲಾ ಸಂಗ್ರಹ ಮಾಡಿಕೊಂಡು ಇನ್ನೇನು ಅದು ಬಿಡುಗಡೆಯ ಹಂತದಲ್ಲಿದೆ. ಯಾವ ತಾರೀಖಿನಂದು ವರದಿಯನ್ನು ಬಿಡುಗಡೆ ಮಾಡಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಈಗ ಜಾತಿ ಗಣತಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಚಿವರು ಇಬ್ಬರೂ ಸಹ ಕಳೆದ ನವೆಂಬರ್ ತಿಂಗಳಿನಲ್ಲಿ ನಡೆದಂತಹ ಅಧಿವೇಶನದಲ್ಲಿ ಡಿಸೆಂಬರ್ ಕೊನೆಯಲ್ಲಿ ಅಥವಾ ಜನವರಿ ತಿಂಗಳ ಮೊದಲನೇ ವಾರದಲ್ಲಿ ನಾವು ವರದಿಯನ್ನು ಬಿಡುಗಡೆ ಮಾಡುತ್ತೇವೆಂದು ವಿಧಾನ ಪರಿಷತ್ತಿನಲ್ಲಿಯೇ ಹೇಳಿದ್ದಾರೆ. ಆದರೆ ಡಿಸೆಂಬರ್ ತಿಂಗಳು ಕಳೆದು, ಜನವರಿ, ಫೆಬ್ರವರಿ, ಮಾರ್ಚ್, ಏಪ್ರಿಲ್, ಮೇ ತಿಂಗಳುಗಳು ಕಳೆದು ಈಗ ಜೂನ್ ತಿಂಗಳೂ ಸಹ ಮುಗಿಯುತ್ತಾ ಬಂದಿದೆ. Floor of the House ನಲ್ಲಿಯೇ ಹಿಂದುಳಿದವರ ಬಗ್ಗೆ, ದಲಿತರ ಬಗ್ಗೆ ಎಲ್ಲರ ಬಗ್ಗೆಯು ಜಾತಿ ಸಮೀಕ್ಷೆಯ ವರದಿಯನ್ನು ಕೊಡುತ್ತೇವೆಂದು ಹೇಳಿದ್ದಿರಿ. ಇತ್ತೀಚೆಗಷ್ಟೇ ಅಂದರೆ ಏಪ್ರಿಲ್ ತಿಂಗಳಿನಲ್ಲಿ ತಾವು ಪತ್ರಿಕೆಯಲ್ಲಿ ಕೊಟ್ಟಿರುವಂತಹ ಹೇಳಿಕೆಯನ್ನು ನೋಡಿದೆ. ಏನೆಂದರೆ, ನಾವು ಡಿಸೆಂಬರ್, ಜನವರಿ ತಿಂಗಳಿನಲ್ಲಿ ಜಾತಿ ಗಣತಿಯ ಸಮೀಕ್ಷೆ ವರದಿಯನ್ನು ಬಿಡುಗಡೆ ಮಾಡಬೇಕಾಗಿತ್ತು ಆದರೆ ಮಾಡಲಿಲ್ಲ. ಆದರೆ ಮೇ ತಿಂಗಳಿನಲ್ಲಿ ಖಂಡಿತವಾಗಿಯು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಿರಿ. ನೀವು ನಿಜವಾಗಿಯು ಜಾತಿ ಗಣತಿಯ ಸಮೀಕ್ಷೆ ಏನು ಮಾಡಿದ್ದೀರಿ ಇದರ ವರದಿಯನ್ನು ಬಿಡುಗಡೆ ಮಾಡುವುದಕ್ಕೆ ಯಾರದಾದರೂ ಅಡ್ಡಿ ಇದೆಯೇ? ನಿಮ್ಮ ಕಳಕಳಿಯ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ನಾನು ತಮ್ಮ ಬಳಿ ವೈಯಕ್ತಿಕವಾಗಿ ಮಾತನಾಡಿದಾಗ, ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿದಾಗ ಇಬ್ಬರೂ ಸಹ ಇದಕ್ಕೆ ಯ್ಯಾರೇ ವಿರೋಧ ಮಾಡಿದರೂ ಸಹ ನಾವು ಖಂಡಿತವಾಗಿಯು ವರದಿಯನ್ನು ಬಹಿರಂಗ ಪಡಿಸುತ್ತೇವೆಂದು ಹೇಳಿದ್ದೀರಿ. ಆದರೆ ಏಕೆ ಬಹಿರಂಗ ಮಾಡುತ್ತಿಲ್ಲ? ಮಾನ್ಯ ಸಭಾಪತಿಯವರೆ, ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷರಾದಂತಹ ಮಾನ್ಯ ಕಾಂತರಾಜು ಅವರ ಬಳಿ ಮಾತನಾಡಿದೆ. ಅವರು ಹೇಳಿದರು ಜಾತಿ ಗಣತಿಯ ಸಮೀಕ್ಷೆಯ ವರದಿ ರೆಡಿ ಇದೆ. ಸರ್ಕಾರ ಯಾವತ್ತು ಹೇಳುತ್ತದೆಯೋ ಆ ದಿವಸ ನಾವು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದರು. ಸಮಾಜ ಕಲ್ಯಾಣ ಇಲಾಖೆಯ ಜವಾಬ್ದಾರಿ ಸಿಗುವುದು ಅಷ್ಟು ಸುಲಭವಲ್ಲ. ಆದರೆ ನಿಮಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆ ಜವಾಬ್ದಾರಿ ಸಿಕ್ಕಿದೆ. ಇದನ್ನು ನೀವು ಒಂದು ಸವಾಲಿನ ರೂಪದಲ್ಲಿ ಸ್ವೀಕಾರ ಮಾಡಿ. ನಿಜವಾಗಿಯು ನೀವು ಇಂತಹ ದಿವಸ ವರದಿಯನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿ. ಇಲ್ಲವೆಂದರೆ, ತಮ್ಮ ಅಧಿಕಾರ ಉಳಿಸಿಕೊಳ್ಳುವುದಕ್ಕೋಸ್ಕರ ಒತ್ತಡಕ್ಕೆ ಮಣಿದು ತಲೆ ಬಾಗಿಸಬೇಕಾಗಿದೆ ಎಂದು ರಾಜ್ಯದ ಜನತೆ ತಿಳಿದುಕೊಳ್ಳುತ್ತಾರೆ. ಇಲ್ಲ, ವರದಿಯನ್ನು ಬಿಡುಗಡೆ ಮಾಡುವುದಾದರೆ ಮಾಡುತ್ತೇವೆಂದು ಹೇಳಿ, ಮಾಡುವುದಿಲ್ಲವೆಂದರೆ ಮಾಡುವುದಿಲ್ಲವೆಂದು ಹೇಳಿ. ನಿಮ್ಮನ್ನು ನಾವು ನಾಳೆಯೇ ವರದಿಯನ್ನು ಬಿಡುಗಡೆ ಮಾಡಿ ಎಂದು ಹೇಳುವುದಿಲ್ಲ. ಪ್ರತೀ ಮನೆಯ ಬಾಗಿಲಿನಲ್ಲಿ "ನಾಳೆ ಬಾ" ಎಂದು ಬೋರ್ಡ್ ಹಾಕಿರುವುದನ್ನು ನಾವು ನೋಡಿದ್ದೇವೆ. ಆದುದರಿಂದ "ನಾಳೆ ಬಾ" ಎನ್ನುವುದು ಬೇಡ. ಮಾಡುವುದಾದರೆ ಯಾವತ್ತು ವರದಿಯನ್ನು ಬಿಡುಗಡೆ ಮಾಡುತ್ತೀರಿ? ಇಲ್ಲವೆಂದರೆ ಇಂಥಿಂಥವರು ನಮಗೆ ತೊಂದರೆ ಕೊಡುತ್ತಿದ್ದಾರೆಂದು ನಿಮಗೆ ಅವರ ಹೆಸರುಗಳನ್ನು ಬಹಿರಂಗವಾಗಿ ಹೇಳುವುದಕ್ಕೆ ಆಗುವುದಿಲ್ಲವೆಂದರೆ ನಾನು ಬೇಕಾದರೆ ಹೇಳುತ್ತೇನೆ. ಬಿಡಿ. ನೀವು ಹೇಳುವುದಿಲ್ಲ. ಅದಕ್ಕೋಸ್ಕರ ಇವತ್ತಿನ ದಿವಸ ನಿಮ್ಮ integrity ಯನ್ನು ಪ್ರಶ್ನೆ ಮಾಡುವಂತಹ ಪರಿಸ್ಥಿತಿ ಬಂದಿದೆ. ಕೇವಲ ಕಳಕಳಿ ಇದ್ದರೆ ಸಾಕಾಗುವುದಿಲ್ಲ. ಅದರ ಜೊತೆಗೆ ಬದ್ಧತೆ ಬೇಕು. ಈ ವಿಚಾರದಲ್ಲಿ ಆ ಒಂದು ಬದ್ಧತೆಯನ್ನು ನೀವು ಪ್ರಕಟ ಮಾಡುತ್ತೀರಾ? ಯಾವಾಗ ವರದಿಯನ್ನು ಬಿಡುಗಡೆ ಮಾಡುತ್ತೀರಿ?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಹಾಕಿ, ಇದೇನು ಪ್ರಶ್ನೋತ್ತರ ವೇಳೆಯೇ?

**(662) 12.06.2017 KG.RN 11.40**

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಇದನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ನಿಗದಿಪಡಿಸಿ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಈಗಾಗಲೇ ಇದನ್ನು ಪ್ರಶ್ನೋತ್ತರ ಅವಧಿಗೆ 100 ಸಾರಿ ನಿಗದಿಪಡಿಸಿದೆ. ಆದರೆ, ಏನೂ ಪ್ರಯೋಜನವಾಗಿಲ್ಲ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಇದರಲ್ಲಿ ನಾವು ಹೇಳುವುದು ಸಹ ಇದೆ. ಅದಕ್ಕೆ ಇದನ್ನು ಅರ್ಧಗಂಟೆ ಕಾಲದ ಚರ್ಚೆಗೆ ನಿಗದಿಪಡಿಸಿ. ಇದರ ಬಗ್ಗೆ ಚರ್ಚೆ ಮಾಡೋಣ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರೆ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ವಿರೋಧ ಪಕ್ಷದ ನಾಯಕರು ಬೇರೆ. ನೀವೇ ಬೇರೆ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಇದನ್ನು ಇಲ್ಲವೆಂದು ಹೇಳುವುದಿಲ್ಲ. ನಾನು ಸಹ ಆ ಜಾಗದಲ್ಲಿ ಕೆಲಸ ಮಾಡಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ ಉತ್ತರ ಹೇಳಿ. ಮಾನ್ಯ ಸದಸ್ಯರೆ, ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ಉತ್ತರ ಬೇಡವೇ? ಮಾನ್ಯ ಸಚಿವರು ಉತ್ತರ ಹೇಳಲು ನಿಂತಿದ್ದಾರೆ. ಮಾನ್ಯ ಸಚಿವರಿಗೆ ಉತ್ತರ ಹೇಳುವುದಕ್ಕೆ ಬಿಡಿ.

(ಗೊಂದಲ)

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೆ, ಇಲಾಖೆಯು ಮಾನ್ಯ ಸಚಿವರ ಕೈಯಲ್ಲಿದೆ. ಅದರ ಅಧಿಕಾರ ಸನ್ಮಾನ್ಯ ಮುಖ್ಯ ಮಂತ್ರಿಯವರ ಕೈಯಲ್ಲಿದೆ.

(ಗೊಂದಲ)

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಅಧಿಕಾರ ನಮ್ಮ ಕೈಯಲ್ಲಿದೆ. ಆದರೆ, ಕೆಲವೊಂದು ಮುಖ್ಯವಾದಂತಹ decision ಗಳನ್ನು ಮಾತ್ರ ಸನ್ಮಾನ್ಯ ಮುಖ್ಯ ಮಂತ್ರಿಯವರೆ ತೆಗೆದುಕೊಳ್ಳುತ್ತಾರೆ. ಅದೇ ರೀತಿ, ಕೇಂದ್ರದಲ್ಲಿಯೂ ಸಹ ಎಲ್ಲಾ ಮಂತ್ರಿಗಳಿಗೂ ಅಧಿಕಾರ ಇರುತ್ತದೆ. ಆದರೆ, ಮಾನ್ಯ ಪ್ರಧಾನ ಮಂತ್ರಿಯವರಿಗೆ ಇರುವಂತಹ ಅಧಿಕಾರ ಬೇರೆ ಯಾವ ಮಂತ್ರಿಗೂ ಇರುವುದಿಲ್ಲ. ಅದೇ ರೀತಿಯಲ್ಲಿ ಇಲ್ಲಿಯೂ ಸಹ ಇರುತ್ತದೆ. ಮಾನ್ಯ ಮುಖ್ಯ ಮಂತ್ರಿಯವರು ನಮಗೆ ಕೊಟ್ಟಿರುವಂತಹ ಅಧಿಕಾರವನ್ನು ಬೇರೆ ಯಾವ ಮುಖ್ಯ ಮಂತ್ರಿಯವರು ಸಹ ಕೊಟ್ಟಿರುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಕಳಕಳಿಯ ಪ್ರಶ್ನೆಗಳನ್ನು ಕೇಳಿದ್ದಾರೆ. ಅದೇ ರೀತಿ ಮಾನ್ಯ ಸದಸ್ಯರಾದ ಶ್ರೀಮತಿ ತಾರಾ ಅನೂರಾಧರವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳ ಗಂಭೀರವಾದ ಪ್ರಶ್ನೆಗಳನ್ನು ಕೇಳಿದ್ದಾರೆ ಮತ್ತು ಇದಕ್ಕೆ ಯಾರ ಅಡ್ಡಿ ಆತಂಕ ಇದೆ? ಎನ್ನುವುದನ್ನು ಹೇಳಿ ಎಂದು ಕೇಳಿದ್ದಾರೆ. ನಮಗೆ ಯಾರ ಅಡ್ಡಿ ಆತಂಕಗಳು ಇಲ್ಲ. ಅದರಲ್ಲೂ ನಾವು ಕಾಂಗ್ರೇಸಿಗರು. ಸಾಮಾಜಿಕ ನ್ಯಾಯವನ್ನು ಕೊಡುವಂತಹ ಸಂದರ್ಭದಲ್ಲಿ ಯಾರಿಗೂ ಸಹ ಭಯಪಡದೆ ಶಕ್ತಿ ಇಲ್ಲದವರಿಗೆ. ಧ್ವನಿ ಇಲ್ಲದವರಿಗೆ, ಅನ್ಯಾಯಕ್ಕೆ ಒಳಗಾದಂತಹ ಸಮುದಾಯಗಳಿಗೆ, ಅಸಂಘಟಿತರಿಗೆ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಶಕ್ತಿಯನ್ನು ತುಂಬಬೇಕೆಂದು 70 ರ ದಶಕದಲ್ಲಿಯೇ 'ಹಾವನೂರು ವರದಿ'ಯನ್ನು ತಯಾರು ಮಾಡಿ ಜಾರಿಗೆ ತದಂತಹ ಸಂದರ್ಭದಲ್ಲಿ ಆಗಿನ ಮುಖ್ಯ ಮಂತ್ರಿಗಳಾದ ಮಾನ್ಯ ದಿವಂಗತ ದೇವರಾಜು ಅರಸುರವರು ಯಾವುದಕ್ಕೂ care ಮಾಡಲಿಲ್ಲ. ಅವರು ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿದು ಬದ್ದತೆಯನ್ನು ಮೆರೆದರು. ಅದೇ ಬದ್ದತೆಯನ್ನು, ಅದೇ ಸಾಮಾಜಿಕ ನ್ಯಾಯವನ್ನು ನಾವೆಲ್ಲರೂ ಎತ್ತಿ ಹಿಡಿಯ ಬೇಕಾಗಿದೆ.

(ಗೊಂದಲ)

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ದಿವಂಗತ ದೇವರಾಜು ಅರಸುರವರು ಮಾಡಿದರು. ಆದರೆ, ಈಗಿನ ಮಾನ್ಯ ಮುಖ್ಯ ಮಂತ್ರಿಯವರು ಆಗ ಎಲ್ಲಿದ್ದರು? ಅವರು ಆಗ ವಿರೋಧ ಮಾಡಿದರು. ಮಾನ್ಯ ಸಚಿವರು ಸುಮ್ಮನೆ ಮಾತನಾಡುತ್ತಾರೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೆ, ಇವರು ಯಾವಾಗಲೂ hit and run ಕೇಸ್. ಇವರು ಏನು ಹೇಳುತ್ತಾರೆ ಅದನ್ನು ಮಾಡುವುದಿಲ್ಲ. ಆದರೆ, ಪತ್ರಿಕೆಗಳಲ್ಲಿ ಮಾತ್ರ ಬರುತ್ತದೆ. ಇವರು ಯಾವಾಗಲೂ ಇದೇ ರೀತಿ ಮಾಡುತ್ತಾರೆ. ನಾವು ಕೇಳಿರುವ ಪ್ರಶ್ನೆಗೆ ಇವರು ಉತ್ತರ ಕೊಡುವುದಿಲ್ಲ. ನಾವು ಒಂದು ಕೇಳಿದರೆ, ಇವರು ಇನ್ನೊಂದು ಉತ್ತರ ಕೊಡುತ್ತಾರೆ. ಹೀಗಾದರೆ, ನಾವು ಏನು ಮಾತನಾಡಬೇಕು?

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೆ, ಇವರು ತಟ್ಟೆ ಮಾತ್ರ ಇಟ್ಟಿದ್ದಾರೆ. ಊಟ ಯಾವಾಗ ಬಡಿಸುತ್ತಾರೆ? Come to the point.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸದಸ್ಯರೆ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಹೇಳುತ್ತಾರೆ.

(ಗೊಂದಲ)

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ನಮಗೆ ಹಿಂದೆ–ಮುಂದೆ ಮಾತನಾಡುವಂತಹ ಅವಶ್ಯಕತೆ ಇಲ್ಲ. Telegraphic language ರೀತಿಯಲ್ಲಿ ಹೇಳಿದರೆ ಸಾಕು. ಯಾವಾಗ 'ವರದಿ' ಮಂಡಿಸುತ್ತೀರಾ ಅಥವಾ ಮಂಡಿಸುವುದಿಲ್ಲವೇ ಅದನ್ನು ಹೇಳಿಬಿಡಲಿ ಸಾಕು. ಅವರಿಗೆ ಬಹಳ ಕಾಳಜಿ ಇದೆ. ಅವರು ಮಾಡಿರುವಷ್ಟು ಕೆಲಸ ಬೇರೆ ಯಾರು ಮಾಡುವುದಕ್ಕೆ ಆಗುವುದಿಲ್ಲ. ಆ ರೀತಿ ಮಾಡಿದ್ದಾರೆ. ಆದರೆ, ಈ ಕೆಲಸವನ್ನು ಯಾವಾಗ ಮಾಡುತ್ತಾರೆ ಎಂಬುದನ್ನು ಹೇಳಲಿ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಹೇಳುತ್ತಾರೆ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಈಗ ನಮ್ಮ ವಿರೋಧಪಕ್ಷದ ನಾಯಕರು ಹೇಳಿದ ರೀತಿ ಎಲ್ಲವು ರೆಡಿ ಇದೆ. ನಾನು ಈ ಬಗ್ಗೆ ಮಾನ್ಯ ಕಾಂತರಾಜುರವರ ಬಳಿ ಮಾತನಾಡಿದ್ದೇನೆ. ಅವರು ಎಲ್ಲಾ ಮಾಹಿತಿ ಬಂದಿದೆ ಎಂದು ಹೇಳಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಗೂ ಕೆಲವು backward class ನಲ್ಲಿ ಯಾವುದೋ ಒಂದು ಮೀಸಲಾತಿಗೆ ಒಳಪಟ್ಟಿರುವಂತಹವರು ಸರ್ಕಾರಿ ನೌಕರರ ಸಂಪೂರ್ಣ ಮಾಹಿತಿ ಇಲಾಖೆಯಿಂದ ಬರಬೇಕಾದಂತಹ ಕೆಲವು ಮಾಹಿತಿ ಬಂದಿಲ್ಲವೆಂದು ಹೇಳಿದ್ದಾರೆ. ಅದನ್ನು ಕೊಡಲೇ ತರಿಸಿಕೊಳ್ಳಿ ಎಂದು ತಿಳಿಸಿರುತ್ತೇನೆ. ಅದು ಬರುತ್ತದೆ. ಅದು ಯಾವತ್ತು ಎನ್ನುವುದನ್ನು ನಾವು ಮತ್ತು ಮಾನ್ಯ ಮುಖ್ಯ ಮಂತ್ರಿಯವರು ಆಯೋಗದ ಅಧ್ಯಕ್ಷರ ಜೊತೆಗೆ ಒಂದು ಸಭೆಯನ್ನು ಮಾಡಿ ಮಾನ್ಯ ಮುಖ್ಯ ಮಂತ್ರಿಯವರ ನಾಯಕತ್ವದಲ್ಲಿ ಅಂತಿಮವಾದಂತಹ ಒಂದು ದಿನಾಂಕವನ್ನು ಅತೀ ಶೀಘ್ರದಲ್ಲಿಯೇ ಪ್ರಕಟಿಸುತ್ತೇವೆ. ಇದು ಬಹಳ ದಿವಸಗಳಿಂದ ಇದೆ. ಇದರಿಂದ ಸಾಮಾಜಿಕ ನ್ಯಾಯ ಮತ್ತು ಬಡವರಿಗೆ ಮೀಸಲಾತಿ ಬೇಕು. ಅಲ್ಲದೇ, ಇದರಿಂದ ಆರ್ಥಿಕ ಸವಲತ್ತು ಬೇಕಾಗಿದೆ. ಇದನ್ನು ವಿರೋಧ ಪಕ್ಷದವರು ಬಹಳ ಕಳಕಳಿಯಿಂದ ಕೇಳುತ್ತಿದ್ದಾರೆ. ಅದಕ್ಕೆ ನಾವು ಸಹ ಅಷ್ಟೇ ಕಳಕಳಿಯಿಂದ ಶೀಘ್ರದಲ್ಲಿಯೇ ಮಾಡುವುದಕ್ಕೆ ಖಂಡಿತವಾಗಿ ಪ್ರಯತ್ನವನ್ನು ಮಾಡುತ್ತೇವೆ. ಇದನ್ನು ಮಾನ್ಯ ಮುಖ್ಯಮಂತ್ರಿಯವರ ಬಳಿ ಮಾತನಾಡಿ ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇಲ್ಲಿ ಮಾನ್ಯ ಸಚಿವರು ಉತ್ತರ ಕೊಟ್ಟಿರುವುದಕ್ಕೆ ಬೆಲೆ ಇಲ್ಲವೇ? ಸರ್ಕಾರಿ ನೌಕರರ ಮಾಹಿತಿಯನ್ನು ತರಿಸಿಕೊಳ್ಳುತ್ತಿದ್ದೇವೆಂದು ಹೇಳಿದ್ದಾರೆ. ಅಂದರೆ, ಇದು ಇನ್ನೂ ಸಂಪೂರ್ಣವಾಗಿಲ್ಲವೆಂದು ಅವರ ಲೆಕ್ಕ.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ನಾನು ಆಯೋಗದವರಿಗೆ ಪತ್ರ ಬರೆದಿದ್ದೇನೆ. ಯಾವುದರ ವಿವರ ಬಂದಿಲ್ಲವೋ ಅದನ್ನು ಕೊಡಲೇ ತರಿಸಿಕೊಂಡು ಮಾಡಿ ಎಂದು ತಿಳಿಸಿದ್ದೇನೆ. ಉಳಿದ ಎಲ್ಲಾ ವಿವರಗಳು ಬಂದಿವೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅವರ ಉತ್ತರ ನೋಡಿ "ರಾಜ್ಯದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ದಿನಾಂಕ 11.04.2015 ರಿಂದ ಪ್ರಾರಂಭಿಸಿ ದಿನಾಂಕ 30.05.2015 ರಂದು ಪೂರ್ಣಗೊಂಡಿದೆ" ಎಂದು ಹೇಳಿದ್ದಾರೆ. ಆದರೆ, ಇನ್ನು ಮಾಹಿತಿಯನ್ನು ತರಿಸಿಕೊಳ್ಳುವುದಕ್ಕೆ ಪತ್ರ ಬರೆದಿದ್ದೇವೆಂದು ಇಲ್ಲಿ ಮತ್ತೆ ಹೇಳುತ್ತಾರೆ. ನಾನು ಅದಕ್ಕೆ ಹೇಳುತ್ತಿದ್ದೇನೆ. ನಾನು ಅವರ ಕಳಕಳಿಯ ಬಗ್ಗೆ ಖಂಡಿತವಾಗಿ ಪ್ರಶ್ನೆ ಮಾಡುವುದಿಲ್ಲ. ನಾನು ವೈಯಕ್ತಿಕವಾಗಿ ಮಾತನಾಡಿದರೂ ಸಹ, ಯಾವ ಕಾರಣಕ್ಕೂ ಇದನ್ನು ಬಿಡುವುದಿಲ್ಲವೆಂಬ ಮಾತನ್ನು ಹೇಳುತ್ತಿದ್ದೇನೆ. ಅವರ ಉತ್ತರದಲ್ಲಿ ಸ್ಪಷ್ಟವಾಗಿ ಕೊಟ್ಟಿದ್ದಾರೆ. ಇದನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ ಎಂದು ಹೇಳಿದ್ದಾರೆ. ಪೂರ್ಣಗೊಳಿಸಲಾಗಿದೆ ಎಂದು ಹೇಳಿದ ಮೇಲೆ ಇನ್ನು ತರಿಸಿಕೊಳ್ಳುತ್ತಿದ್ದೇವೆಂದು ಹೇಳಿದರೆ, ಈ ಉತ್ತರಕ್ಕೆ ಏನಾದರೂ ಅರ್ಥ ಇದೆಯೇ?

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಪೂರ್ಣಗೊಂಡಿದ್ದು ಏನೆಂದರೆ, ಈ ಎಲ್ಲಾ ಮಾಹಿತಿಗಳು ಸಂಗ್ರಹಣೆ ಮಾಡಿಕೊಂಡಿದ್ದೇವೆಂದು ಅರ್ಥ. ಆ ಮಾಹಿತಿಗಳ ಆಧಾರದ ಮೇಲೆ ಅವರು ಇನ್ನು ಅಧ್ಯಯನ ಮಾಡಬೇಕಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಏನನ್ನು ಅಧ್ಯಯನ ಮಾಡಬೇಕು?

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಯಾವ ಯಾವ ವರ್ಗದವರಿಗೆ ಏನೇನು ಆಗಿದೆ ಎಂಬುದನ್ನು ಕ್ರೋಢೀಕರಿಸಬೇಕಾಗುತ್ತದೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಕೆಲವರದ್ದು ತರಿಸಿಕೊಳ್ಳುತ್ತಿದ್ದೇವೆಂದು ಈಗ ಹೇಳಿದರು.

(ಗೊಂದಲ)

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಕೆಲವರ ಮಾಹಿತಿಯನ್ನು ಪೂರ್ಣವಾಗಿ ತರಿಸಿಕೊಂಡಿದ್ದಾರೆ. ಮಾಹಿತಿಯನ್ನು ತರಿಸಿಕೊಂಡ ಮೇಲೆ ಯಾವ ಯಾವ ವರ್ಗಗಳಿಗೆ ಏನೇನು ಆಗಿವೆ. ಅವರ ಸ್ಥಿತಿಗತಿಗಳು ಏನು ಎನ್ನುವುದರ ಬಗ್ಗೆ ಅವರು ಅಧ್ಯಯನ ಮಾಡಬೇಕು. ಆ ಮೇಲೆ ಕೆಲವು ಮಾಹಿತಿ ಇಲಾಖೆಯಿಂದ ಬಂದಿಲ್ಲವೆಂದು ಹೇಳಿದರು. ಅದನ್ನು ಸಹ ತರಿಸಿಕೊಳ್ಳಿ ಎಂದು ಹೇಳಿದ್ದೇವೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಪೂರ್ಣಗೊಳಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇನ್ನೇನು ತರಿಸಿಕೊಳ್ಳುತ್ತಾರೆ?

(ಗೊಂದಲ)

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಪ್ರತಿ ಮನೆ ಮನೆಗೂ ಹೋಗಿ ಮಾಹಿತಿಗಳನ್ನು ಸಂಗ್ರಹಣೆ ಮಾಡಿರುವಂತಹದ್ದು ಸರ್ವೆ ಅಲ್ಲವೇ? ಮತ್ತೆ ಅಧಿಕಾರಿಗಳಿಂದ ಮಾಹಿತಿಯನ್ನು ತರಿಸಿಕೊಳ್ಳುವಂತಹ ಪ್ರಶ್ನೆ ಇಲ್ಲಿ ಬರುವುದಿಲ್ಲ. ಪ್ರತಿಯೊಂದು ಜಾತಿಗಳ ಅಂಕಿ-ಅಂಶಗಳನ್ನು ಸಂಗ್ರಹಣೆ ಮಾಡುವುದಕ್ಕೆಂದೇ ಸರ್ವೆ ಮಾಡಲಾಗಿದೆ. ಹಾಗಾದರೆ, ಅವರು ಸಂಗ್ರಹಣೆ ಮಾಡಿರುವಂತಹದ್ದು ಬೋಗಸ್ ಅಲ್ಲವೇ? ಇನ್ನೂ ತರಿಸಿಕೊಳ್ಳುತ್ತೇವೆಂದರೆ, ಅವರು ಮಾಡಿರುವ ಸರ್ವೆ ಬೋಗಸ್ ಎಂದು ಅರ್ಥವಲ್ಲವೇ? Survey is more important, you have completed the survey. Survey ಆದ ಮೇಲೆ ಪ್ರಕಟಣೆ ಮಾಡಬೇಕು? ಈಗ ಮಾಹಿತಿಯನ್ನು ತರಿಸಿಕೊಳ್ಳುವ ಪ್ರಶ್ನೆ ಮುಗಿದು ಹೋಗಿದೆ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರೆ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರಿಗೆ ಉತ್ತರ ಹೇಳುವುದಕ್ಕೆ ಬಿಡಿ. ಇದು ಪ್ರಶ್ನೋತ್ತರ ಅವಧಿ. ಇಡೀ ವರದಿಯ ಮೇಲೆ ಚರ್ಚೆ ಮಾಡುವುದಕ್ಕೆ ಅಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಪೂರ್ಣ ಮಾಹಿತಿಯನ್ನು ಕ್ರೋಡೀಕರಿಸಿ ಪೂರ್ಣ ಮಾಹಿತಿಯನ್ನು ಸಂಗ್ರಹಣೆ ಮಾಡಿ ರೆಡಿಯಾಗಿದೆ ಎಂದು ಹೇಳಿ ಆಗಿದೆ. ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಭೆಯನ್ನು ಮಾಡಿ ಇದನ್ನು ಯಾವತ್ತು ಪ್ರಕಟಿಸಬೇಕು ಎನ್ನುವುದನ್ನು ನಾವು ಕೊಡಲೇ ತೀರ್ಮಾನ ಮಾಡುತ್ತೇವೆ. ಕೆಲವು ಮಾಹಿತಿಗಳು ಏನಾದರೂ ಬಂದಿರಬಹುದು. ನಾನು ಹೇಳಿದ್ದು ಸರ್ಕಾರಿ ನೌಕರರು ಎಷ್ಟು ಜನ ಇದ್ದಾರೆ? ಅವರು ಯಾವ ಯಾವ ಜಾತಿಯಲ್ಲಿ ಇದ್ದಾರೆ ಎಂದಷ್ಟೇ. ಅದು ಇದರಲ್ಲಿಯೇ ಬಂದಿರುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ...

(ಗೊಂದಲ)

**ಸಭಾಪತಿಯವರು:–** ಮಾನ್ಯ ಬಸವರಾಜ ಹೊರಟ್ಟಿಯವರೆ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಹೇಳಿ ಮುಗಿಸಲಿ. ಇದು ಪ್ರಶ್ನೋತ್ತರ ಅವಧಿ ನೋಡ್ಕೊಣ. ಇಡೀ ಇಲಾಖೆಯ ಬಗ್ಗೆ ಚರ್ಚೆ ಬೇಡ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಆ ಮಾಹಿತಿಗಳನ್ನು ಸಂಪೂರ್ಣವಾಗಿ ಕ್ರೋಡೀಕರಿಸಿ tabulation ಮಾಡುತ್ತಿದ್ದಾರೆ. ಅದು ಅತೀ ಶೀಘ್ರದಲ್ಲಿಯೇ ಆಗುತ್ತದೆ. ನಂತರ ಮಾನ್ಯ ಮುಖ್ಯ ಮಂತ್ರಿಯವರ ಉನ್ನತ ಮಟ್ಟದಲ್ಲಿ ಒಂದು ಸಭೆಯನ್ನು ಮಾಡಿ ಒಂದು ದಿನಾಂಕವನ್ನು ನಿಗದಿ ಮಾಡುತ್ತೇವೆ. ಖಂಡಿತವಾಗಿ ಅವರಿಗೆ ಎಷ್ಟು ಕಳಕಳಿ ಇದೆಯೋ, ಅಷ್ಟೇ ಕಳಕಳಿ ನಮಗೂ ಇದೆ. ಅದು ಆಗಬೇಕು. ಅದನ್ನು ನಾವು ನೀವು ಸೇರಿ ಮಾಡೋಣ.

(ಗೊಂದಲ)

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಅವರ ಸ್ಥಿತಿಗತಿಗಳ ಪರಿಸ್ಥಿತಿ ಬೇಕಾಗಿದ್ದರೆ ಅವರಿಗೆ ಯಾವಾಗ ಬೇಕಾದರೂ ಕೆಲಸ ಮಾಡಿಕೊಡಲಿ, ಏನು ಅನುಕೂಲ ಮಾಡಬೇಕೋ ಅದನ್ನು ಮಾಡಲಿ. ಈಗಾಗಲೇ ಜಾತಿಗಣತಿ ಮುಗಿದಿದೆ ಅಲ್ಲವೇ?

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮಾನ್ಯ ರಾಮಚಂದ್ರಗೌಡರೆ, ಸಾಕು ಬಿಡಿ. ಇದು ಪ್ರಶ್ನೋತ್ತರ ಅವಧಿ.

(ಗೊಂದಲ)

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಮುಗಿದಿರೋ ಜಾತಿಗಣತಿಯನ್ನು ಕೊಟ್ಟುಬಿಡಲಿ. ಅವರ ಸ್ಥಿತಿಗತಿಗಳನ್ನು ನಾವು ಕೇಳುತ್ತಿಲ್ಲ. ಆಮೇಲೆ ಅವರ ಸ್ಥಿತಿಗತಿಗಳ ಬಗ್ಗೆ ಚರ್ಚೆ ಮಾಡಲಿ. ಇವತ್ತು ಬೇಕಾಗಿರುವುದು ಜಾತಿಗಣತಿ. ನಮ್ಮಲ್ಲಿ ಎಷ್ಟು ಜಾತಿ ಇದೆ? ಅವುಗಳಲ್ಲಿ ಯಾರಾರು ಇದ್ದಾರೆ? ಎಷ್ಟು ಇದೆ? ಎಂಬುದನ್ನು ಕೊಟ್ಟು ಬಿಟ್ಟರೆ, ನಾವು–ಅವರು ಆ ಮೇಲೆ ಯಾರ್‍ಯಾರ ಸ್ಥಿತಿ ಯಾವ ರೀತಿ ಇದೆ, ಯಾವ ಯಾವ ಜಾತಿಯಲ್ಲಿ ಶ್ರೀಮಂತರು ಇದ್ದಾರೆ? ಯಾವ ಯಾವ ಜಾತಿಯಲ್ಲಿ ಬಡವರು ಇದ್ದಾರೆ? ಯಾವ ಯಾವ ಜಾತಿಯಲ್ಲಿ ನಿರ್ಗತಿಕರು ಇದ್ದಾರೆ? ಎಂಬುದನ್ನು ಆ ಮೇಲೆ ಸದನದಲ್ಲಿ ಚರ್ಚೆ ಮಾಡೋಣ. ಅದಕ್ಕೂ ಮೊದಲು ಜಾತಿಗಣತಿ ಬರಬೇಕು ಅಲ್ಲವೇ? ಅದು ಬಂದ ಮೇಲೆ ನಾವು ಚರ್ಚೆ ಮಾಡೋಣ.

**ಶ್ರೀ ಕೆ.ಆರ್.ರಮೇಶ್ ಕುಮಾರ್:–** ಮಾನ್ಯ ಸಭಾಪತಿಯವರೆ, ಮಾನ್ಯ ವಿ.ಎಸ್.ಉಗ್ರಪ್ಪನವರು ಹೇಳಿದ ಹಾಗೆ ಸದಸ್ಯರು ಬೇರೆ ಬೇರೆ ಅಭಿಪ್ರಾಯಗಳನ್ನು ಹೇಳಿದ್ದಾರೆ. ಇದು ಅರ್ಧಂಬರ್ಧ ಮಾಧ್ಯಮಗಳಲ್ಲಿ ಬರುವುದು ಬೇಡ. ಇದು ಬಹಳ ಗಂಭೀರವಾದಂತಹ ವಿಷಯ. ಇದಕ್ಕೆ ಪ್ರತ್ಯೇಕವಾದಂತಹ ಸಮಯವನ್ನು ನಿಗದಿ ಮಾಡಿ. ಪ್ರಶ್ನೋತ್ತರ ಅವಧಿಯಲ್ಲಿ ತೀರ್ಮಾನ ಮಾಡುವಂತಹ ವಿಷಯ ಇದಲ್ಲ. ಮಾನ್ಯ ಮುಖ್ಯ ಮಂತ್ರಿಯವರೇ ಸದನದಲ್ಲಿ ಹಾಜರಿದ್ದು ಉತ್ತರ ಕೊಡುವ ಹಾಗೆ ಮಾಡೋಣ. ನಾವು ಇಲ್ಲಿ ಮುಖ್ಯವಾಗಿ ಏನು ಚರ್ಚೆ ಮಾಡುತ್ತೇವೆ ಎನ್ನುವುದು ಮುಖ್ಯವಲ್ಲ. ಯಾರು ಇದರ ನಿರೀಕ್ಷೆಯಲ್ಲಿದ್ದಾರೆ, ಅವರಿಗೆ ಇದರಿಂದ ಒಳ್ಳೆಯದು ಆಗಬೇಕು ಮತ್ತು ಇದರಿಂದ ಅವರಿಗೆ ನೆಮ್ಮದಿ ಸಿಗಬೇಕು. ಆ ದೃಷ್ಟಿಯಿಂದ I think you can defer this matter.

**(663) 12.06.2017 11.50 ಸಿ.ಎಸ್–ಆರ್‌ಎನ್**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಆರೋಗ್ಯ ಸಚಿವರೆ, ತಾವು ಹೇಳುವುದು ಸರಿಯಾಗಿಯೇ ಇದೆ. ಆದರೆ ಈ ವಿಚಾರ ಈಗಾಗಲೇ ಸದನದಲ್ಲಿ ಚರ್ಚೆ ಆಗಿದೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಸಚಿವರು ಇಬ್ಬರೂ ನಾವು ಜನವರಿ ತಿಂಗಳಿನಲ್ಲಿ ಬಿಡುಗಡೆ ಮಾಡುತ್ತೇವೆ ಎನ್ನುವ ಮಾತನ್ನು ಈ ಸದನದಲ್ಲಿಯೇ ಹೇಳಿದ್ದಾರೆ. ಮತ್ತೇನೂ ಚರ್ಚೆಗೆ ಉಳಿದಿದೆ ಎನ್ನುವುದನ್ನು ತಾವೇ ಹೇಳಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಆರ್.ರಮೇಶ್ ಕುಮಾರ್:-** ಮಾನ್ಯ ಪ್ರತಿಪಕ್ಷದ ನಾಯಕರೆ, ನಿಮ್ಮ ಮಾತಿಗೆ ನನ್ನ ಸಹಮತ ಇದೆ. ಯಾವುದೇ ಹೆಪ್ಪುಗಟ್ಟಿದ ಸಮಾಜದಲ್ಲಿ ಒಂದು ಪ್ರಗತಿದಾಯಕ ನಿರ್ಣಯ ತೆಗೆದುಕೊಳ್ಳಬೇಕಾದರೆ ಅದಕ್ಕೆ ಹೇಳಿಕೊಳ್ಳಲು ಆಗದ ಕಷ್ಟಗಳು ಸಂಕಷ್ಟಗಳು ಇರುತ್ತವೆ. ದಿವಂಗತ ದೇವರಾಜ ಅರಸ್ ಅವರ ಕಾಲದಲ್ಲಿ ಲ್ಯಾಂಡ್ ರಿಫಾರ್ಮ್ ಆಕ್ಟ್ ಮಾಡಿದಾಗ, ಹಾವನೂರು ಕಮೀಷನ್ ವರದಿ ಬಂದಾಗ ನಾವು ಸಹ ಇದ್ದೆವು. ತಾವು ಹೇಳಿದಂತಹ ಒಂದು ಮಾತನ್ನು ನಾನು ಅಲ್ಲಗಳೆಯುವುದಿಲ್ಲ. ಅಂತಹ ಸ್ಥಿತಿ ಏನು ಉದ್ಭವ ಆಗಿದೆ, ಏಕೆ ಆಗಿದೆ, ಇದನ್ನು ಮಾಡುತ್ತೀರೋ ಇಲ್ಲವೋ ಅಥವಾ ಅದರಿಂದ ನಿಭಾಯಿಸಿಕೊಂಡು ಈಚೆಗೆ ಬರುತ್ತೇವೆಯೋ ಇಲ್ಲವೋ ಎನ್ನುವುದನ್ನು ಇಲ್ಲಿ ಹೇಳಬೇಕಾಗುತ್ತದೆ. ಅದಕ್ಕೆ ನಮಗೆ ಅವಕಾಶ ಕೊಡಿ, ಅಂದರೆ ಇಂತಹ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾದರೆ ಸಹಜವಾಗಿಯೇ ಸ್ಥಾಪಿತ ಹಿತಾಸಕ್ತಿಗಳು ಯಾರಿರುತ್ತಾರೆ ಅವರು ತಮ್ಮ ತಮ್ಮ ವರ್ಚಸ್ಸನ್ನು ಬೀರಿ ಇದನ್ನೆಲ್ಲ ಹಿಂದಕ್ಕೆ ಸರಿಸುವ ಪ್ರಯತ್ನ ಮಾಡುತ್ತಿರುತ್ತಾರೆ. ಮುಖ್ಯಮಂತ್ರಿಗಳಿಗೆ ಹೇಳಿದ ಹಾಗೆ ಮಾಡಲಿಕ್ಕೆ ಆಗಲಿಲ್ಲವೆಂದಲ್ಲಿ ಏನೋ ಒಂದು ಸ್ವಲ್ಪ ಸಮಸ್ಯೆ ಅಗಿದ್ದರೂ ಅದನ್ನು ಅವರ ಕಡೆಯಿಂದಲೇ ನೇರವಾಗಿ ಹೇಳಿಸಿ, ಎರಡು ಸದನಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡಬೇಕಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೇ, ನಾನು ಪ್ರಾರಂಭದಲ್ಲಿಯೇ ಸರ್ಕಾರಕ್ಕೆ ಇದನ್ನೆಲ್ಲ ಮಾಡಲು ಅಡ್ಡಿಗಳಿರಬಹುದು ಎನ್ನುವ ಮಾತನ್ನು ಹೇಳಿದ್ದೇನೆ. ಸರ್ಕಾರಕ್ಕೂ ಕೂಡ ಖಂಡಿತವಾಗಿ ಕಷ್ಟಗಳಿರುತ್ತದೆ. ಇಲ್ಲ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ.

**ಶ್ರೀ ಕೆ.ಆರ್.ರಮೇಶ್ ಕುಮಾರ್:-** ಈ ವಿಚಾರದ ಬಗ್ಗೆ ಪ್ರಶ್ನೋತ್ತರ ಅವಧಿಯಲ್ಲಿ ಚರ್ಚೆ ಮಾಡುವುದು ಬೇಡ ಎಂದು ನಾನು ಹೇಳುತ್ತಿರುವುದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಪ್ರಶ್ನೋತ್ತರದಲ್ಲಿ ಬೇಡ, ಅರ್ಧ ಗಂಟೆ ಚರ್ಚೆಯನ್ನೇ ಮಾಡೋಣ. ಆದರೆ ಈ ಮೊದಲೇ ಸದನದಲ್ಲಿ ಚರ್ಚೆ ಆಗಿ, ಈ ಬಗ್ಗೆ ಮುಖ್ಯಮಂತ್ರಿಗಳು ಸದನದಲ್ಲಿ ಪ್ರಾಮಿಸ್ ಮಾಡಿದ್ದಾರೆ ಅದರ ಬಗ್ಗೆ ನಾನು ಹೇಳುತ್ತಿದ್ದೇನೆ. ಆದರೂ ಸಹ ಈ ಸಂದರ್ಭದಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರು ಯಾವಾಗ ವರದಿ ಬಿಡುಗಡೆ ಮಾಡುತ್ತೇವೆಂಬ ಬಗ್ಗೆ ತಿಳಿಸಬೇಕೆಂದು ನಾನು ಅವರಲ್ಲಿ ಪ್ರಾರ್ಥನೆಯನ್ನು ಮಾಡುತ್ತೇನೆ. ಮತ್ತೆ ಇದರ ಬಗ್ಗೆ ಚರ್ಚೆಗೆ ಅವಕಾಶ ಬೇಕೆ, ಒಂದು ವೇಳೆ ಅರ್ಧ ಗಂಟೆ ಚರ್ಚೆ ಆಗಬೇಕೆಂದೆಲ್ಲಿ ಪುನಃ ಚರ್ಚೆ ಆಗಲಿ. ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಆರ್.ರಮೇಶ್ ಕುಮಾರ್:–** ಮಾನ್ಯ ಪ್ರತಿಪಕ್ಷದ ನಾಯಕರಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ಮುಖ್ಯಮಂತ್ರಿಗಳು ಇಂತಹ ತಿಂಗಳಿನಲ್ಲಿ ವರದಿ ಬಿಡುಗಡೆ ಮಾಡುತ್ತೇನೆಂದು ಹೇಳಿದ್ದು ನಿಜ. ನಾನು ರೆಕಾರ್ಡ್‌ನಲ್ಲಿರುವ ವಿಚಾರದಿಂದ ಹಿಂದಕ್ಕೆ ಸರಿಯುತ್ತಾ ಇಲ್ಲ. ಆ ರೀತಿ ಹೇಳಿ ಅದರಂತೆ ಏಕೆ ನಡೆದುಕೊಳ್ಳುವುದಕ್ಕೆ ಆಗಿಲ್ಲ, ಅದರಲ್ಲಿ ಅಂತಹದ್ದು ಏನಿದೆ ಎನ್ನುವುದನ್ನು ನಾವು ಹೇಳಬೇಕಲ್ಲವೇ ನಮಗೆ ಅದಕ್ಕೊಂದು ಅವಕಾಶವನ್ನು ಮಾಡಿಕೊಡಿ. ಹೇಳಿದ ಅವಧಿಗೆ ಮಾಡಲಿಕ್ಕೆ ಆಗಿಲ್ಲ, ನಮ್ಮಿಂದ ಆ ಲೋಪ ಆಗಿದೆ. ಆದರೆ ನಾವು ಅದನ್ನು ಮಾಡುತ್ತೇವೆಯೇ ಮಾಡುವುದಿಲ್ಲವೇ ಅಥವಾ ಮಾಡದಿರುವುದಕ್ಕೆ ಏನು ನಮಗೆ ಕಷ್ಟ ಎನ್ನುವ ವಿವರಗಳನ್ನು ನಿಮ್ಮ ಮುಂದೆ ಹೇಳುವುದಕ್ಕೆ ನಮಗೆ ಒಂದು ಅವಕಾಶ ಕೊಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ತಾವು ಹೇಳಿದ್ದು ಸರಿಯಾಗಿದೆ. ಆದರೆ ನಾನು ಇದೇ ಉತ್ತರವನ್ನು ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ನಿರೀಕ್ಷೆಯನ್ನು ಮಾಡುತ್ತೇನೆ. ಸಮಾಜಕಲ್ಯಾಣ ಸಚಿವರು ನಮಗೆ ಇಂತಹ ಸಮಸ್ಯೆಗಳಿವೆ, ಅದರ ಬಗ್ಗೆ ಚರ್ಚೆ ಮಾಡಬೇಕಾಗಿದೆ ಅರ್ಧ ಗಂಟೆ ಸಮಯ ಬೇಕಾಗಿದೆ ಎನ್ನುವುದನ್ನು ಹೇಳಲಿ. ನಾವು ಅರ್ಧ ಗಂಟೆ ಚರ್ಚೆಗೂ ತಯಾರಿದ್ದೇವೆ.

**ಶ್ರೀ ಕೆ.ಆರ್.ರಮೇಶ್ ಕುಮಾರ್:–** ವಿರೋಧ ಪಕ್ಷದ ನಾಯಕರೆ, ದಯಮಾಡಿ ನನ್ನನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನೀವು ಇದರಲ್ಲಿ ರಾಜಕಾರಣ ಮಾಡಲಿಲ್ಲ, ಪಕ್ಷಗಳ ವಿಚಾರವನ್ನು ಮಾತನಾಡಲಿಲ್ಲ. ನೀವೊಂದು ತಾತ್ವಿಕ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಇದಕ್ಕಾಗಿ ನಾನು ನಿಮ್ಮನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತಿದ್ಧೇನೆ. ಶತಮಾನಗಳಿಂದ ನಿರೀಕ್ಷೆಯಲ್ಲಿರುವ ಜನರಿಗೆ ಸಂಬಂಧಿಸಿದ ವಿಚಾರವಿದು. ಹೇಳಿದ ದಿನಾಂಕಕ್ಕೆ ವರದಿ ನೀಡದೆ ಲೋಪ ಆಗಿದೆ ಎನ್ನುವುದನ್ನು ನಾವು ಯಾರೇ ಹೇಳಿದರೂ ಸಹ ಅದು ಸರ್ಕಾರದ ಹೇಳಿಕೆ ಆಗುತ್ತದೆ. ನಾನು ಅನುಭವದ ಆಧಾರದ ಮೇಲೆ ಹೇಳುತ್ತಿದ್ದೇನೆ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಮಾಡಬೇಕಾದರೆ ಆಡಳಿತ ಪಕ್ಷ ಕಾಂಗ್ರೆಸ್‌ನಲ್ಲಿಯೇ ಒಂದು ಗುಂಪಿನವರು ವಿರೋಧ ಮಾಡಿದರು. ಆಗ ದೇವರಾಜ ಅರಸ್‌ರವರು ಪ್ರತಿಪಕ್ಷಗಳಲ್ಲಿದ್ದ ಪ್ರಗತಿಪರ ವಿಚಾರಧಾರೆಯನ್ನು ಹೊಂದಿದ್ದ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಕಾಯಿದೆಯನ್ನು ತಂದರು. ಇದನ್ನೆಲ್ಲ ಚರ್ಚೆ ಮಾಡುವುದಕ್ಕೆ ಪ್ರಶ್ನೋತ್ತರ ಅವಧಿಯಲ್ಲಿ ಆಗುವುದಿಲ್ಲ. ತಮ್ಮ ಮಾತುಗಳನ್ನು ನಾವು ಸಂಪೂರ್ಣವಾಗಿ ಗೌರವಿಸಿದ್ದೇವೆ.

ಶ್ರೀ **ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೇ, ನಾನು ನೋಟಿಸ್ ಕಳುಹಿಸಿ ಕೊಡುತ್ತೇನೆ. ತಾವು ದಯಮಾಡಿ ಈ ಅಧಿವೇಶನದಲ್ಲಿಯೇ ನನಗೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಪ್ರಶ್ನೆ ಸಂಖ್ಯೆ 2755/2724**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಗಳೇ, ನಾನು ಮತ್ತು ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಇಬ್ಬರೂ ಸೇರಿ ಈ ಪ್ರಶ್ನೆಯನ್ನು ಕೇಳಿದ್ದೆವು, ಆದರೆ ಉತ್ತರದಲ್ಲಿ ಇಲಾಖೆಯವರು ನನ್ನ ಹೆಸರನ್ನು ನಮೂದಿಸಿರುವುದಿಲ್ಲ.

ಕಳೆದ ಎರಡು ವಾರಗಳಿಂದ ರಾಜ್ಯದ ಜನರು ದಿಗ್ಭ್ರಮೆಗೊಂಡಿದ್ದಾರೆ. ಅಕ್ಕಿ ತಂದರೆ ಅದು ಪ್ಲಾಸ್ಟಿಕ್ ಅಕ್ಕಿ ಆಗಿರಬಹದೇ ಎನ್ನುವ ಸಂಶಯ, ಸಕ್ಕರೆ ತಂದರೆ ಅದರಲ್ಲಿ ಪ್ಲಾಸ್ಟಿಕ್ ಸಕ್ಕರೆ ಇರಬಹುದು ಎನ್ನುವ ಸಂಶಯ ಇದೆ. ಕೋಳಿಮೊಟ್ಟೆ ತಂದರೆ ಅದು ಪ್ಲಾಸ್ಟಿಕ್ ಕೋಳಿಮೊಟ್ಟೆ ಇರಬಹುದು ಎನ್ನುವ ಸಂಶಯ, ರಾಗಿ ತಂದರೆ ಅದರಲ್ಲಿ ಪ್ಲಾಸ್ಟಿಕ್ ರಾಗಿ ಇದೆ ಎನ್ನುವ ಸಂಶಯ ಬಂದಿದ್ದು, ಇಡೀ ರಾಜ್ಯದ ಜನತೆ ಶ್ರೀ ಸಾಮಾನ್ಯ ಊಟ ಮಾಡಬೇಕಾದರೆ ಊಟ ಮಾಡಬೇಕೆ ಬೇಡವೇ ಎಂದು ಯೋಚಿಸಬೇಕಾದ ಒಂದು ವಿಚಿತ್ರವಾದ ಸನ್ನಿವೇಶ ಎದುರಾಗಿದೆ. ಇದು ಬಹಳ ಗಂಭೀರವಾದ ಸಮಸ್ಯೆ. ದುರಾದೃಷ್ಟ ಏನೆಂದರೆ ಆರೋಗ್ಯ ಇಲಾಖೆಯಾಗಲಿ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಾಗಲಿ ಈ ವಿಚಾರವನ್ನು ಎಲ್ಲಿಯೂ ಪ್ರಸ್ತಾಪಿಸಿಲ್ಲ. ಈ ವಿಚಾರ ಮಾಧ್ಯಮಗಳ ಮೂಲಕ ಹೊರ ಬಂದಿದೆ. ಶ್ರೀ ಸಾಮಾನ್ಯರು ಈ ವಿಚಾರವನ್ನು ಮಾಧ್ಯಮದ ಮುಂದೆ ತಂದಾಗ ಮಾಧ್ಯಮದ ಮೂಲಕ ಇಂತಹ ವಿಚಾರಗಳು ಬೆಳಕಿಗೆ ಬಂದಿದೆ. ಹಾಗಾಗಿ ಇಲಾಖೆಗಳು ಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತಿಲ್ಲ ಎನ್ನುವುದನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇತ್ತೀಚಿನ ದಿವಸಗಳಲ್ಲಿ ಮಾರುಕಟ್ಟೆಗಳಲ್ಲಿ ಪ್ಲಾಸ್ಟಿಕ್ ಅಕ್ಕಿ, ಪ್ಲಾಸ್ಟಿಕ್ ಸಕ್ಕರೆ, ಪ್ಲಾಸ್ಟಿಕ್ ಮೊಟ್ಟೆ ಮತ್ತು ಪ್ಲಾಸ್ಟಿಕ್ ರಾಗಿಯ ಸರಬರಾಜು ಆಗುತ್ತಿರುವ ವಿಚಾರ ಮಾಧ್ಯಮಗಳಲ್ಲಿ ವಿಸ್ತೃತವಾಗಿ ಪ್ರಕಟಗೊಂಡಿರುವುದು ನಿಜವೇ ಎನ್ನುವ ನನ್ನ ಪ್ರಶ್ನೆಯನ್ನು ಸಚಿವರು ಒಪ್ಪಿಕೊಂಡಿದ್ದಾರೆ. ಹಾಗೆಯೇ ಅಂತಹವರ ಮೇಲೆ ಯಾವುದೇ ಕಾನೂನು ಕ್ರಮ ಜರುಗಿಸಿಲ್ಲವೆನ್ನುವ ಉತ್ತರವನ್ನು ಸಚಿವರು ನೀಡಿದ್ದಾರೆ. ಹಾಗೆಯೇ ಸಂಶಯಾಸ್ಪದ ಸಕ್ಕರೆ, 208, ಅಕ್ಕಿ 140, ಮೊಟ್ಟೆ 08 ಮತ್ತು ರಾಗಿ 17 ಹೀಗೆ ಆಹಾರ ಮಾದರಿಗಳನ್ನು ವಿಶ್ಲೇಷಿಸಲಾಗಿ ಯಾವುದೇ ಆಹಾರ ಪದಾರ್ಥ ಕೃತಕವಾಗಿ ಪ್ಲಾಸ್ಟಿಕ್‌ನಿಂದ ತಯಾಸಿರುವುದು ವರದಿಯಾಗಿಲ್ಲವೆಂದು ಸಚಿವರು ಹೇಳಿದ್ದಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಾಗೆಯೇ ನನ್ನ ಮೂರನೆಯ ಪ್ರಶ್ನೆಗೆ ನೀಡಿರುವ ಉತ್ತರವನ್ನು ಗಮನಿಸಿದಾಗ ಇದು ಅವರ ಆರೋಗ್ಯ ಇಲಾಖೆಗೆ ಬರುವುದಿಲ್ಲ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯಿದೆಯಡಿಯಲ್ಲಿ ಇದಕ್ಕೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ. ನನ್ನ ಮೂರು ಪ್ರಶ್ನೆಗಳಿಗೆ ಬಹಳ ಸಚಿವರು ತಾಂತ್ರಿಕವಾಗಿ ಉತ್ತರವನ್ನು ನೀಡಿದ್ದಾರೆ. ಮಾನ್ಯ ಆರೋಗ್ಯ ಸಚಿವರು ಬಹಳ ಹಿರಿಯರು ಹಾಗೂ ಅನುಭವಿ ಸಚಿವರು ಆದರೆ ರಾಜ್ಯದ ಜನರು ಇವತ್ತು ದಿಗ್ಭ್ರಮೆಯಲ್ಲಿದ್ದಾರೆ. ಊಟ ಮಾಡಬೇಕಾದರೆ ಸಂಶಯದಿಂದ ಇದ್ದಾರೆ. ಇಲ್ಲಿ ನಾವು ಕೇಳಿರುವ ಪ್ರಶ್ನೆ ಸಣ್ಣದಿದ್ದರೂ ಕೂಡ ಸಮಸ್ಯೆ ಬಹಳ ದೊಡ್ಡದಿದೆ. ಇದನ್ನು ಯಾರು ಪರಿಹರಿಸಬೇಕು, ನನಗನಿಸುವ ಹಾಗೆ somewhere it is the responsibility of Food & Civil Supply Department also. ಎರಡೂ ಇಲಾಖೆಗಳು ಸೇರಿ ಈ ಸಮಸ್ಯೆಯನ್ನು ಬಗೆಹರಿಸಿ ರಾಜ್ಯದ ಜನರು ನೆಮ್ಮದಿಯಿಂದ ಊಟ ಮಾಡಲು ಏನನ್ನು ಮಾಡುವಿರಿ ಎನ್ನುವುದನ್ನು ಹೇಳಬೇಕಾಗುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಗಳೇ, ಇದರಲ್ಲಿ ಮೂರು ಸಂಗತಿಗಳಿವೆ, ಒಂದು ಪತ್ರಿಕೆಗಳಲ್ಲಿ ವರದಿಯಾಗಿರುವ ವಿಚಾರ, ಎರಡನೆಯದು ವಿಜ್ಞಾನಿಗಳು ಹೇಳಿರತಕ್ಕ ಸಂಗತಿ, ಮೂರನೆಯದು ಇಬ್ಬರು ಸಚಿವರ ಹೇಳಿಕೆಗಳು. ಅದನ್ನು ನಾನಿಲ್ಲಿ ಓದಿ ಹೇಳುತ್ತೇನೆ. “ರಾಜ್ಯದ ಜನರನ್ನು ಆತಂಕಕ್ಕೆ ತಳ್ಳಿರುವ ಪ್ಲಾಸ್ಟಿಕ್ ಅಕ್ಕಿ ಕುರಿತು ಸಚಿವದ್ವಯರಲ್ಲಿಯೇ ಗೊಂದಲ ಉಂಟಾಗಿದೆ. ಪ್ಲಾಸ್ಟಿಕ್ ಅಕ್ಕಿಯ ಬಗ್ಗೆ ವೈಜ್ಞಾನಿಕವಾಗಿ ತಿಳಿಸಬೇಕಾದ ಕಾರಣ ತನಿಖೆ ನಡೆಸುತ್ತೇನೆ ಎಂದು ಆರೋಗ್ಯ ಸಚಿವರು ಹೇಳುತ್ತಾರೆ. ಆಹಾರ ಸಚಿವರಾದ ಶ್ರೀ ಯು.ಟಿ. ಖಾದರ್ ರವರು ಪ್ಲಾಸ್ಟಿಕ್ ಅಕ್ಕಿ ಆಗಿರುವುದಕ್ಕೆ ಸಾಧ್ಯವೇ ಇಲ್ಲ ಎಂದು ಹೇಳುತ್ತಾರೆ. ಹಾಗೆಯೇ ಆರೋಗ್ಯ ಸಚಿವರು ತಮ್ಮ ಉತ್ತರದಲ್ಲಿ ಈ ತರಹದ ಆಹಾರ ಪದಾರ್ಥಗಳನ್ನು ಗುರುತಿಸಲು ಸಾರ್ವಜನಿಕರಿಗೆ ಇಲಾಖಾ ಅಧಿಕಾರಿಗಳು ಮಾಧ್ಯಮಗಳ ಮೂಲಕ ಸೂಕ್ತ ಮಾಹಿತಿಯನ್ನು ನೀಡುತ್ತಿದ್ದಾರೆ ಎಂದು ಹೇಳಿದ್ದಾರೆ. ನನಗೆ ತಿಳಿದ ಹಾಗೆ ಪತ್ರಿಕೆಗಳಲ್ಲಿ ಎರಡು ರೀತಿಯ ವರದಿ ಪ್ರಕಟ ಆಗಿತ್ತು. ರಾಜ್ಯಾದ್ಯಂತ ಜನರಿಗೆ ಗೊಂದಲ ಉಂಟು ಮಾಡುವ ದೃಷ್ಟಿಯಿಂದ ಪ್ಲಾಸ್ಟಿಕ್ ಅಕ್ಕಿ, ಪ್ಲಾಸ್ಟಿಕ್ ಸಕ್ಕರೆ, ಪ್ಲಾಸ್ಟಿಕ್ ಮೊಟ್ಟೆ ಮತ್ತು ಪ್ಲಾಸ್ಟಿಕ್ ರಾಗಿ ಇವೆಲ್ಲ ಬರುತ್ತಿವೆ. ಇದನ್ನೆಲ್ಲ ಜನರಿಗೆ ಕ್ಲಾರಿಫೈ ಮಾಡಲು ಸರ್ಕಾರ ಏನು ಮಾಡುತ್ತಿದೆ ಎನ್ನುವುದು ನಮ್ಮ ಮೊದಲ ಆತಂಕ. ಮಂತ್ರಿಮಂಡಲದ ಇಬ್ಬರು ಸಚಿವರು ವಿರೋಧಾಭಾಸದ ಹೇಳಿಕೆಗಳನ್ನು ನೀಡುವುದು ಎಷ್ಟು ಸರಿ? ಚೆಕ್ ಮಾಡುತ್ತೇನೆ ಎನ್ನುವುದು, ಅದರಲ್ಲಿಯೂ ವಿಜ್ಞಾನಿಗಳು ಹೇಳುವುದನ್ನು ಕೇಳಿದರೆ ಗಾಬರಿಯಾಗುತ್ತದೆ.

**(664) 12.00 12-06-2017** ಎಂವಿ:ವಿಕೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**(ಮುಂದು)

ಹೇಳಿಕೆಯನ್ನು ಕೊಡುವಂಥದ್ದು, ಇದನ್ನು ತಾವು ಚೆಕ್ ಮಾಡುತ್ತೇವೆಂದು ಹೇಳುವಂಥದ್ದು, ವಿಜ್ಞಾನಿಗಳು ಹೇಳುವಂಥದ್ದನ್ನು ಕೇಳಿದರೆ ನಮಗೆ ಗಾಬರಿಯಾಗುತ್ತದೆ. ಹಾಗಾದರೆ ಆಹಾರ ಇಲಾಖೆ ಏನು ಮಾಡುತ್ತಿದೆ. ಜನರಲ್ಲಿ ಆತಂಕ ಸೃಷ್ಟಿಯಾಗಿರುವಂತಹ ಈ ಸಂದರ್ಭದಲ್ಲಿ, ಅದನ್ನು clarification ಮಾಡುವ ಕೆಲಸ ಮಾಡುವುದನ್ನು ಬಿಟ್ಟು, ನಮಗೆ ವೈಜ್ಞಾನಿಕವಾದ ಮಾಹಿತಿ ಇಲ್ಲವೆಂದು ಹೇಳುವ, ಇಲ್ಲವೇ ವಿಜ್ಞಾನಿಗಳು ಹೇಳಿದ ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆಂದು ಮಂತ್ರಿಗಳು ಕೂಡ ಅಭಿಪ್ರಾಯಪಡುತ್ತಾರೆ.

**Mr. CHAIRMAN:-** What is your question?

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ರಾಜ್ಯಕ್ಕೆ ಒಂದು clarification ಕೊಡುವಂತಹ ಅಗತ್ಯವಿದೆ, ಜನರಲ್ಲಿ ಆತಂಕವಿದೆ ಮತ್ತು ಗೊಂದಲವಿದೆ ಮತ್ತು ಅಕ್ಕಿಯನ್ನು ಅನ್ನ ಮಾಡಿ, ಮುದ್ದೆ ಮಾಡಿದರೆ ಅದು ಬಾಲ್ ತರಹ ಪುಟಿದೆಳುತ್ತದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇವತ್ತಿನ ದಿವಸ ವಿನಂತಿ ಮಾಡುವುದು, ವೈದ್ಯಕೀಯ ವಿಶ್ಲೇಷಣೆ ಮೂಲಕ ತಾವು ರಾಜ್ಯದ ಜನತೆಗೆ ಸರ್ಕಾರ ಒಂದು ಸ್ಪಷ್ಟ ಸಂದೇಶ ಕೊಡಬೇಕು. ವೈಜ್ಞಾನಿಕವಾಗಿ ಪರೀಕ್ಷೆ ಮಾಡಿಸಿ ಆಮೇಲೆ ವರದಿ ಕೊಡುತ್ತೀರಾ? ಅಥವಾ ಯಾವುದೇ ವೈಜ್ಞಾನಿಕ ವರದಿ ಇಲ್ಲದೆ ಪ್ಲಾಸ್ಟಿಕ್ ಅಕ್ಕಿ ಮತ್ತು ಮೊಟ್ಟೆ ಬರುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಸಂಗತಿಯನ್ನೇ ಜನರಿಗೆ ಹೇಳುತ್ತೀರಾ? ಈ ಬಗ್ಗೆ clarification ಕೊಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಈ ವಿಷಯವನ್ನು ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರ ಕೊಡಲಿ, ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

**ಶ್ರೀ ಕೆ.ಆರ್.ರಮೇಶ್ ಕುಮಾರ್:–** ಮಾನ್ಯ ಸಭಾಪತಿಯವರೆ, ಇಬ್ಬರು ಮಾನ್ಯ ಸಚಿವರು ತಮ್ಮ ಎಲ್ಲಾ ಸಾಧನೆಗಳನ್ನು ತಮ್ಮ ಮುಂದೆ ಹೇಳಿದ್ದಾರೆ. ನಾಯಿ ಮನುಷ್ಯನನ್ನು ಕಚ್ಚಿದರೆ ಅದು ನ್ಯೂಸ್ ಆಗುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನುಷ್ಯ ನಾಯಿಯನ್ನು ಕಚ್ಚಿದರೆ ಅದು ನ್ಯೂಸ್ ಆಗುತ್ತದೆ. ಈ ಎಲ್ಲಾ ಚರ್ಚೆಗಳಿಗೆ ಆಧಾರವೇನು? ಈ ಪ್ಲಾಸ್ಟಿಕ್ ಅಕ್ಕಿ, ಮೊಟ್ಟೆ ಮತ್ತು ಸಕ್ಕರೆ ಕುರಿತು ಮಾಧ್ಯಮಗಳಲ್ಲಿ ವರದಿ ಬಂದಿರುತ್ತದೆ. ಮಾಧ್ಯಮಗಳಲ್ಲಿ ವರದಿ ಬಂದ ಮೇಲೆ ನಮ್ಮ ಕರ್ತವ್ಯವೇನು? ಮಾನ್ಯ ಆಹಾರ ಸಚಿವರು ಆಹಾರ ಇಲಾಖೆಯನ್ನು ನೋಡುತ್ತಾರೆ, ನಾನು ಆರೋಗ್ಯ ಇಲಾಖೆಯನ್ನು ನೋಡುತ್ತೇನೆ. ಆಹಾರ ಸಂಸ್ಕರಣೆ ನನ್ನ ಜವಾಬ್ದಾರಿಗೆ ಬರುತ್ತದೆ. CFTRI *(Central Food Technological Research Institute*) ನಲ್ಲಿ ನಮಗೆ ಲಿಂಕ್ ಇರುತ್ತದೆ. ತನಿಖೆ ಮಾಡಿಸುವಂತಹ ಕೆಲಸವನ್ನು ನಾವು ಮಾಡಲೇಬೇಕು. ಈ ವಿಚಾರದ ಬಗ್ಗೆ ವೈಜ್ಞಾನಿಕವಾಗಿ ವರದಿಯನ್ನು ತರಿಸಿಕೊಳ್ಳಬೇಕೆಂದು ನಾನು ಹೇಳಿದ್ದೇನೆ. ಆ ತರಹ ಯಾವುದೂ ಇರುವುದಕ್ಕೆ ಸಾಧ್ಯವಿಲ್ಲ, ನಮ್ಮಲ್ಲಿ ಆ ತರಹ ಯಾವುದೂ ಸರಬರಾಜು ಆಗಿಲ್ಲ, ಇದರಲ್ಲಿ ಏನು ವಿರೋಧಭಾಸ ಇರುತ್ತದೆ. ನೀವು ಬಹಳ ತಿಳುವಳಿಕೆ ಉಳ್ಳವರು, ನಿಮಗೆ ಗೊಂದಲ ಇರುವುದು ಬೇಡ, ಸ್ಪಷ್ಟತೆ ಇರಲಿ. ನಮಗೆ ಈ ವರದಿಗಳು ಬಂದ ಮೇಲೆ, ಏಕಾಏಕಿ ನಾವು ದುರಹಂಕಾರದಿಂದ ಇಲ್ಲವೆಂದು ಹೇಳುವುದು ಸರಿಯಲ್ಲ, ಎಲ್ಲೆಲ್ಲಿ ಈ ತರಹ ಪ್ಲಾಸ್ಟಿಕ್ ಅಕ್ಕಿ ಸಿಗುತ್ತಿದೆ ಎಂದು ವರದಿಯಾಗಿದೆ, ಆ ಜಾಗಗಳಿಗೆ ಸಿಬ್ಬಂದಿಯನ್ನು ಕಳುಹಿಸಿ samples ಗಳನ್ನು ತರಿಸಿದ್ದೇವೆ. ಆ Samples ಗಳನ್ನು test ಮಾಡಿಸಿದ್ದೇವೆ. ಎಲ್ಲೆಲ್ಲಿ ಈ ತರಹದ ಆರೋಪಗಳು ಬಂದಿವೆ ಅವುಗಳು ಸಾಬೀತಾಗಿಲ್ಲ. ನಾವು ವೈಜ್ಞಾನಿಕವಾಗಿ ವರದಿಯನ್ನು ತೆಗೆದುಕೊಂಡಾಗ, ಒಂದು ಕೆ.ಜಿ. ಪ್ಲಾಸ್ಟಿಕ್ ಅಕ್ಕಿ ಮಾಡಬೇಕಾದರೆ, ಇನ್ನೂರು ರೂಪಾಯಿ ಬೇಕಾಗುತ್ತದೆ. ಮಾರ್ಕೆಟ್‌ನಲ್ಲಿ ಅಕ್ಕಿ ನಲವತ್ತು ರೂಪಾಯಿಗೆ ಸಿಗುತ್ತದೆ, ಆದುದರಿಂದ ಅದಕ್ಕೆ ಯಾವುದೇ base ಇಲ್ಲ. ಇದು ಮೊದಲು ಪ್ರಾರಂಭವಾದದ್ದು ಇಂಡೋನೇಷ್ಯಾ ಮತ್ತು ಜಪಾನ್‌ಗಳಲ್ಲಿ ನಂತರ ಮತ್ತಿತರ ಕಡೆಗಳಲ್ಲಿ ಪ್ರಾರಂಭವಾಯಿತು. ಆ ತರಹ ಯಾವುದೂ ಇಲ್ಲ, ಕೆಲವೊಮ್ಮೆ ಈ ತರಹದ ಪುಕಾರುಗಳು ಹುಟ್ಟುತ್ತವೆ. ಆದರೂ ಕೂಡ ಜನರ ಆರೋಗ್ಯದ ಕಡೆಗೆ ಗಮನ ಕೊಡುವಂಥದ್ದು ನಮ್ಮ ಜವಾಬ್ದಾರಿ, ಇದರಿಂದ ಏನು ಪರಿಣಾಮವಾಗುತ್ತದೆಂದರೆ. ಆ ಪ್ಲಾಸ್ಟಿಕ್ ಅಕ್ಕಿ ಇದ್ದು, ಅದನ್ನು ತಿಂದರೆ ಮಾತ್ರ ಅದರ ಪರಿಣಾಮ ಆರೋಗ್ಯದ ಮೇಲೆ ಬೀರುತ್ತದೆ, ಅದರಿಂದ ಏನೇನೂ ಆಗುತ್ತದೆಂದು ನಾನು ಬೆಳಿಗ್ಗೆ briefing ತೆಗೆದುಕೊಳ್ಳುವಾಗ ನಮ್ಮ ಅಧಿಕಾರಿಗಳನ್ನು ಕೇಳಿದೆ. ಅವರು ಉತ್ತರ ಕೊಡುವುದರಲ್ಲಿ, ಕನ್ನಡ ಭಾಷೆಯನ್ನು ಇನ್ನೂ ಸ್ಪಷ್ಟವಾಗಿ ಬಳಕೆ ಮಾಡಬಹುದಾಗಿತ್ತು. ಹೌದು ಮತ್ತು ನಿಜವೆಂದು ಹೇಳುವಾಗ, ಅದರ ಸತ್ಯಾಸತ್ಯತೆಯನ್ನು ಅರಿಯಬೇಕಾಗುತ್ತದೆ. ಮೊನ್ನೆ ಅಸೆಂಬ್ಲಿಯಲ್ಲಿ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ವ್ಯಾಕರಣವನ್ನು ಯಾರೂ ಸರಿಯಾಗಿ ಹೇಳಿಕೊಡುತ್ತಿಲ್ಲ ಎಂಬ ಬಗ್ಗೆ ಪ್ರಸ್ತಾಪವಾಯಿತು. ವಾಕ್ಯ ರಚನೆಯೂ ಇಲ್ಲ, ವ್ಯಾಕರಣಾನೂ ಇಲ್ಲ, ಅದರ ಅನಾಹುತಗಳಿಂದ ಕೆಲವು ತಪ್ಪು ಸಂದೇಶಗಳು ಹೋಗುತ್ತವೆ. ರಾಜ್ಯದ ಜನರಿಗೆ ಈ ಸದನದ ಮುಖೇನ ಸ್ಪಷ್ಟವಾದಂತಹ ಒಂದು ಸಂದೇಶವನ್ನು ರವಾನಿಸುತ್ತಿದ್ದೇವೆ. ಈ ತರಹದ ಯಾವುದೇ ಪದಾರ್ಥಗಳು ಬಳಕೆಯಲ್ಲಿ ಇಲ್ಲ, ಅದು ಸಾಧ್ಯವೂ ಇಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದುದರಿಂದ ಅದು ಇಲ್ಲದೇ ಇರುವುದರಿಂದ, ಅದರ ದುಷ್ಪರಿಣಾಮಗಳ ಪ್ರಶ್ನೆ ಉದ್ಭವಿಸುವುದಿಲ್ಲ, ಕ್ರಮ ಜರುಗಿಸಬೇಕಾದರೆ, ಆ ತರಹ ಯಾವುದಾದರು ಇದ್ದರೆ ಮಾತ್ರ ಕ್ರಮ ಜರುಗಿಸಬಹುದು. ಸುಮ್ಮನೆ ಯಾರ ಮೇಲೆ ಕ್ರಮ ಜರುಗಿಸುವುದು. ಇಷ್ಟೇ ವಿಚಾರ, ಮತ್ತೇನೂ ಇಲ್ಲ. ದಯಮಾಡಿ let us close this issue here.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹಿರಿಯರು ಮತ್ತು ಹೆಚ್ಚಿನ ಅನುಭವವನ್ನು ಹೊಂದಿದ್ದಾರೆ ಬಹಳ ಚೆನ್ನಾಗಿ ಹೇಳಿದ್ದಾರೆ. ಆದರೆ ನನ್ನದೊಂದು clarification ಇದೆ. ನಾಯಿ ಮತ್ತು ಮನುಷ್ಯ ಎಂದು ಹೇಳಿದ್ದಾರಲ್ಲ "When a *dog bites* a *man* that is not *news*, but when a *man* bites a dog that becomes *news*." ಎಂದು ಹೇಳಿದರು. ಅದನ್ನು ಎರಡು ಸಚಿವರ ಮಧ್ಯೆ ಎಂದು ಉದಾಹರಣೆ ಕೊಟ್ಟು ಹೇಳಿದರೋ ಅಥವಾ ಈ ರಾಜ್ಯದ ಜನತೆ ಮತ್ತು ಪತ್ರಿಕಾ ಮಾಧ್ಯಮದವರನ್ನು ಹೋಲಿಸಿ ಹೇಳಿದರೋ ಎಂಬುದು ಒಂದು clarity ಆಗಬೇಕು. ಎರಡನೆಯದಾಗಿ ಮಾನ್ಯ ಸಚಿವರು ಪ್ಲಾಸ್ಟಿಕ್ ಅಕ್ಕಿ ಕೆ.ಜಿ. ಇನ್ನೂರು ರೂಪಾಯಿ ಆಗುತ್ತದೆಂದು ಹೇಳಿದರು. ಅಕ್ಕಿ ಮತ್ತು ಸಕ್ಕರೆ ಕೆ.ಜಿ. 20 ರಿಂದ 40 ರೂಪಾಯಿ ಎಂದು ಹೇಳಿದರು. ನನಗೆ ಚೆನ್ನಾಗಿ ನೆನಪಿದೆ ನಾನು ಸಣ್ಣವನಿದ್ದಾಗ 1972ರಲ್ಲಿ ನಮ್ಮಲ್ಲಿ ಬರಗಾಲವಿತ್ತು, Food scarcity ಇತ್ತು, ಆಗ ನಮಗೆ ವಿದೇಶದಿಂದ ಗೋದಿ ಬರುತ್ತಿತ್ತು. ಆ ಗೋದಿ ಬಂದಾಗ, ಆ ಗೋದಿಯ ಜೊತೆಯಲ್ಲಿ ಇವತ್ತಿನ ದಿವಸ ಇರುವಂತಹ, ದುರಾದೃಷ್ಟಕರವಾದಂತಹ ಸಂಗತಿಯೇನೆಂದರೆ ಹುಲ್ಲು, ಹುಲ್ಲಿನ ಬೀಜ ಬರುತ್ತಿತ್ತು. ಮತ್ತೆ ನೀವು ಅದನ್ನು ಕಾಂಗ್ರೆಸ್ ಹುಲ್ಲು ಎಂದು issue ಮಾಡುತ್ತೀರಿ. ಈಗ ಜನಸಾಮಾನ್ಯರು ಅದನ್ನು ಕಾಂಗ್ರೆಸ್ ಹುಲ್ಲು ಎಂದು ಗುರುತಿಸುತ್ತಾರೆ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೆ, ಅವುಗಳನ್ನು ಪಾರ್ಥೇನಿಯಂ ಎಂದು ಹೇಳಲಿ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೆ, ಸಾಮಾನ್ಯ ಜನರು ಬಳಸುವಂತಹ ಶಬ್ದವನ್ನು ನಾನು ಬಳಕೆ ಮಾಡುತ್ತಿದ್ದೇನೆ. ರಘುನಾಥ ರಾವ್ ಮಲ್ಕಾಪೂರೆಯವರು ಕಾಂಗ್ರೆಸ್ ಹುಲ್ಲು ಎಂದರು ಎಂಬ ಬಗ್ಗೆ ದಯವಿಟ್ಟು ಕಾಂಗ್ರೆಸ್‌ನವರು ಅಪಾರ್ಥ ಮಾಡಿಕೊಳ್ಳಬಾರದು. ಆದರೆ, ನಮಗೆ ಅದರ ಬೀಜ ಗೋಧಿಯ ಮುಖಾಂತರ ಬಂತು. ಆ ಗೋಧಿಯ ಮುಖಾಂತರ ಬೀಜವನ್ನು ತಂದು, ಇವತ್ತಿನ ದಿವಸ ನಮ್ಮ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೇಶದಲ್ಲಿ ಆ ಕೆಟ್ಟ ಹುಲ್ಲು ಬೆಳೆಯುತ್ತಿದೆ. ಅದಕ್ಕೆ ನಾನು ಹೇಳುತ್ತಿದ್ದೇನೆ ಇದು ಯಾವುದಾದರೂ ವಿದೇಶದ ಕೈವಾಡವಿರಬಹುದು.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೆ, ಕರ್ನಾಟಕದಲ್ಲಿ ಕಾಂಗ್ರೆಸ್ ಕಡಿಮೆಯಾಗುತ್ತಿದೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೆ, ಹೌದು, ಮುಕ್ತವಾಗುತ್ತಿದೆ, ಅದು ಕರ್ನಾಟಕದಲ್ಲಿ ಮುಕ್ತ ಆಗಬೇಕು, ಆ ವಿಷಯ ಬೇರೆ. ಆದರೆ, ನಾನು ಹೇಳುತ್ತಿರುವುದು ಇದರಲ್ಲಿ ವಿದೇಶದ ಕೈವಾಡವಿದೆಯಾ ಎಂದು ಕೇಳಬಯಸುತ್ತೇನೆ.

**ಸಭಾಪತಿಯವರು:-** ನಿಮ್ಮ ಪ್ರಶ್ನೆ ಏನು?

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೆ, ಈ ಪ್ಲಾಸ್ಟಿಕ್ ಅಕ್ಕಿ, ಮೊಟ್ಟೆ ಮತ್ತು ಸಕ್ಕರೆಯನ್ನು ನಾವು ಬಳಸುವ ಅಕ್ಕಿ, ಸಕ್ಕರೆ ಮತ್ತು ಮೊಟ್ಟೆಯ ಜೊತೆ ಬೆರೆಸುವ ಕಾರ್ಯದಲ್ಲಿ ವಿದೇಶದವರೇನಾದರೂ ಕೈಜೋಡಿಸಿದ್ದಾರಾ ಎಂಬ ಬಗ್ಗೆ ನಮ್ಮ ದೇಶದ ವಾಸಿಗಳಿಗೆ ಮತ್ತು ಜನಗಳಿಗೆ ವಿಶೇಷವಾದಂತಹ ಸಂಶಯವಿದೆ. Man and Dog ಮತ್ತು Food and Plastic ಈ ಎರಡರ ಬಗ್ಗೆ ಮಾನ್ಯ ಸಚಿವರು ದಯವಿಟ್ಟು clear ಮಾಡಬೇಕೆಂದು ಕೇಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ನಾನು ಮೊದಲನೆಯ ದಿವಸವೇ ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ.

**ಸಭಾಪತಿಯವರು:-** ಅದಕ್ಕೆ ಇನ್ನು ಉತ್ತರ ಬಂದಿಲ್ಲ, ಉತ್ತರ ಬರುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ನಾನು ತಮ್ಮ ಮೂಲಕ ನೇರವಾಗಿ ಅದಕ್ಕೆ ಸ್ಪಷ್ಟನೆಯನ್ನು ಕೇಳಬಯಸುತ್ತೇನೆ. ನಿನ್ನೆ ದಿವಸ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಕೋಳಿ ಮೊಟ್ಟೆ ಪ್ಲಾಸ್ಟಿಕ್ ಎಂದು ರುಜುವಾತು ಆಗಿರುವಂತಹ ಸಂದರ್ಭವನ್ನು ನಾನು ನಿಮಗೆ ಹೇಳಲೇಬೇಕಾಗಿದೆ. ಈಗ ಆ ಕೋಳಿ ಮೊಟ್ಟೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತಿಂದಂತಹ ನಾಲ್ಕು ಜನ ಹೊಟ್ಟೆ ಬೇನೆಯಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ. ಇಡೀ ಕೋಳಿ ಮೊಟ್ಟೆಯನ್ನು ಓಪನ್ ಮಾಡಿ ನೋಡಿದರೆ, ಅದರಲ್ಲಿ yellow ಭಾಗ ಇಲ್ಲ ಮತ್ತು ನೀರಿಗೆ ಹಾಕಿದರೆ ಅದು ತೇಲುತ್ತಿದೆ, ಹಾಗಾಗಿ ಇಡೀ ಜನ ಅದು ಪ್ಲಾಸ್ಟಿಕ್ ಎಂದು ರುಜುವಾತು ಮಾಡಿದ್ದಾರೆ. ಈಗ ಆಸ್ಪತ್ರೆಗೆ ದಾಖಲಾದ ಮೇಲೂ ಅದನ್ನು ತಾವು ಇಲ್ಲವೆನ್ನುವುದಾದರೆ, ಇನ್ನು ನಾವು ಹೇಗೆ ನಮ್ಮ ಜನರ ಆತಂಕವನ್ನು ನಿವಾರಣೆ ಮಾಡಬೇಕಾಗಿದೆ. ಆ ನಾಲ್ಕು ಜನ ಕೃಷ್ಣರಾಜಪೇಟೆ ತಾಲ್ಲೂಕಿನ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇಡೀ ಜನರೇ ಅದನ್ನು ಪ್ರಯೋಗಕ್ಕೆ ಒಳಪಡಿಸಿದ್ದಾರೆ, ಅದು ಪ್ಲಾಸ್ಟಿಕ್ ಎಂದು ರುಜುವಾತಾಗಿದೆ. ಈಗ ಮದ್ದೂರಿನಲ್ಲೂ ಅಕ್ಕಿಗೆ ಸಂಬಂಧಪಟ್ಟ ಹಾಗೆ ಪ್ರಕರಣವಾಗಿದೆ. ಎಷ್ಟು ಜಗಿದರೂ, ತಿಂದರೂ ಆ ಅಕ್ಕಿ ಕರಗಲಿಲ್ಲ, ಹಾಗಾಗಿ ದಯಮಾಡಿ ಈ ವಿಚಾರದ ಬಗ್ಗೆ ತಾವು ಸಷ್ಟನೆ ಕೊಡಬೇಕು.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಹೇಳುತ್ತಾರೆ.

**ಶ್ರೀ ಕೆ.ಆರ್.ರಮೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ನಮ್ಮ ದೈನಂದಿನ ವ್ಯವಹಾರದಲ್ಲಿ ಪರಂಪರಾನುಗತವಾಗಿ ಬಂದಿರುವಂತಹ ಕೆಲವು ಮಾತುಗಳನ್ನು ನಾವು ಉಪಯೋಗ ಮಾಡುತ್ತೇವೆ. ಸಹಜವಾಗಿರುವಂತಹ ವಿಚಾರವಾದರೆ ಅದು ನ್ಯೂಸ್ ಆಗುವುದಿಲ್ಲ. ಸ್ವಲ್ಪ ಅಸಹಜವಾಗಿರುವಂಥದ್ದು ಎಂದರೆಎಲ್ಲರೂ ಕಿವಿಯನ್ನು ಆಗಲಿಸಿಕೊಂಡು ಕೇಳುತ್ತಾರೆ. ನಾನು ಆ ದೃಷ್ಟಿಯಿಂದ "It is no news, if dog bites man; it is a news, if a man bites dog" ಎಂದು ಹೇಳಿದೆ. All of us are colleagues. Including you, there are no dogs here. At best we are watch dogs. Watch dogs of the people's interest. First question is clarified and the second question is that, ಅವರು parthenium or congress grass ಎಂದು ಹೇಳುತ್ತಾರೆ. ಇದು ಅವತ್ತಿನ ದಿವಸದಲ್ಲಿ ಇಡೀ ವಿಶ್ವದಲ್ಲಿ developed Nations and under developed Nations ಎಂದು ದೊಡ್ಡ ಸಮರ ನಡೆಯುತ್ತಿತ್ತು. Under developed Nations ನಲ್ಲಿ progress ಅನ್ನು ಮತ್ತಷ್ಟು ಹಿಂದೆ ಸರಿಸಬೇಕೆಂದು ಹೇಳಿ PL-480 ಎನ್ನುವಂತಹ scheme ನಲ್ಲಿ ನಮಗೆ wheat supply ಮಾಡುತ್ತಿದ್ದರು, railway tracks ನಲ್ಲಿ ಆ ಗೋಧಿ ಮೂಟೆಗಳು ಬಂದಾಗ, ಅದು ಅನೇಕ ಕಡೆ ಸುರಿದಿದೆ. ಮೊದಲು railway track ಪಕ್ಕದಲ್ಲೆ ಈ ಪಾರ್ಥೇನಿಯಂ ಬಂದಿದ್ದು ಎಂದು. ಈ ಜಾಲಿ ಎಂದು ಏನು ಬಂದಿದೆ, Hercules ಎಂದು ಏನು ಬಂದಿದೆ. ಇವೆಲ್ಲವೂ ಕೂಡ indigenous ಯಾವುದೂ ಅಲ್ಲ. ಈ ತರಹದ designs International level

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಲ್ಲಿ ನಡೆಯುತ್ತಿರುತ್ತದೆ. ಶ್ರೀ ಸಿ.ಬಿ.ಚಂದ್ರಶೇಖರ್ ಎಂದು ಒಬ್ಬರು PL-480 ಗೋದಿ ಬಗ್ಗೆ, 'ಗಂಗೆಗೆ ಬಿದ್ದ ಬೆಂಕಿ' ಎಂದು ಒಂದು ಪುಸ್ತಕವನ್ನು ಬರೆದಿದ್ದಾರೆ, ತಾವು ಬೇಕಾದರೆ ಅದನ್ನು ತರಿಸಿಕೊಂಡು ಓದಿ. ಇದರಲ್ಲಿ ವಿದೇಶಿ ಕೈವಾಡಗಳಿದ್ದರೆ, ಅದು ನನಗೆ ಗೊತ್ತಿಲ್ಲ, ನಾನು ಹೇಗೆ ಅದರ ಬಗ್ಗೆ ಮಾತನಾಡಲಿ. ಆ ತರಹ ಇದ್ದರೆ ನಾವು ಕೇಂದ್ರ ಸರ್ಕಾರದವರಿಗೆ ಪತ್ರ ಬರೆಯುತ್ತೇವೆ. ಹೇಗೂ ನಮ್ಮ ಮಾನ್ಯ ಪ್ರಧಾನ ಮಂತ್ರಿಗಳು ಬಹಳ alert ಆಗಿ ಇದ್ದಾರೆ. ಪ್ರಪಂಚವನ್ನೆಲ್ಲಾ ಸುತ್ತುತ್ತಿದ್ದಾರೆ ಮತ್ತು ಬಹಳ ಹುಷಾರಾಗಿದ್ದಾರೆ, ಅವರಿಗೆ request ಮಾಡಿಕೊಂಡು, ಇದನ್ನು ಬೇಗ ಕಂಡು ಹಿಡಿದುಕೊಡಿ ಎಂದು ಹೇಳಿದರೆ, ಅವರು ಎರಡು ದಿವಸದಲ್ಲಿ ಪತ್ತೆ ಹಚ್ಚಿ ಬಿಡುತ್ತಾರೆ. ಆಮೇಲೆ, I will come back and report to the House.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೆ, ತಾವು ತರಹದ ಏನಾದರೂ ಪತ್ರ ಬರೆದಿದ್ದೀರಾ ಅಥವಾ ಬರೆಯುತ್ತೀರಾ?

**ಶ್ರೀ ಕೆ.ಆರ್.ರಮೇಶ್ ಕುಮಾರ್:–** ಮಾನ್ಯ ಸಭಾಪತಿಯವರೆ, ಪತ್ರ ಬರೆಯುವುದು ಅಗತ್ಯವಿಲ್ಲ, ಅಗತ್ಯವಿದ್ದರೆ ಬರೆಯುತ್ತೇವೆ.

**ಸಭಾಪತಿಯವರು:–** ಅವಶ್ಯಕತೆ ಇದ್ದರೆ ಎಂದು ಹೇಳಿದರು, ಅದು ನಿಮಗೆ ಕೇಳಿಸಲಿಲ್ಲ, ಸಾಕು ಮುಂದಿನ ಪ್ರಶ್ನೆಗೆ ಹೋಗೋಣ.

**ಶ್ರೀ ಕೆ.ಆರ್.ರಮೇಶ್ ಕುಮಾರ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದಂತಹ ಶ್ರೀ ಕೆ.ಟಿ.ಶ್ರೀಕಂಠೇಗೌಡರು specific ಆಗಿ ಹೇಳಿದ್ದಾರೆ. ಈಗ ಮಂಡ್ಯದಲ್ಲಿ ಆ ಕೋಳಿ ಯಾವುದೆಂದು ಪತ್ತೆ ಹಚ್ಚಬೇಕಾಗಿದೆ. ನಾನು ನಿಮ್ಮಲ್ಲಿ ಆ ತರಹದ ಕೋಳಿಗಳು ಇಲ್ಲವೆಂದುಕೊಂಡಿದ್ದೆ. ಬೇರೆ ತರಹದ ಕೋಳಿಗಳಿದ್ದವು ನಿಮ್ಮಲ್ಲಿ ಈ ರೀತಿಯ ಪ್ಲಾಸ್ಟಿಕ್ ಮೊಟ್ಟೆ ಇರುತ್ತವೆಂದು ಈಗ ಹೇಳುತ್ತಿದ್ದೀರಿ. I will check it out. It is all based on rumours, please trust me, ಸತ್ಯವನ್ನು ಸಾಯಿಸಿದರೆ ನನಗೇನೂ ಖುಷಿ ಸಿಗುವುದಿಲ್ಲ ಮತ್ತು ನನಗೇನೂ ನೆಮ್ಮದಿ ಸಿಗುತ್ತದೆ ಹೇಳಿ. ಇಷ್ಟೊಂದು ವರ್ಷಗಳ ಕಾಲ ಸಾರ್ವಜನಿಕ ಜೀವನದಲ್ಲಿದ್ದು, ಜನರಿಗೆ ಅಪಾಯ ಆಗುವುದೇನಾದರೂ ಇದ್ದರೆ, ಅದನ್ನು ನಾವು ಸಮರ್ಥಿಸಿಕೊಳ್ಳಬಹುದೇ, ಖಂಡಿತ ಆ ಕೆಲಸವನ್ನು ನಾನು ಮಾಡುವುದಿಲ್ಲ. ನೀವು ಹೇಳಿದ್ದೀರಾ, ಆದ್ದರಿಂದ ಮತ್ತೊಮ್ಮೆ I will try to get the information.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಯವರೆ, ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಗೊಂದಲ ಉಂಟಾಗಿದೆ. ಬಹುಶ: ಇವತ್ತಿನ ದಿವಸ ಆಹಾರ ಕಲಬೆರಕೆಗೆ ಸಂಬಂಧಪಟ್ಟ ಹಾಗೆ ಆಹಾರ ಮತ್ತು ಸಂಸ್ಕರಣ ಖಾತ್ರಿ ಕಾಯಿದೆ ಏನಿದೆ, ಅದು ಆಹಾರ ಇಲಾಖೆಯ ವ್ಯಾಪ್ತಿಯಲ್ಲಿದೆ. ಇದಕ್ಕೆ ಸಂಬಂಧಪಟ್ಟಂತೆ ಗೊಂದಲ ಸೃಷ್ಠಿಯಾದಾಗ ಸನ್ಮಾನ್ಯ ಆರೋಗ್ಯ ಸಚಿವರು ತಮ್ಮ ಮನೆಯಲ್ಲಿದ್ದಾಗ ಅದನ್ನು ಇಲಾಖೆಯ ಮುಖಾಂತರ ತನಿಖೆ ನಡೆಸಿ, ಸತ್ಯಾಂಶ ಹೇಳುತ್ತೇನೆಂದು ಹೇಳಿದರು.

**(665) 12.06.2017 12.10 LL-VK**

ಯು.ಟಿ.ಖಾದರ್(ಮುಂದು)

ಮಾನ್ಯ ಸದಸ್ಯರೊಬ್ಬರು ನ್ಯಾಯಬೆಲೆ ಅಂಗಡಿಯಲ್ಲಿ ಅನ್ನಭಾಗ್ಯ ಯೋಜನೆಯಡಿ ಕೊಡುವ ಅಕ್ಕಿಯಲ್ಲಿಯೂ ಸಹ ಪ್ಲಾಸ್ಟಿಕ್ ಅಕ್ಕಿ ಸಿಕ್ಕಿದೆಯೆಂದು ಹೇಳಿದಾಗ ನಾನು ಈ ವಿಚಾರದಲ್ಲಿ ಮಧ್ಯೆ ಪ್ರವೇಶಿಸಿದೆ. ನಾನು ಒಂದು ಮಾತನ್ನು ಹೇಳಿದೆ. ಅದೇನೆಂದರೆ, ಸರ್ಕಾರದಿಂದ ಅನ್ನಭಾಗ್ಯ ಯೋಜನೆಯಡಿ ಕೊಡುವಂತಹ ಅಕ್ಕಿಯಲ್ಲಿ ಪ್ಲಾಸ್ಟಿಕ್ ಅಕ್ಕಿ ಬರುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ, ನಾವು ಖಾಸಗಿಯವರಿಂದ ಅಕ್ಕಿಯನ್ನು ಖರೀದಿ ಮಾಡುವುದಿಲ್ಲ ಮತ್ತು ಕರ್ನಾಟಕ ರಾಜ್ಯದಲ್ಲಿ ಅಷ್ಟು ಪ್ರಮಾಣದಲ್ಲಿ ಅಕ್ಕಿ ಉತ್ಪಾದನೆಯಾಗುವುದಿಲ್ಲ. ನಾವು ಇವತ್ತಿನ ದಿವಸ ಚತ್ತೀಸ್‌ಗಢ, ಪಂಜಾಬ್ ಮತ್ತು ಉತ್ತರ ಭಾರತದಲ್ಲಿ ಭತ್ತ ಜಾಸ್ತಿ ಬೆಳೆಯುತ್ತಾರೆ ಅವರು ತಾವು ಬೆಳೆದಂತಹ ಅಕ್ಕಿಯನ್ನು 'ಭಾರತದ ಆಹಾರ ನಿಗಮ'ಕ್ಕೆ ಸರಬರಾಜು ಮಾಡುತ್ತಾರೆ. 'ಭಾರತದ ಆಹಾರ ನಿಗಮ'ದಿಂದ ನಾವು ಅಕ್ಕಿ ಖರೀದಿ ಮಾಡುತ್ತೇವೆ. ಅದರಂತೆ, ಬೇರೆ ಬೇರೆ ಕಡೆಯಿಂದ ನಾವು ಅಕ್ಕಿಯನ್ನು ಖರೀದಿ ಮಾಡದೇ 'ಭಾರತದ ಆಹಾರ ನಿಗಮ'ದಿಂದ ಮಾತ್ರವೇ ಖರೀದಿ ಮಾಡುವುದರಿಂದ ಖಂಡಿತವಾಗಿ ಅನ್ನಭಾಗ್ಯ ಅಕ್ಕಿಯಲ್ಲಿ ಕಲಬೆರಕೆ ಬರುವುದಕ್ಕೆ ಸಾಧ್ಯವಿಲ್ಲ ಮತ್ತು ಆ ವಿಚಾರದಲ್ಲಿ ನಾನು ಹೇಳುವಂತಹ ವಿಚಾರ ಇವತ್ತಿನ ದಿವಸದ್ದು ಆಗಿದೆ. ಆ ವಿಚಾರವನ್ನು ಸ್ಪಷ್ಟಪಡಿಸುತ್ತೇನೆ ಮತ್ತು ಪ್ಲಾಸ್ಟಿಕ್ ಅಕ್ಕಿ ಬಗ್ಗೆ ತನಿಖೆಯಾಗಬೇಕು ಎಂದು ನಾನು ಕೂಡ ಹೇಳುತ್ತೇನೆ. ಇದು ಮೇಡ್ ಇನ್ ಇಂಡಿಯಾ ಇದ್ದದ್ದು ಮೇಕ್ ಇನ್ ಇಂಡಿಯಾ ಆಗುತ್ತದೆಯೇ ಎನ್ನುವುದನ್ನು ನೋಡಬೇಕು.

**ಸಭಾಪತಿಯವರು:–** ಧನ್ಯವಾದಗಳು. ಮುಂದಿನ ಪ್ರಶ್ನೆ ಶ್ರೀಮತಿ ಎಸ್.ವೀಣಾ ಅಚ್ಚಯ್ಯರವರದು ಮತ್ತು ಅವರದಲ್ಲದೇ ಇನ್ನೂ ಎರಡು ಪ್ರಶ್ನೆಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಿಗೆ ಇದೆ. ಅವರು ನನಗೆ ಒಂದು ಪತ್ರ ಬರೆದಿದ್ದಾರೆ, "ಇವತ್ತಿನ ದಿವಸ ನಾನು ಕಲಾಪಕ್ಕೆ ಹಾಜರಾಗುವುದು ಸಾಧ್ಯವಾಗುತ್ತಿಲ್ಲ, ಆರೋಗ್ಯದಲ್ಲಿ ಸ್ವಲ್ಪ ತೊಂದರೆಯಾಗಿದೆ. ಇನ್ನೊಂದು ದಿವಸ ಯಾವತ್ತಾದರೂ ಸರಿಹೊಂದಿಸಿ ಎಂದು ಹೇಳಿದ್ದಾರೆ. ಅವರ ಪ್ರಶ್ನೆಗಳಿಗೆ 3 ಪ್ರಶ್ನೆಗಳನ್ನು ಇವತ್ತಿನ ದಿವಸ ತಡೆಹಿಡಿಯುತ್ತೇನೆ. ಅವರ ಆರೋಗ್ಯ ದೃಷ್ಟಿ ನೋಡಿಕೊಂಡು, ಅವರು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒಪ್ಪಿದ ದಿನ ಹೆಚ್ಚುವರಿಯಾಗಿ ಅವರ ಹೆಸರಿನಲ್ಲಿರುವಂತಹ ಆ ಮೂರು ಪ್ರಶ್ನೆಗಳನ್ನು ಪಟ್ಟಿ ಮಾಡುತ್ತೇನೆ. ಈಗ ಒಂದು....

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಿಗೆ. ಕಳೆದ ವಾರ ಅಂದರೆ ಸೋಮವಾರ ಸದನ ಪ್ರಾರಂಭವಾದಾಗಿನಿಂದ ಇದು ನನ್ನ ಮೂರನೆಯ ಚುಕ್ಕೆ ಗುರುತಿನ ಪ್ರಶ್ನೆ. ಇವುಗಳಲ್ಲಿ ಯಾವುದಕ್ಕೂ ಉತ್ತರ ಬಂದಿಲ್ಲ. ಬುಧವಾರ ದಿನದ ಪ್ರಶ್ನೆಗೂ ಸಹ ಉತ್ತರ ಕೊಟ್ಟಿಲ್ಲ. ಗುರುವಾರದ ಪ್ರಶ್ನೆಗೂ ಸಹ ಉತ್ತರ ಕೊಟ್ಟಿಲ್ಲ.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೆ, ಕೆಲವರಿಗೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೆ, ನಮ್ಮನ್ನು blacklist ಮಾಡಿಬಿಟ್ಟರಾ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

**(ಗೊಂದಲ)**

**Mr. CHAIRMAN:-** I am also helpless like you.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ತಮ್ಮ ...

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಬಹುಶಃ ಮಾನ್ಯ ಸದಸ್ಯರು ಬಹಳ ಕಠಿಣವಾದ ಪ್ರಶ್ನೆ ಕೇಳಿರಬಹುದು.

**(ಗೊಂದಲ)**

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ತಮ್ಮ ಮಾಹಿತಿಗೆ ಶುಕ್ರವಾರದ ದಿನ ಚುಕ್ಕೆ ರಹಿತ ಪ್ರಶ್ನೆಗಳು ಐದು ಇಲಾಖೆಗೆ ಸಂಬಂಧಪಟ್ಟ ಒಟ್ಟು 20 ಪ್ರಶ್ನೆಗಳಿದ್ದು, ಅವುಗಳಲ್ಲಿ ಒಂದಕ್ಕೂ ಉತ್ತರ ಬಂದಿರುವುದಿಲ್ಲ ಮತ್ತು ಕಳೆದ ಮಾರ್ಚ್ ತಿಂಗಳನಲ್ಲಿ ನಡೆದ ಅಧಿವೇಶನದಲ್ಲಿ...

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಕಳೆದ ವಾರದ ಪ್ರಶ್ನೆಗಳನ್ನು ಸದನದಲ್ಲಿ ಮಂಡಿಸಿಲ್ಲ. ಹಾಗಾಗಿ ಬಂದಿರುವುದಿಲ್ಲ. ಮಂಡಿಸುವುದಕ್ಕೆ ಸರ್ಕಾರವನ್ನು ಅನುವು ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ಹೆಚ್ಚುವರಿಯಾಗಿ ಪ್ರಶ್ನೆ ಹಾಕಲಿಕ್ಕೆ ಸಮಯ ಬರಲಿಲ್ಲ. ಆದರೆ, ಆ ಪ್ರಶ್ನೆಗಳನ್ನು ಕನಿಷ್ಠ ಮಂಡಿಸುವುದಕ್ಕೆ ಹೇಳುತ್ತೇನೆ. ಅದನ್ನು ಸಭಾ ನಾಯಕರು ಮಾಡುತ್ತಾರೆ. ಅದನ್ನು ನಾಳೆ ಅಥವಾ ನಾಡಿದ್ದು ಮಾಡಿಸುತ್ತೇನೆ. ಮುಂದಿನ ಪ್ರಶ್ನೆ, ಶ್ರೀ ಪ್ರತಾಪಚಂದ್ರ ಶೆಟ್ಟಿಯವರ ಪ್ರಶ್ನೆಯನ್ನು ತಡೆಹಿಡಿಯಲಾಗಿತ್ತು. ಈಗ ಮಾನ್ಯ ಸಚಿವರು ಸದನದಲ್ಲಿ ಹಾಜರಿದ್ದಾರೆ. ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯನ್ನು ಕೇಳಬಹುದು.

**ಪ್ರಶ್ನೆ ಸಂಖ್ಯೆ: 2736**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಖಾಸಗಿ ಸಂಸ್ಥೆಗಳ ಮುಖಾಂತರ ಮತ್ತು ಸಹಕಾರಿ ಸಂಸ್ಥೆಗಳ ಮುಖಾಂತರ ಕಾರ್ಯನಿರ್ವಹಿಸತಕ್ಕಂತಹ ನ್ಯಾಯಬೆಲೆ ಅಂಗಡಿಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಆದರೆ, ಇಲ್ಲಿ ಒಂದು...

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೆ...

**ಸಭಾಪತಿಯವರು:-** ಮಾನ್ಯ ಸದ್ಯಸರು ತಮ್ಮ ಪ್ರಶ್ನೆಯನ್ನು ಕೇಳಲಿ. ನಂತರ ತಮ್ಮ ಪ್ರಶ್ನೆ ಕೇಳಬಹುದು.

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೆ, ಇವತ್ತಿನ ಪ್ರಶ್ನೆಗಳ ಪಟ್ಟಿಯಲ್ಲಿ ನನ್ನದೊಂದು ಚುಕ್ಕೆ ಗುರುತಿನ ಪ್ರಶ್ನೆ ಇತ್ತು.

**ಸಭಾಪತಿಯವರು:-** ಮುಂದಿನ ಪ್ರಶ್ನೆ ತಮ್ಮದು.

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆ ಜಂಪ್ ಆಯಿತು.

**ಸಭಾಪತಿಯವರು:-** ಇಲ್ಲ, ಇಲ್ಲ, ತಮ್ಮ ಪ್ರಶ್ನೆ ಜಂಪ್ ಆಗಿಲ್ಲ. ವಾಪಸ್ಸು ಹಿಂದಿನ ಪ್ರಶ್ನೆಗೆ ಹೋಗಿದ್ದೇನೆ. ನಂತರದ ಪ್ರಶ್ನೆ ತಮ್ಮದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಈ ನ್ಯಾಯಬೆಲೆ ಅಂಗಡಿಗಳ ವಿರುದ್ಧ ಎಷ್ಟು ದೂರುಗಳು ದಾಖಲಾಗಿವೆ ಎನ್ನತಕ್ಕಂತಹದ್ದರ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಅದರಲ್ಲೂ ವಿಶೇಷವಾಗಿ ಕಳೆದ ಮೂರು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉಡುಪಿ ಜಿಲ್ಲೆಗಳಲ್ಲಿ ಒಂದು ಪ್ರಕರಣ ಮಾತ್ರ ಒಂದು ಪ್ರಕರಣ ಮಾತ್ರ ದಾಖಲಾಗಿದೆ ಎನ್ನತಕ್ಕಂತಹ ಉತ್ತರವನ್ನು ಕೊಟ್ಟಿದ್ದಾರೆ. ಆದುದರಿಂದ, ಸಹಕಾರಿ ಸಂಘಗಳ ಮುಖಾಂತರ ನ್ಯಾಯ ಬೆಲೆ ಅಂಗಡಿಗಳನ್ನು ಮಾಡತಕ್ಕಂತಹ ಸಂದರ್ಭದಲ್ಲಿ ಅದನ್ನು ಕಡ್ಡಾಯವಾಗಿ, ಸರ್ಕಾರ ಇಟ್ಟಿಪಟ್ಟಲ್ಲಿ ಅದನ್ನು ನಡೆಸಬೇಕು ಎನ್ನುವಂತಹ ಉದ್ದೇಶದಿಂದ ವಿಧೇಯಕಗಳನ್ನು ತರತಕ್ಕಂತಹ ಉದ್ದೇಶ ಇದೆಯೇ ಎನ್ನತಕ್ಕಂತಹ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ನ್ಯಾಯ ಬೆಲೆ ಅಂಗಡಿಗಳನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ ಎನ್ನತಕ್ಕಂತಹ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ನಾನು ಹೇಳತಕ್ಕಂತಹದ್ದು, ಸೇವೆ ಮಾಡತಕ್ಕಂತಹ ಉದ್ದೇಶದಿಂದ ಪ್ರಾರಂಭವಾಗಿರತಕ್ಕಂತಹ ಸಹಕಾರಿ ಸಂಘಗಳು ಸೇವೆ ಮಾಡತಕ್ಕಂತಹ ಉದ್ದೇಶದಿಂದ ಪ್ರಾರಂಭವಾಗಿವೆ. ಆದರೆ, ಈ ಅಂಗಡಿಗಳನ್ನು ನಡೆಸುವುದರಿಂದ ಅವರಿಗೆ ಲಾಭವಾಗದಿದ್ದರೂ ನಷ್ಟವಾಗಬಾರದು. ಆದರೆ, ಇದನ್ನು ನಡೆಸಿದರೆ ನಷ್ಟವಾಗುತ್ತದೆ ಎನ್ನುವಂತಹ ಉದ್ದೇಶದ ಹಿನ್ನೆಲೆಯಲ್ಲಿ ಇವತ್ತಿನ ದಿವಸ ನ್ಯಾಯಬೆಲೆ ಅಂಗಡಿಗಳನ್ನು ಮುಂದುವರೆಸಿಕೊಂಡು ಹೋಗಲಿಕ್ಕೆ ಜನರು ಹಿಂದೇಟು ಹಾಕತಕ್ಕಂತಹ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಆದ್ದರಿಂದ, ಅಂತಹ ಸಂದರ್ಭದಲ್ಲಿ ಕಡ್ಡಾಯವಾಗಿ ಸಹಕಾರಿ ಸಂಘಗಳ ಮುಖಾಂತರ ವಿತರಣೆ ಮಾಡತಕ್ಕಂತಹ ಒಂದು ವಿಧೇಯಕವನ್ನು ತರುವ ಅಗತ್ಯವಿದ್ದರೆ ತರುತ್ತೀರಾ ಅಥವಾ ಇದರ ಮುಖಾಂತರವೇ ತಮಗೆ ಅದನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನತಕ್ಕಂತಹ ವಿಚಾರದ ಬಗ್ಗೆ ಮಾನ್ಯ ಸಚಿವರಿಂದ ಸ್ಪಷ್ಟೀಕರಣ ಕೋರುವುದಕ್ಕೆ ಬಯಸುತ್ತೇನೆ.

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ಹಿರಿಯ ಸದಸ್ಯರು ಕೇಳಿದಂತಹ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲಾಗಿದೆ. ಮಾನ್ಯ ಸದಸ್ಯರು ಇವತ್ತಿನ ದಿವಸ, "ನ್ಯಾಯಬೆಲೆ ಅಂಗಡಿಗಳನ್ನು ಕಡ್ಡಾಯವಾಗಿ ಸಹಕಾರಿ ಸಂಘಗಳು ನಡೆಸಲೇಬೇಕೆಂದು ಹೇಳಿ ಕಾನೂನನ್ನು ತರುವಂತಹ ಕಾಯಿದೆಯನ್ನು ತರಲಾಗುವುದೇ" ಎಂದು ಪ್ರಶ್ನೆ ಕೇಳಿದ್ದಾರೆ. ಇಂತಹ ಯಾವುದೇ ಕಾನೂನನ್ನು ತಂದಿರುವುದಿಲ್ಲ. ಪ್ರಪ್ರಥಮವಾಗಿ ನಾವು ಸಹಕಾರಿ ಸಂಸ್ಥೆಗಳಿಗೆ ಆದ್ಯತೆ ಕೊಡುವಂತಹದ್ದು ಅಗತ್ಯವಿದೆ. ಇವತ್ತಿನ ದಿವಸ ಸ್ಥಳೀಯ ಮಟ್ಟದಲ್ಲಿಯೂ ಕೂಡ ಈ ಸಂಸ್ಥೆಗಳಿಗೆ ಕೊಡುವಂತಹ ಅವಕಾಶಗಳು ಸಹ ಇವೆ. ಕೆ.ಎಂ.ಎಫ್. ಪ್ರಾಯೋಜಿತ ಹಾಲು ಉತ್ಪಾದಕರ ಸಂಘಗಳು, ಸ್ತ್ರೀಶಕ್ತಿ ಗುಂಪು ಮತ್ತು ಸ್ವಸಹಾಯ ಸಂಘಗಳಿಗೆ ಕೂಡ ಕೊಡುವಂತಹ ಅವಕಾಶ ಇರುವಂತಹದ್ದು ಇದೆ. ಆದರೆ, ಇದರ ಪ್ರಥಮ ಆದ್ಯತೆಯನ್ನು ಸಹಕಾರಿ ಸಂಘಗಳಿಗೆ ಕೊಟ್ಟಿದ್ದೇವೆ. ಆದರೆ, ಮಾನ್ಯ ಸದಸ್ಯರು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹಕಾರಿ ಸಂಘಗಳಿಗೆ ಕೊಡುವಂತಹದ್ದನ್ನು ಕಡ್ಡಾಯ ಮಾಡಬೇಕೆಂದು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಆ ಸಲಹೆಯನ್ನು ಪರಿಶೀಲಿಸುತ್ತೇವೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಲ್ಲಿ ಹೇಳುವುದೇನೆಂದರೆ, ಈ ಸಹಕಾರಿ ಸಂಘಗಳು ಸೇವೆ ಮಾಡತಕ್ಕಂತಹ ಉದ್ದೇಶದಿಂದ ಇರತಕ್ಕಂತಹದ್ದು. ಸರ್ಕಾರ ಇಚ್ಛೆಪಟ್ಟಲ್ಲಿ ಇಂತಹ ಸಹಕಾರಿ ಸಂಘಗಳಿಗೆ ಕಡ್ಡಾಯವಾಗಿ ನ್ಯಾಯಬೆಲೆ ಅಂಗಡಿಯನ್ನು ನಡೆಸಿಕೊಂಡು ಹೋಗತಕ್ಕಂತಹ ಒಂದು ಹೊಣೆಯನ್ನು ಹೊರಿಸಲಾಗುವುದೇ? ಒಂದು ವೇಳೆ ಅಗತ್ಯವಿದ್ದರೆ ಅದಕ್ಕೆ ವಿಧೇಯಕ ತರಲಾಗುವುದೇ?

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಪುನರ್ ಪರಿಶೀಲನೆ ಮಾಡಿ ಮುಂದಿನ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಏನು ಪರಿಶೀಲನೆ...

**(ಗೊಂದಲ)**

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಯವರೆ, ಈ ಬಗ್ಗೆ ಕಾಯಿದೆ ತರಬೇಕೋ ಅಥವಾ ಬೇಡವೋ? ಅಥವಾ ಸಹಕಾರಿ ಸಂಘಗಳಿಗೆ ಕಡ್ಡಾಯ ಮಾಡಬೇಕೇ? ಅಥವಾ ಈಗ ಕೊಟ್ಟಿರುವಂತಹ ಸಹಕಾರಿ ಸಂಘಗಳು ಚೆನ್ನಾಗಿ ಸೇವೆ ಮಾಡುತ್ತಿವೆಯೇ ಅಥವಾ ಇಲ್ಲವೇ? ಕೊಟ್ಟಿರುವಂತಹ ಸಹಕಾರ ಸಂಘಗಳಲ್ಲಿ ಎಷ್ಟು ಸಹಕಾರ ಸಂಘಗಳು ಸಮಸ್ಯೆಯನ್ನು ಉಂಟು ಮಾಡುತ್ತಿದ್ದಾರೆ, ಈ ಎಲ್ಲಾ ವಿಚಾರಗಳನ್ನು ಚರ್ಚೆ ಮಾಡಿಕೊಂಡು ನಂತರ ಕಡ್ಡಾಯ ಮಾಡಬೇಕಾದಂತಹ ವಿಚಾರವನ್ನು ಗಮನಿಸಬೇಕಾಗುತ್ತದೆ. ಅದೇ ರೀತಿ ಅವರಿಗೆ ಬೇರೆ ಬೇರೆ ಅವಕಾಶಗಳನ್ನು ಸಹ ನಾವು ಕೊಟ್ಟಿದ್ದೇವೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ...

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಸರ್ಕಾರ ಇಚ್ಛೆಪಟ್ಟಲ್ಲಿ ಅಥವಾ ಸರ್ಕಾರ ಹೇಳಿದರೂ ಕೇಳದಂತಹ ಪರಿಸ್ಥಿತಿ ಬಂದಾಗ ಯಾವ ಕ್ರಮ ತೆಗೆದುಕೊಳ್ಳುತ್ತೀರಿ? ಅದಕ್ಕಾಗಿ ನಾನು ಹೇಳಿದ್ದು, ಸರ್ಕಾರ ಇಚ್ಛೆಪಟ್ಟಲ್ಲಿ ಈ ಸಹಕಾರಿ ಸಂಸ್ಥೆಗಳಿಗೆ ಕಡ್ಡಾಯವಾಗಿ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೀರಾ?

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ಪೂರಕವಾಗಿ ಸಹಕಾರಿ ಕಾಯ್ದೆಯಲ್ಲಿ ಗ್ರಾಹಕರ ಸಂಘಗಳು ಇರತಕ್ಕಂತಹದ್ದೇ ಆಗಿದೆ. ಆ ಸಹಕಾರಿ ಸಂಘಗಳ ಉದ್ದೇಶ ಕೂಡ ಅದೇ ಆಗಿದೆ. ಅವರ aims and objectives ಮತ್ತು bylawನೇ ಆ ರೀತಿ ಇರತಕ್ಕಂತಹದ್ದು. ಸರ್ಕಾರ ಒಂದು ಆದೇಶ ಹೊರಡಿಸಿ ಇದನ್ನು ಸಹಕಾರಿ ಸಂಘಗಳಿಗೇ ಆದ್ಯತೆ ಮೇಲೆ ಕೊಡಬೇಕೆಂದು ಎಂದು ಹೇಳಿದರೆ ಸ್ವಾಭಾವಿಕವಾಗಿ ಅದು ಅನುಷ್ಠಾನವಾಗುತ್ತದೆ. ಅದಕ್ಕಾಗಿ ಪ್ರತ್ಯೇಕವಾದ ಕಾಯ್ದೆಯ ಅವಶ್ಯಕತೆಯಿರುವುದಿಲ್ಲ. ಗ್ರಾಹಕರ ಸಹಕಾರಿ ಸಂಘಗಳನ್ನು ಪರಿಗಣಿಸುವುದಕ್ಕೆ ಸರ್ಕಾರ ಒಂದು ಸುತ್ತೋಲೆಯನ್ನು ನೀಡಿದರೆ ಖಂಡಿತ ಅದು ಅನುಷ್ಠಾನಗೊಳ್ಳುತ್ತದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಒಂದು ವೇಳೆ ಸರ್ಕಾರ ಮಾಡದೇ ಇದ್ದರೆ... ಸರ್ಕಾರ ಇಚ್ಛೆಪಟ್ಟಲ್ಲಿ...

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ಸಹಕಾರಿ ಸಂಘಗಳಿಗೆ ಮೊದಲ ಆದ್ಯತೆ ನೀಡಲಾಗಿದೆ. ಯಾವುದೇ ನ್ಯಾಯಬೆಲೆ ಅಂಗಡಿ ತೆರೆಯಲು ಅರ್ಜಿ ಕೊಟ್ಟಲ್ಲಿ ಅದರಲ್ಲಿ ಪ್ರಥಮ ಆದ್ಯತೆಯನ್ನು ಸಹಕಾರಿ ಸಂಘಗಳಿಗೆ ನೀಡಲಾಗಿದೆ. ಮಾನ್ಯ ಸದಸ್ಯರು ಹೇಳಿದಂತೆ ಕಡ್ಡಾಯ ಮಾಡದೇ ಇದ್ದರೂ ಕೂಡ ತಾವು ಮಾಡಿ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ನಾವು ಚಿಂತನೆ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 2790**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಸಚಿವರು ಸುಮಾರು 46 ಕೊಳವೆ ಬಾವಿಗಳನ್ನು ಮೂರು ವರ್ಷಗಳಲ್ಲಿ ಕೊರೆದಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಅದರಲ್ಲಿ 36 ಕೊಳವೆಬಾವಿಗಳಿಗೆ ಪಂಪ್‌ಸೆಟ್ ಸರಬರಾಜು ಮಾಡಲಾಗಿದೆ. 34 ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆಯೆಂದು ಉತ್ತರ ಕೊಟ್ಟಿದ್ದಾರೆ. ಮತ್ತು ಉಳಿದ 12 ಕೊಳವೆ ಬಾವಿಗಳನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದುವರೆವಿಗೂ ಪೂರ್ಣಗೊಳಿಸಿರುವುದಿಲ್ಲ. ಅದನ್ನು ಯಾವಾಗ ಪೂರ್ಣಗೊಳಿಸುತ್ತಾರೆಂದು ಮಾನ್ಯ ಸಚಿವರನ್ನು ಪ್ರಶ್ನೆ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಮಾನ್ಯ ಸದಸ್ಯರು ಉಳಿದ ಕೊಳವೆ ಬಾವಿಗಳ ಕೆಲಸವನ್ನು ಯಾವಾಗ ಪೂರ್ಣಗೊಳಿಸುತ್ತೀರೆಂದು ಪ್ರಶ್ನೆ ಕೇಳುತ್ತಿದ್ದಾರೆ.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಈಗ ಅಲ್ಲಿ ಮಳೆ ಇರುವುದರಿಂದ ಕೊಳವೆಬಾವಿ ಕೊರೆಯುವ ರಿಗ್ ಯಂತ್ರಗಳು ಆ ಸ್ಥಳಕ್ಕೆ ಹೋಗುತ್ತದೆಯೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಮಳೆ ಇಲ್ಲವೆಂದರೆ ನಾವು ತಕ್ಷಣವೇ ಮಾಡುತ್ತೇವೆ. ಈಗಾಗಲೇ ನಾವು ಈ ಬಗ್ಗೆ work order ಕೊಟ್ಟಿದ್ದೇವೆ. ಯಾವ ಬಾಕಿ ಇರಬಾರದು ಕೊಳವೆ ಬಾವಿಗಳನ್ನು ಕೊರೆಯಿರಿ ಎಂದು ನಿರ್ದೇಶನ ನೀಡಿದ್ದೇವೆ. ಅಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ಬೋರ್‌ವೆಲ್ ಕೊರೆಯುವುದಕ್ಕೆ ಸಾಧ್ಯವಾಗುತ್ತಿಲ್ಲ.

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೆ, ಬರಗಾಲದ ನೆಪ ಮಾಡುವುದು ಬೇಡ. ಈಗ ಒಂದು ವಾರದಿಂದ ಮಾತ್ರ ಮಳೆ ಸುರಿಯುತ್ತಿದೆ. ಈ ಮೊದಲು ಮಳೆ ಸುರಿಯುತ್ತಿರಲಿಲ್ಲ. ಇಡೀ ಜಿಲ್ಲೆಯಲ್ಲಿಯೇ ನೀರಿಗೆ ಹಾಹಾಕಾರ ಇದೆ. ಇನ್ನೊಂದು ವಿಷಯವೆಂದರೆ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಸುಮಾರು 59 ಕೊಳವೆ ಬಾವಿಗಳನ್ನು ಕೊರೆದಿದ್ದಾರೆ. ಅದರಲ್ಲಿ 51 ಕೊಳವೆ ಬಾವಿಗಳು ಪೂರ್ಣಗೊಂಡಿವೆ. ಉಳಿದ 8 ಕೊಳವೆ ಬಾವಿಗಳನ್ನು ಬಾಕಿಯಿಟ್ಟಿದ್ದಾರೆ. ಅವುಗಳನ್ನು ಯಾವಾಗ ಪೂರ್ಣಗೊಳಿಸುತ್ತಾರೆ ಅದಕ್ಕೆ ದಯವಿಟ್ಟು ಒಂದು ಕಾಲಮಿತಿ ನೀಡಲಿ.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಇದಕ್ಕೆ ಕಾಲಮಿತಿಯಿಲ್ಲ. ನಾವು ಕೊಳವೆಬಾವಿಗಳನ್ನು ನಾಳೆಯೇ ಕೊರೆಯುವುದಕ್ಕೆ ಹೇಳುತ್ತೇವೆ. ಕೊಳವೆಬಾವಿ ಕೊರೆಯುವ ಯಂತ್ರಗಳು ಸಿದ್ಧವಿದೆ ಮತ್ತು ಕೊರೆಯುವವರು ತಯಾರಿದ್ದಾರೆ ಆದರೆ. ಆ ಸ್ಥಳಕ್ಕೆ ಹೋಗುವುದಕ್ಕೆ ದಾರಿ ಮತ್ತು ಹೊಲದಲ್ಲಿ ಹೋಗುವುದಕ್ಕೆ ಜಾಗ ಬಿಡಬೇಕಲ್ಲವೇ? ಮಳೆ ಬಂದಾಗ ಕೊಳವೆಬಾವಿಗಳನ್ನು ಕೊರೆಯುವುದಕ್ಕೆ ಆಗುವುದಿಲ್ಲ.

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೆ, ಕೊಳವೆಬಾವಿ ಕೊರೆಯುವ ಯಂತ್ರಗಳು ಹೋಗುವುದಕ್ಕೆ ಎಲ್ಲಾ ವ್ಯವಸ್ಥೆ ಇದೆ. ಮಳೆ ಬಂದಿರುವುದು ಇತ್ತೀಚೆಗಷ್ಟೇ. ಮಾನ್ಯ ಸದಸ್ಯರು ತಮ್ಮ ಉತ್ತರದಲ್ಲಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೊಳವೆ ಬಾವಿಗಳನ್ನು ಕೊರೆಯುವ ರಿಗ್ ಯಂತ್ರಗಳು ಹೋಗುವುದಿಲ್ಲವೆಂದು ಉತ್ತರ ನೀಡಿದ್ದಾರೆ. ಎಲ್ಲೆಲ್ಲಿ ಸರ್ಕಾರದವರು ಕೊಳವೆ ಬಾವಿಗಳನ್ನು ಕೊರೆಯುವುದಕ್ಕೆ ಜಾಗಗಳನ್ನು ಗುರುತು ಮಾಡಿದ್ದಾರೆ ಅಲ್ಲಿಗೆ ರಿಗ್ ಯಂತ್ರಗಳು ಹೋಗುತ್ತವೆ. ಅಂತಹ ಜಾಗಗಳನ್ನು ನಾವು ಗುರುತು ಮಾಡಿದ್ದೇವೆ. ಆದರೆ, ಕಳೆದ ಒಂದು ವಾರದಿಂದ ಮಾತ್ರ ಮಳೆ ಬೀಳುತ್ತದೆ. ಇದರ ಹಿಂದೆ ಮಾನ್ಯ ಸಚಿವರು ಏನು ಮಾಡುತ್ತಿದ್ದರು?

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಕಳಕಳಿ ನನಗೆ ಗೊತ್ತಾಗಿದೆ. ಇದರ ಪರಿಸ್ಥಿತಿಯೇನೆಂಬುದನ್ನು ಪರಿಶೀಲಿಸಿ ನಂತರ ನಾನು ಈ ಪ್ರಶ್ನೆಗೆ ಉತ್ತರ ನೀಡುತ್ತೇನೆ.

**ಸಭಾಪತಿಯವರು:–** ಧನ್ಯವಾದಗಳು. ಮುಂದಿನ ಪ್ರಶ್ನೆ ಶ್ರೀ ರಮೇಶ್‌ಬಾಬು, ಶ್ರೀ ಪ್ರಸನ್ನಕುಮಾರ್ ಮತ್ತು ಶ್ರೀಕಂಠೇಗೌಡರದು. ಮೂರು ಜನ ಮಾನ್ಯ ಸದಸ್ಯರುಗಳ ಪ್ರಶ್ನೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರದ್ದು ಇದೆ. ಅವರು ಇನ್ನೊಂದು ದಿವಸ ತೆಗೆದುಕೊಳ್ಳಬೇಕೆಂದು ಭಿನ್ನವಿಸಿದ್ದಾರೆ. ಅವರ ಮುಂದಿನ ಪ್ರಶ್ನೆ ನಿರಾಣಿ ಹನಮಂತ್ ರುದ್ರಪ್ಪರವರ ಪ್ರಶ್ನೆಯನ್ನು ಅವರ ಪರವಾಗಿ ಶ್ರೀ ಅರುಣ ಶಹಾಪುರರವರು ಕೇಳುತ್ತಾರೆ.

(666)/12–6–2017/12–20/ಎಲ್‌ಎಂ/ಬಿಎನ್‌ಎಸ್

**ಪ್ರಶ್ನೆ ಸಂಖ್ಯೆ: 2728**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ)(ಶ್ರೀ ನಿರಾಣಿ ಹನುಮಂತ ರುದ್ರಪ್ಪನವರ ಪರವಾಗಿ):–** ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಪೈಕಿ ಎಷ್ಟು ಶಾಲೆಗಳು ಸ್ವಂತ ಕಟ್ಟಡದಲ್ಲಿ ನಡೆಯುತ್ತಿವೆ, ಎಷ್ಟು ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ರಾಜ್ಯದಲ್ಲಿ ಇನ್ನೂ 50% ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಬಾಡಿಗೆ ಕಟ್ಟಡದಲ್ಲಿಯೇ ನಡೆಯುತ್ತಿವೆ. ಇವುಗಳಿಗೆ ಸ್ವಂತ ಕಟ್ಟಡವನ್ನು ಒದಗಿಸುವ ಬಗ್ಗೆ ಸರ್ಕಾರದ ನಿಲುವೇನು ಮತ್ತು ಯಾವ ಕಾಲಮಿತಿಯಲ್ಲಿ ಸ್ವಂತ ಕಟ್ಟಡಗಳನ್ನು ನಿರ್ಮಿಸುತ್ತೀರಿ? ಮೂಲಭೂತ ಸೌಕರ್ಯಗಳ ಕೊರತೆಯನ್ನು ಹೋಗಲಾಡಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವ ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ನೋಡಿದರೆ, ಕ್ರೈಸ್ತ ಶಿಕ್ಷಣ ಸಂಸ್ಥೆಗಳ ಬಗ್ಗೆ ಸರ್ಕಾರ ಯಾವ ಧೋರಣೆಯನ್ನು ಹೊಂದಿದೆ ಎನ್ನುವ ನಿಲುವನ್ನು ತೋರಿಸುತ್ತದೆ. ಸರ್ಕಾರದ ಉತ್ತರದಲ್ಲಿ ಸ್ವಂತ ಕಟ್ಟಡಗಳನ್ನು ಹೊಂದಿರುವ ಎಲ್ಲಾ ವಸತಿ ಶಾಲೆಗಳಿಗೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಬೇಡಿಕೆ ಇರುವ ವಸತಿ ಶಾಲೆಗಳಿಗೆ 2014–15 ರಿಂದ 2016–17ನೇ ಸಾಲಿನವರೆಗೆ ಅಗತ್ಯ ಮೂಲಭೂತ ಸಾಮಗ್ರಿಗಳ ಪೂರೈಕೆ ಮಾಡಲಾಗುತ್ತಿದೆ ಎಂದು ಅದರ ಪಟ್ಟಿಯನ್ನು ಕೊಟ್ಟಿದ್ದಾರೆ. ಆದರೆ ಬಾಡಿಗೆ ಇರುವ ಕಟ್ಟಡಗಳಿಗೆ ಸರಿಯಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರಿಯಾದ ನಿಲುವನ್ನು ತೆಗೆದುಕೊಂಡಿರುವುದಿಲ್ಲ ಎನ್ನುವುದು ನಿಮ್ಮ ಉತ್ತರದಿಂದಲೇ ಗೊತ್ತಾಗುತ್ತದೆ. ಅಲ್ಲಿ ಇರುವ ಮಕ್ಕಳು ಏನು ಅನ್ಯಾಯ ಮಾಡಿದ್ದಾರೆ. ಅಲ್ಲಿಯು ಕೂಡಾ ಬಡ ಪ್ರತಿಭಾವಂತ ಹಿಂದುಳಿದ, ಅಲ್ಪಸಂಖ್ಯಾತ, ದಲಿತ ವಿದ್ಯಾರ್ಥಿಗಳೆ ಓದುತ್ತಿದ್ದಾರೆ. ಅಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ನಿಮ್ಮ ನಿಲ್ಲುವಿನಲ್ಲಿಯೇ ಸಮಸ್ಯೆ ಇದೆ. ಯಾವ ಸಮಯಮಿತಿಯಲ್ಲಿ ಈ ಕಟ್ಟಡಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತೀರಿ ಎನ್ನುವುದನ್ನು ತಿಳಿಸಬೇಕು.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಗಳೆ, ಹಿಂದೆ ಈ ಶಾಲೆಗಳನ್ನು ಪ್ರಾರಂಭ ಮಾಡಬೇಕು ಎನ್ನುವ ತರಾತುರಿಯಲ್ಲಿ ಮಂಜೂರು ಮಾಡಿ ಪ್ರಾರಂಭ ಮಾಡಲಾಗಿದೆ. ಹಳ್ಳಿಗಳಲ್ಲಿ ಮೂಲಭೂತ ಸೌಕರ್ಯಗಳಿರುವ ಬಾಡಿಗೆ ಕಟ್ಟಡಗಳು ಸಿಗುವುದಿಲ್ಲ. ಯಾವುದೊ ಒಂದು ಶಾಲೆ ಅಥವಾ ದೊಡ್ಡ ಮನೆಗಳಲ್ಲಿ ಈ ಶಾಲೆಗಳನ್ನು ನಡೆಸಲಾಗುತ್ತಿದೆ. ಅಂತಹ ಕಟ್ಟಡಗಳಲ್ಲಿ cots ಗಳನ್ನು ಹಾಕಲು ಆಗುವುದಿಲ್ಲ. ಅವರಿಗೆ ಹಾಸಿಗೆ ಕೊಡುತ್ತೇವೆ, ಶೌಚಾಲಯದ ವ್ಯವಸ್ಥೆ ಮಾಡಿರುತ್ತೇವೆ, ಊಟ–ನೀರನ್ನು ಕೊಡುತ್ತೇವೆ, ಅವರಿಗೆ ಬೇಕಾದ ಲೇಖನಿ ಸಾಮಗ್ರಿಗಳನ್ನು, ಸ್ವಚ್ಛತೆಗೆ ಬೇಕಾದ ವಸ್ತುಗಳನ್ನು ಕೊಡುತ್ತೇವೆ. ಈ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕೊಡುತ್ತೇವೆ. ಆದರೆ ಆಟದ ಮೈದಾನವನ್ನು ಕೊಡಲು ಆಗುವುದಿಲ್ಲ. ನಮ್ಮ ಸರ್ಕಾರ ಬಂದಮೇಲೆ ಬಹಳಷ್ಟು ಶಾಲೆಗಳನ್ನು ಹೊಸದಾಗಿ ಕಟ್ಟಿದ್ದೇವೆ. ಇನ್ನು ಹೊಸ ಕಟ್ಟಡಗಳನ್ನು ಕಟ್ಟಲು ಜಾಗವನ್ನು ತೆಗೆದುಕೊಳ್ಳುತ್ತಿದ್ದೇವೆ. ಸರ್ಕಾರಿ ಜಾಗ ಇಲ್ಲದಿದ್ದರೆ ಖಾಸಗಿಯವರಿಂದ ಖರೀದಿ ಮಾಡಿ ಕಟ್ಟಡಗಳನ್ನು ಕಟ್ಟುತ್ತಿದ್ದೇವೆ. ಈ ಕೆಲಸ ಮಾಡಲು ಹಣದ ಕೊರತೆಯು ಇಲ್ಲ, ಇಚ್ಛಾಶಕ್ತಿಯ ಕೊರತೆಯು ಇಲ್ಲ. ಇರುವ ಒಂದೇ ಒಂದು ಕೊರತೆ ಎಂದರೆ ಸಕಾಲದಲ್ಲಿ ಭೂಮಿ ಸಿಗುತ್ತಿಲ್ಲ. ಭೂಮಿಯನ್ನು ಕೊಡಿಸಿ ಎಂದು ಜನಪ್ರತಿನಿಧಿಗಳಿಗೆ, ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಮಾಡಿದ್ದೇವೆ. ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಶಾಸಕರು ಪ್ರಯತ್ನ ಮಾಡಿ ಇಂತಹ ಕಡೆ ಜಾಗ ಇದೆ ಕೊಡುತ್ತೇವೆ ಕಟ್ಟಡವನ್ನು ಕಟ್ಟಿ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿದ್ದಾರೆ. ಅವರು ಆಸ್ತಕಿವಹಿಸಿ ಇಂತಹ ಕಡೆ ಜಾಗ ಇದೆ ಕೊಡಿಸುತ್ತೇವೆ ಎಂದು ಮುಂದೆ ಬಂದರೆ ಎಲ್ಲಾ ರೀತಿಯಲ್ಲಿ ಸಹಕಾರ ಕೊಡಲು, ಕಟ್ಟಡ ಕಟ್ಟಲು ನಾನು ತಯಾರಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅರುಣ ಶಹಾಪೂರ:–** ಮಾನ್ಯ ಸಭಾಪತಿಗಳೆ, 270 ಮೊರಾರ್ಜಿ ಶಾಲೆಗಳು ಮಾತ್ರ ಸ್ವಂತ ಕಟ್ಟಡದಲ್ಲಿ ನಡೆಯುತ್ತಿವೆ. 219 ಮೊರಾರ್ಜಿ ಶಾಲೆಗಳಿಗೆ ಸ್ವಂತ ಕಟ್ಟಡವಿಲ್ಲ. ಅಂದರೆ 50% ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. 65 ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳು ಸ್ವಂತ ಕಟ್ಟಡದಲ್ಲಿ ನಡೆಯುತ್ತಿವೆ. ಇನ್ನು 87 ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ.

**ಶ್ರೀ ಹೆಚ್.ಆಂಜನೇಯ:–** ನಿವೇಶನಗಳನ್ನು ತೆಗೆದುಕೊಂಡಿದ್ದೇವೆ ಅದನ್ನು ತಾವು ನೋಡಬೇಕು.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಗಳೆ, ಸ್ವಂತ ಕಟ್ಟಡ ಇರುವಲ್ಲಿ ಮಾತ್ರ ಮೂಲಭೂತ ಸೌಲಭ್ಯಗಳನ್ನು ಒದಗಿಸಿ, ಬಾಡಿಗೆ ಕಟ್ಟಡದಲ್ಲಿ ಓದುವ ಬಡ ಪ್ರತಿಭಾವಂತ ಮಕ್ಕಳು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಬಾರದು ಎನ್ನುವುದು ನಮ್ಮ ಉದ್ದೇಶ. ಇನ್ನು ಎರಡನೆಯದಾಗಿ, ಕ್ರೈಸ್ತ ಶಿಕ್ಷಣ ಸಂಸ್ಥೆಗಳನ್ನು ನಡೆಸುವುದರ ಬಗ್ಗೆ ಹೇಳಬೇಕು ಎಂದರೆ, ಈ ಸಂಸ್ಥೆಗಳು ಸರಿಯಾಗಿ ನಡೆಯಬೇಕು ಎನ್ನುವುದಾದರೆ ಶಿಕ್ಷಕರು ನೆಮ್ಮದಿಯಿಂದ ಕೆಲಸ ಮಾಡಬೇಕು. ಶಿಕ್ಷಕರು ನೆಮ್ಮದಿಯಿಂದ ಕೆಲಸ ಮಾಡಬೇಕು ಎಂದರೆ ಅವರು ಸಮಸ್ಯೆರಹಿತರಾಗಿರಬೇಕು. ಅವರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಸಹಾನುಭೂತಿಯಿಂದ ಪಾಲಕರ ಸ್ಥಾನದಲ್ಲಿ ನಿಂತು ಸಹಾಯ ಮಾಡಬೇಕು. ಎರಡು ದಿನದ ಹಿಂದೆ ಅವರು ಹೋರಾಟ ಮಾಡುತ್ತೇವೆ ಎಂದು ಬಂದಿರುವ ಹಿನ್ನೆಲೆಯಲ್ಲಿ ದಿನಾಂಕ:12–06–2017 ಮತ್ತು 13–06–2017 ಎರಡು ದಿನಗಳು ಹೋರಾಟವನ್ನು ನಾವು ಮಾಡುತ್ತೇವೆ ಎಂದು 6 ತಿಂಗಳ ಹಿಂದೆಯೇ ಅವರು ತಮ್ಮ ಗಮನಕ್ಕೆ ತಂದಿದ್ದಾರೆ. 3300 ಸದಸ್ಯರಿರುವ 'Team Kries' ಎಂಬುವವರಿಗೆ ನಿಮ್ಮ ಪ್ರಧಾನ ಕಾರ್ಯದರ್ಶಿಯವರು ಏನು ನೋಟಿಸ್ ಕೊಟ್ಟಿದ್ದಾರೆ ಎಂದರೆ;

*"ED Sir,*

*If anybody sits on strike on Freedom Park, take video and check attendance. Go ahead and suspend all of them. Till new recruitment, we can run with guest teachers. With Rs.12,000/- salary, we will get good teachers."* ಎಂದು ಇದೆ.

ಜನ ನಿಮಗಾಗಿ ಸೇವೆ ಮಾಡುವಂತಹ ಸರ್ಕಾರಿ ಸಂಸ್ಥೆಯ ನೌಕರರನ್ನು ಈ ರೀತಿ ಹೆದರಿಸಿ–ಬೆದರಿಸಿ ಅವರ ಧ್ವನಿಯನ್ನು ಹತ್ತಿಕ್ಕುವಂತಹ ಪ್ರಯತ್ನವನ್ನು ಮಾಡಿದರೆ ಹೇಗೆ? ಇದಕ್ಕೆ ಅನುಗುಣವಾಗಿ ನಿಮ್ಮ E.D. ಅವರು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅವರಿಗೆ ನೋಟಿಸ್‌ನ್ನು ಕೊಟ್ಟಿದ್ದಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಹೋರಾಟ ಮಾಡಲು ಈ ರೀತಿಯ ಸಂಗತಿ ನಿರ್ಮಾಣವಾದರೆ ಸಂವಿಧಾನದ ಹಕ್ಕಿನ ಉಲ್ಲಂಘನೆಯಲ್ಲವೆ? Right to form Association ಇಲ್ಲವೆ? ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಎಷ್ಟು ಅವಶ್ಯಕವಾಗಿದೆ ಅಷ್ಟೆ ಆ ಶಿಕ್ಷಕರು ನೆಮ್ಮದಿಯಿಂದ ಕೆಲಸ ಮಾಡಲು ಅವರಿಗೆ ಕೊಡಬೇಕಾದ ಸೌಲಭ್ಯಗಳನ್ನು ಕೊಡಬೇಕು. ಅದು ಬಿಟ್ಟು ಅವರ ಧ್ವನಿಯನ್ನು ಹತ್ತಿಕ್ಕುವಂತಹ ಕೆಲಸ ಮಾಡಿದವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ತಿಳಿಸಬೇಕು.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಗಳೆ, ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಶಾಲೆಗಳಿಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಎಷ್ಟು ಸಾಧ್ಯವೋ ಅಷ್ಟು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ. ನಿಮಗೆ ತಿಳಿದಮಟ್ಟಿಗೆ ನಾವು ಆ ಶಿಕ್ಷಕರಿಗೆ ಮಾಡಿದಷ್ಟು ಉಪಕಾರವನ್ನು ಬೇರೆ ಯಾರು ಮಾಡಿಲ್ಲ. ಮಾನ್ಯ ಬಸವರಾಜ ಹೊರಟ್ಟಿಯವರನ್ನು, ಮಾನ್ಯ ಶ್ರೀಕಂಠೇಗೌಡರನ್ನು, ಮಾನ್ಯ ಪುಟ್ಟಣ್ಣನವರನ್ನು ಕರೆದು ಚರ್ಚೆ ಮಾಡಿ ಸಮಸ್ಯೆಗಳನ್ನು ಬಗೆಹರಿಸಿದ್ದೇವೆ. ಯಾವ ಕಾರಣಕ್ಕೂ ಖಾಯಂ ಆಗದಂತಹ 600 ಶಿಕ್ಷಕರನ್ನು ಖಾಯಂ ಮಾಡಿದ್ದೇವೆ. ಇನ್ನು 500 ಶಿಕ್ಷಕರನ್ನು ಖಾಯಂ ಮಾಡುವ ಪ್ರಯತ್ನದಲ್ಲಿದ್ದೇವೆ. ಹೊರಗುತ್ತಿಗೆ ಆಧಾರದ ಮೇಲೆ ಬಂದಿರುವ ಶಿಕ್ಷಕರು ಯಾವ ರೀತಿ ಬಂದಿರುತ್ತಾರೆ ಎನ್ನುವುದು ತಮಗೆ ಗೊತ್ತಿದೆ. ಇಲ್ಲಿಯ ಬಡ ಮಕ್ಕಳು ಪೇಟೆಯ ಮಕ್ಕಳೊಂದಿಗೆ ಸ್ಪರ್ಧಿಸಬೇಕು, ಅವರಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಬೇಕು, ಆ ಶಿಕ್ಷಕ ಅತ್ಯಂತ ಹೆಚ್ಚಿನ ತರಬೇತಿಯನ್ನು ಪಡೆದವನಾಗಿರಬೇಕು, ಹೆಚ್ಚು ಜ್ಞಾನವನ್ನು ಹೊಂದಿರುವ ಶಿಕ್ಷಕರು ಇರಬೇಕು ಎನ್ನುವ ಮಾನದಂಡವಿದೆ. ಅವುಗಳನ್ನು ನೋಡಿದ ನಾವು ಇರುವ ಶಿಕ್ಷಕರಿಗೆ ತರಬೇತಿ ಕೊಡಲು, ಅವರಿಗೆ ಮೂಲಭೂತ ಸೌಲಭ್ಯಗಳನ್ನು ಕೊಡಲು, ಸಂಬಳವನ್ನು ಕೊಡಲು ಒಪ್ಪಿಕೊಂಡಿದ್ದೇವೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಗಳೆ, ಸರ್ಕಾರದ commitment ಅನ್ನು ನಾವು ಒಪ್ಪಿಕೊಳ್ಳುತ್ತೇವೆ. ಇಲ್ಲಿ ಇರುವ ಪ್ರಶ್ನೆ ಎಂದರೆ, ಮೊರಾರ್ಜಿ ದೇಸಾಯಿ ಶಾಲೆಯಲ್ಲಿನ ಇರುವ ಬಹುತೇಕ ನೌಕರರು temporary ಯಾಗಿ, contract basis ಮೇಲೆ ಮತ್ತು ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಅವರು ತಮಗೆ ಸಾಕಷ್ಟು representations ಕೊಟ್ಟಿದ್ದಾರೆ. ಅವರನ್ನು ಮತ್ತು ಅವರನ್ನು represent ಮಾಡುವ ಶಾಸಕರನ್ನು ಕರೆದು ಸಭೆ ಮಾಡಿದ್ದರೆ ಪರವಾಗಿಲ್ಲ. ಆದರೆ ಒಬ್ಬ ಐ.ಎ.ಎಸ್. ಅಧಿಕಾರಿ ಶಿಕ್ಷಕರ ಹೋರಾಟವನ್ನೇ ಹತ್ತಿಕ್ಕುವಂತಹ ಪ್ರಯತ್ನವನ್ನು ಮಾಡಿದರೆ ಅವರ ಕಷ್ಟವನ್ನು ಯಾರ ಹತ್ತಿರ ಹೇಳಿಕೊಳ್ಳಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಗಳೆ, ನಮ್ಮ ಐ.ಎ.ಎಸ್. ಅಧಿಕಾರಿ ಶಿಕ್ಷಕರ ಪರವಾಗಿಯೇ ಇದ್ದಾರೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೋರಾಟಕ್ಕೆ ಬರಬೇಡಿ ಎಂದು ಹೇಳಿದ್ದಾರೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಗಳೆ, ಹೋರಾಟಕ್ಕೆ ಬರುವವರನ್ನು suspend ಮಾಡಿ ಎಂದು WhatsApp ನಲ್ಲಿ ಹಾಕಿದ್ದಾರೆ. ಈ ರೀತಿ WhatsApp message ಕಳುಹಿಸಿದವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳುತ್ತೀರಿ ಅದನ್ನು ಹೇಳಿ. ಇದನ್ನು withdraw ಮಾಡಿಸುತ್ತೀರಾ?

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಮಂತ್ರಿಗಳ ಉತ್ತರವನ್ನು ಮೊದಲು ಪೂರ್ತಿಯಾಗಿ ಕೇಳಿ.

**ಶ್ರೀ ಪುಟ್ಟಣ್ಣ:–** ಮಂತ್ರಿಗಳು ಶಿಕ್ಷಕರ ಪರವಾಗಿಯೇ ಇದ್ದಾರೆ, ಮೊದಲು ಅವರ ಪರವಾಗಿ ಕೆಲಸವನ್ನು ಮಾಡಿದ್ದಾರೆ, ಈಗಲೂ ಮಾಡುತ್ತಿದ್ದಾರೆ. ದಯಮಾಡಿ ಈ ಆದೇಶವನ್ನು withdraw ಮಾಡಿಸಿ. ಈ ರೀತಿ ಆದೇಶ ಮಾಡಿರುವ ನಿಮ್ಮ ಐ.ಎ.ಎಸ್. ಅಧಿಕಾರಿಯನ್ನು ಅವರ ಕೆಲಸವನ್ನು ಬಿಡಿಸಿ ಶಿಕ್ಷಕರಿಗೆ ಕೊಡುತ್ತಿರುವಷ್ಟು ಸಂಬಳಕ್ಕೆ ಕೆಲಸ ಮಾಡಲು ಹೇಳಿ, ಅವರು ಎಷ್ಟು ವರ್ಷ ಕೆಲಸ ಮಾಡುತ್ತಾರೆ ಎಂದು ನೋಡೋಣ. ಮಲಗಲು ಜಾಗ, ನೀರು ಮತ್ತು ತಿಂಗಳಿಗೆ ಒಮ್ಮೆ ಸಂಬಳ ಕೇಳಿದರೆ ಅವರನ್ನು ಕೆಲಸದಿಂದ ತೆಗೆದುಬಿಡುತ್ತೇನೆ, ಎಲ್ಲರನ್ನು suspend ಮಾಡಿಬಿಡುತ್ತೇವೆ ಎಂದು ಹೇಳುತ್ತಾರೆ, ಇವರಿಗೇನು ಮನುಷ್ಯತ್ವ ಇದೆಯೇ ಇಲ್ಲವೆ?

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಗಳೆ, ಈಗ ಶಾಲೆಗಳು ಪ್ರಾರಂಭವಾಗಿವೆ, ಮಕ್ಕಳಿಗೆ ತೊಂದರೆಯಾಗುವುದು ಬೇಡ, ಅದಕ್ಕಾಗಿ ನೀವು ಇಲ್ಲಿಗೆ ಬರುವುದು ಬೇಡ, ನಿಮ್ಮ ಸಮಸ್ಯೆ ಏನು ಎನ್ನುವುದನ್ನು ಬರವಣಿಗೆಯಲ್ಲಿ ಕೊಡಿ ಅದನ್ನು ಬಗೆಹರಿಸುತ್ತೇವೆ ಎನ್ನುವ ದೃಷ್ಟಿಯಲ್ಲಿ ಆ ನೋಟಿಸ್‌ನ್ನು ಕೊಟ್ಟಿದ್ದಾರೆ. ಅವರನ್ನು ಕರೆದು ಅವರ ಸಮಸ್ಯೆ ಏನು ಎನ್ನುವುದನ್ನು ಚರ್ಚೆ ಮಾಡಿ ಎಂದು ನಾನು ಅಧಿಕಾರಿಗಳಿಗೆ ಹೇಳಿದ್ದೇನೆ. ಅವರ ಹಂತದಲ್ಲಿ ಬಗೆಹರಿಯದಿದ್ದರೆ ನಾನು ನೀವು ಕುಳಿತು ಮಾತನಾಡೋಣ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಗಳೆ, 12,000 ರೂ.ಗಳನ್ನು ಕೊಟ್ಟರೆ ಶಿಕ್ಷಕರು ಸಿಗುತ್ತಾರೆ ಎನ್ನುವ ಶಬ್ದ ಏನು ಇದು? ಮೊದಲು ಈ ಆದೇಶವನ್ನು ಹಿಂದಕ್ಕೆ ತೆಗೆದುಕೊಳ್ಳಲು ಹೇಳಿ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಆಂಜನೇಯ:–** ಆದುದರಿಂದ ಏನು ಸಮಸ್ಯೆ ಇಲ್ಲ. ಅದನ್ನು ನೋಡೋಣ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಗಳೆ, ಇಲ್ಲಿ arrogance ಇದೆ;

*“....Till new recruitment, we can run with guest teachers. With Rs.12,000/- salary, we will get good teachers.”*

ಎಂದು ಹೇಳಿದ್ದಾರೆ. ಅಂದರೆ 12,000 ರೂ.ಗಳ ಸಂಬಳವನ್ನು ಕೊಟ್ಟರೆ ಯಾರು ಬೇಕಾದರೂ ಬರುತ್ತಾರೆ ಎಂದು ಹೇಳಿದ್ದಾರೆ. ಈ ರೀತಿ ಆ ಅಧಿಕಾರಿ ಉದ್ಧಟತನದಿಂದ ವರ್ತಿಸಿದರೆ ಹೇಗೆ?

**ಶ್ರೀ ಎಚ್.ಆಂಜನೇಯ:–** ಉದ್ಧಟತನವಲ್ಲ...

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೆ, ಈ ಸುತ್ತೋಲೆ/message ಅನ್ನು ಸರ್ಕಾರ ಕಳುಹಿಸಿದೆಯೇ? ಇದನ್ನು ಕಳುಹಿಸಿದ್ದೀರಾ ಇಲ್ಲವೆ ಎನ್ನುವುದನ್ನು ದಯಮಾಡಿ ಮೊದಲು ನನಗೆ ಖಾತರಿ ಮಾಡಿ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಗಳೆ, ಮಕ್ಕಳ ವಿದ್ಯಾಭ್ಯಾಸದ ದೃಷ್ಟಿಯಿಂದ ನೀವು ಶಾಲೆಯನ್ನು ಬಿಟ್ಟು ಬರಬೇಡಿ, ನಿಮ್ಮ ಸಮಸ್ಯೆಯನ್ನು ನಾವು ಕೂಲಂಕಷವಾಗಿ, ಕಾನೂನಾತ್ಮಕವಾಗಿ ಪರಿಹರಿಸುತ್ತೇವೆ ನಿಮ್ಮ ಬಗ್ಗೆ ನಮಗೆ ಸಹಾನುಭೂತಿ ಇದೆ ಎನ್ನುವ ದೃಷ್ಟಿಯಿಂದ ಈ ಸುತ್ತೋಲೆಯನ್ನು ಕೊಟ್ಟಿರಬಹುದು ಎಂದು ನನಗನ್ನಿಸುತ್ತದೆ. ಇದರಿಂದ ಏನು ಸಮಸ್ಯೆ ಇಲ್ಲ. ಈಗ ಶಾಲೆಗಳು ಪ್ರಾರಂಭವಾಗಿವೆ, ಶಿಕ್ಷಕರು ಶಾಲೆಯನ್ನು ಬಿಟ್ಟು ಬಂದುಬಿಡುತ್ತಾರೆ. ಸಮಸ್ಯೆಗಳು ಇದ್ದರೆ ತಮ್ಮ ಮೂಲಕ, ನಮ್ಮ ಮೂಲಕ ಮಾತನಾಡಲಿ. ಶಿಕ್ಷಕರು ಇಲ್ಲದೆ ಮಕ್ಕಳಿಗೆ ಅನಾನುಕೂಲವಾಗಬಾರದು. ಬೇರೆ ಸಮಯದಲ್ಲಿ ಹೋರಾಟ ಮಾಡಲಿ.

**(667) 12.06.2017 / YL-BNS / 12.30**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಅವರ ಜೊತೆಯಲ್ಲಿ ಮಾತನಾಡಿದರೆ ಸಮಸ್ಯೆ ಬಗೆಹರಿಯುತ್ತದೆ. ಈ ರೀತಿ ಎಲ್ಲಾ ಏತಕ್ಕೆ ಮಾಡಿಕೊಂಡು ಕುಳಿತುಕೊಳ್ಳಬೇಕು.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಪುಟ್ಟಣ್ಣನವರು ಹೇಳಿದ ಹಾಗೆ ಸಚಿವರ ಕಾಳಜಿ ಕಳಕಳಿ ಬಗ್ಗೆ ನಮಗೆ ಆತಂಕವಿಲ್ಲ. ಸಚಿವರು ಮಾಡಲಿ. ಆದರೆ, ನನ್ನ ಪ್ರಶ್ನೆ, are we living in democracy or not? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಬದುಕುತ್ತಿದೆವೆಯೇ ಅಥವಾ ಇಲ್ಲವೇ ಎನ್ನತಕ್ಕಂಥದ್ದು ನಮ್ಮ ಪ್ರಶ್ನೆ. ಏಕೆಂದರೆ, ಇದು ಯಾವ ಸರ್ವಾಧಿಕಾರಿ ರಾಷ್ಟ್ರದಲ್ಲಿಯೂ ಬರದೇ ಇರತಕ್ಕಂಥ ಒಂದು ಸುತ್ತೋಲೆ. ಏನಾದರೂ ಚಳುವಳಿಯನ್ನು ಮಾಡಿದ್ದರೆ, ರೂ.12,000/- ಗಳನ್ನು ಕೊಟ್ಟು ಅತಿಥಿ ಶಿಕ್ಷಕರನ್ನು ತೆಗೆದುಕೊಂಡು ಪಾಠ ಮಾಡಿಸುತ್ತೇವೆ. ಹುಷಾರ್ ಎಂದರೆ ಏನರ್ಥವಿದು. ಶಿಕ್ಷಕರು ಕೇಳಿರುವುದಾದರು ಏನು? ಮೂಲ ಸೌಕರ್ಯಗಳನ್ನು ಮತ್ತು ಬಡ್ತಿಯನ್ನು ಕೇಳಿದ್ದಾರೆ. ಬಡ್ತಿ ಕೊಡಬೇಕಲ್ಲವೇ? ಈಗಾಗಲೇ 10 ವರ್ಷದಿಂದ ಖಾಯಂ ಸೇವೆ ಸಲ್ಲಿಸುತ್ತಿರತಕ್ಕಂಥ ಶಿಕ್ಷಕರು ಹಾಗೂ ಉಪನ್ಯಾಸಕರು ಅಲ್ಲಿದ್ದಾರಲ್ಲವೇ?

**ಸಭಾಪತಿಯವರು:-** ಸರಿ, ಮಾನ್ಯ ಸಚಿವರು ಮಾತನಾಡುತ್ತಾರೆ.

**ಶ್ರೀ ಶರಣಪ್ಪ ಮಟ್ಟೂರ್:-** ಮಾನ್ಯ ಸಭಾಪತಿಯವರೆ, ಒಳ್ಳೆಯ ವಿಚಾರವನ್ನು ಮಾನ್ಯ ಅರುಣ ಶಹಾಪುರರವರು ಪ್ರಸ್ತಾಪಿಸಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಎಲ್ಲಾದರೂ ಧಮ್ಕಿ ಉಂಟಾ...

**ಶ್ರೀ ಶರಣಪ್ಪ ಮಟ್ಟೂರ್:-** ಮಾನ್ಯ ಸಭಾಪತಿಯವರೆ, ದಯಮಾಡಿ ಇಲ್ಲಿ ಬಹಳ important issue ಇದೆ. ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಸಚಿವರು ಕೆಲವು ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಂಡು, ಶಿಕ್ಷಕರನ್ನು absorb ಮಾಡಿದ್ದಾರೆ, though they are not entitled for absorption as per Rules, ಉಚ್ಚ ನ್ಯಾಯಾಲಯದ ಆದೇಶದ ರೀತ್ಯಾ, ಶಿಕ್ಷಕರನ್ನು absorb ಮಾಡಿದ್ದಾರೆ. ಮೊದಲನೆಯದಾಗಿ ಅದಕ್ಕೆ ಧನ್ಯವಾದಗಳನ್ನು ಹೇಳುತ್ತೇನೆ. ಎರಡನೆಯದಾಗಿ, ತಾವು ಏನು ದಿನಾಂಕ: 09.06.2017 ರಂದು ಒಂದು ಆದೇಶವನ್ನು ಹೊರಡಿಸಿದ್ದೀರಿ. ಮಾನ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಮತ್ತು ಮಾನ್ಯ ಅರುಣ ಶಹಾಪುರರವರು ಈಗ ಓದಿ ಹೇಳಿದ ಪ್ರಕಾರ, ಇದರಲ್ಲಿ ಈ ರೀತಿ ಇದೆ:

> *"If anybody sits on strike on Freedom Park, take video and check attendance. Go ahead and suspend all of them. Till new recruitment, we can run with guest teachers. With Rs.12,000/- salary, we will get good teachers."*

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

The language which they have used in issuing this order, amounts to violation of Article 19 of Constitution of India. They can't do it. There is no such provision.

**ಸಭಾಪತಿಯವರು:–** ಆಯ್ತು, ಮಾನ್ಯ ಸದಸ್ಯರು ಹಾಗೂ ನೀವು ಏನು ಪ್ರಶ್ನೆಯನ್ನು ಎತ್ತಿ ಹಿಡಿದಿದ್ದೀರಿ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ನೀಡುತ್ತಾರೆ.

**ಶ್ರೀ ಶರಣಪ್ಪ ಮಟ್ಟೂರ್:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ.

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರವನ್ನು ಹೇಳಬೇಕಲ್ಲ. ತಮಗೆ ಉತ್ತರ ಬೇಡವೇ?

**ಶ್ರೀ ಶರಣಪ್ಪ ಮಟ್ಟೂರ್:–** ಮಾನ್ಯ ಸಭಾಪತಿಯವರೆ, ಉತ್ತರ ಬೇಕು.

**ಸಭಾಪತಿಯವರು:–** ಹಾಗಾದರೆ, ಮಾನ್ಯ ಸಚಿವರು ಹೇಳಲಿ.

**ಶ್ರೀ ಶರಣಪ್ಪ ಮಟ್ಟೂರ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಲ್ಲಿ ಕಳಕಳಿ ಇದೆ. ಇದನ್ನು ಅರ್ಥ ಮಾಡಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ.

**ಸಭಾಪತಿಯವರು:–** ಈಗಾಗಲೇ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು, are you going to withdraw it? ಎಂದು ಕೇಳಿದ್ದಾರೆ. ಸಚಿವರು ಹಿಂತೆಗೆದುಕೊಳ್ಳುತ್ತಾರೆಯೋ, ಇಲ್ಲವೋ ಎಂಬುದನ್ನು ಕೇಳೋಣ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ದಯಮಾಡಿ ಮಾನ್ಯ ಸಚಿವರೆ ಒಂದು ವೇಳೆ ತಾವು ಕಳುಹಿಸಿದ್ದರೆ, ಅದನ್ನು ಹಿಂಪಡೆದುಕೊಳ್ಳಿ.

**ಸಭಾಪತಿಯವರು:–** ಮಾನ್ಯ ಸಚಿವರು ಹೇಳುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ನಮಗೆ ಪ್ರಶ್ನೆ ಬೇಡ.

**ಸಭಾಪತಿಯವರು:–** ಮಾನ್ಯ ಸಚಿವರೆ ನನಗೆ ಕಳುಹಿಸಿರುವ ಸುತ್ತೋಲೆಯನ್ನು ತಾವು ಹಿಂಪಡೆದುಕೊಳ್ಳಬೇಕೆಂದು ಮಾನ್ಯ ಸದಸ್ಯರೆಲ್ಲರೂ ಕೇಳುತ್ತಿದ್ದಾರೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಆಯ್ತು. ನಮ್ಮ ಅಧಿಕಾರಿಗಳು ಕೊಟ್ಟಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಿಗೆ ಹಿಂಪಡೆದುಕೊಳ್ಳುವುದಕ್ಕೆ ಹೇಳಿ.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಗೆ ನಾನು ಮಾತನಾಡಲು ಬಿಡುವುದಕ್ಕೆ ಹೇಳಿ.

**ಸಭಾಪತಿಯವರು:-** ಸಚಿವರು ಮಾತನಾಡುವುದಕ್ಕೆ ಬಿಡಿ.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ನಮ್ಮ ಅಧಿಕಾರಿಗಳು ಯಾವುದೇ ಶಿಕ್ಷಕರ, ಕಾರ್ಮಿಕರ ಹಕ್ಕನ್ನು ಹತ್ತಿಕಬೇಕೆನ್ನುವ ದೃಷ್ಟಿಯಿಂದ ಈ ಸುತ್ತೋಲೆಯನ್ನು ಕೊಟ್ಟಿಲ್ಲ. ಮಕ್ಕಳ ದೃಷ್ಟಿಯಿಂದ ಕೊಟ್ಟಿದ್ದಾರೆ. ಒಂದು ಪಕ್ಷ ಆ ರೀತಿ ಸುತ್ತೋಲೆ ಮಾಡಿದ್ದರೆ ಅದನ್ನು ನಾವು ತಡೆಹಿಡಿಯುತ್ತೇವೆ ಬಿಡಿ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2783**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೆ, ಮೇಲಿನ ಎರಡು ಪ್ರಶ್ನೆಗಳಿಗೆ ಮಾನ್ಯ ಸಚಿವರು ಬರೋಬ್ಬರಿ information ಕೊಟ್ಟಿದ್ದಾರೆ. ಮೂರನೆಯ ಪ್ರಶ್ನೆಗೆ ಸಂಬಂಧಪಟ್ಟಂತೆ ನಾನು ಸಚಿವರಿಗೆ ಮನವಿ ಮಾಡುವುದೇನೆಂದರೆ, ದೌರ್ಜನ್ಯಕ್ಕೆ ಒಳಗಾದವರ ವಿಷಯಕ್ಕೆ ಸಂಬಂಧಿಸಿದಂತೆ Charge Sheet ಹಾಕುವುದಕ್ಕೆ 90 ದಿನಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಯಾರು ದೌರ್ಜನ್ಯವನ್ನು ಎಸಗಿರುತ್ತಾರೆಯೋ ಅವರು 90 ದಿನಗಳಲ್ಲಿ ಛಿಚಿಡಿಂಜ Sheet ರದ್ದು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. 90 ದಿನಗಳ ಬದಲಿಗೆ ಆದಷ್ಟು ಶೀಘ್ರವಾಗಿ 30 ದಿನಗಳಲ್ಲಿ ವಿಚಾರಣೆಯನ್ನು ಪೂರ್ಣಗೊಳಿಸಿ, Charge Sheet ಹಾಕುವಂತಹ ಕೆಲಸವನ್ನು ದಯವಿಟ್ಟು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಆ cases ಗಳಲ್ಲಿ represent ಮಾಡುವುದಕ್ಕೆ Public Prosecutors ಅನ್ನು ನೇಮಿಸುತ್ತಾರೆ. ಅದರ ಬದಲಾಗಿ ಯಾರು ದೌರ್ಜನ್ಯಕೊಳಗಾಗಿರುತ್ತಾರೆಯೋ ಅವರು ಅವರಿಗೆ ಬೇಕಾದಂತಹ ವಕೀಲರನ್ನು ನೇಮಿಸಿಕೊಳ್ಳುವುದಕ್ಕೆ ಮಾನ್ಯ ಸಚಿವರ ಕಡೆಯಿಂದ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮೂರನೆಯದಾಗಿ ಇಂತಹ ಒಂದು ದೌರ್ಜನ್ಯಗಳು ಹಳ್ಳಿಯಲ್ಲಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಎಲ್ಲಿ ಆಗುತ್ತದೆಯೋ ಅಂತಹ ಕಡೆಗಳಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸದಸ್ಯರು ಕೂಡಿ ಅಲ್ಲಿ ಒಂದು 'Peace Committee' ಯನ್ನು ಮಾಡಿ, ಈ ರೀತಿಯ ದೌರ್ಜನ್ಯಗಳು ಕನಿಷ್ಠ ಪಕ್ಷ ಇನ್ನು ಮುಂದಾದರೂ ಆಗದಂತೆ ನೋಡಿಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಮೂರು ಪ್ರಶ್ನೆಗಳನ್ನು ಎತ್ತಿದ್ದಾರೆ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಸದಸ್ಯರು ಬಹಳ ಕಳಕಳಿಯಿಂದ ಪ್ರಸ್ತಾಪ ಮಾಡಿದ್ದಾರೆ. ದಲಿತರ ಮೇಲೆ ದೌರ್ಜನ್ಯ ನಡೆದಂತಹ ಸಂದರ್ಭದಲ್ಲಿ ಸಕಾಲದಲ್ಲಿ ಅವರಿಗೆ ಪರಿಹಾರ ನೀಡಬೇಕು. ನಂತರ ಅವರಿಗೆ ರಕ್ಷಣೆ ನೀಡಬೇಕು. ಸಮಾಜದಲ್ಲಿ ಅಶಾಂತಿ ಉಂಟಾಗಬಾರದು. ಅಂತಹ ಸಂದರ್ಭದಲ್ಲಿ ಗ್ರಾಮ ಮಟ್ಟದಲ್ಲಿ ಕೂಡಲೇ ಸಭೆಯನ್ನು ಮಾಡಿ, ಸಮಸ್ಯೆಗಳನ್ನು ಇತ್ಯರ್ಥ ಪಡಿಸುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿದ್ದಾರೆ. ಜಿಲ್ಲಾ ಮಟ್ಟದಲ್ಲಿ, ಜಿಲ್ಲಾಧಿಕಾರಿಗಳ ಮಟ್ಟದಲ್ಲಿ Vigilance Committee ಎಂದು ಇದೆ. ತಾಲ್ಲೂಕು ಮಟ್ಟದಲ್ಲಿಯೂ ಕೂಡ ಈ ಸಮಿತಿ ಇದೆ. ನಾವು ಈ ಸಮಿತಿಯನ್ನು ಸ್ವಲ್ಪ ಬಲಪಡಿಸುತ್ತೇವೆ. ಜೊತೆಗೆ ಯಾರು cases ಹಾಕುತ್ತಾರೆ, ಆ ಕೇಸಿನ ಸರ್ಕಾರಿ ವಕೀಲರು ಸರಿಯಾಗಿ ವಾದ ಮಂಡಿಸದೆ cases ಗಳನ್ನು weaken ಮಾಡುತ್ತಾರೆ. ಆದುದರಿಂದ ದೌರ್ಜನ್ಯಕ್ಕೊಳಗಾದವರಿಗೂ ಕೂಡ ವಕೀಲರನ್ನು ನೇಮಿಸಿಕೊಳ್ಳುವುದಕ್ಕೆ ಸಹಾಯ ಮಾಡಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಗಂಭೀರವಾಗಿ ಪರಿಶೀಲನೆಯನ್ನು ಮಾಡಿ, ಇದರ ಬಗ್ಗೆ ಕ್ರಮಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೆ, ಈ ಸಂದರ್ಭದಲ್ಲಿ ಇನ್ನೊಂದು ಪ್ರಶ್ನೆಯೆನೆಂದರೆ, false Caste Certificate ಪಡೆಯುತ್ತಾರೆ. False Caste Certificate ನ್ನು ತೆಗೆದುಕೊಂಡು, ಕೆಲಸವನ್ನು ಪಡೆದುಕೊಳ್ಳುತ್ತಾರೆ. ಆದರೆ, ಬಹಳ ದಿವಸದ ನಂತರ ವಿಚಾರಣೆ ಆದ ಮೇಲೆ ಅಂತಹವರನ್ನು ಕೆಲಸದಿಂದ ತೆಗೆಯುತ್ತಾರೆ. ಅದಕ್ಕಾಗಿ, false Caste Certificate ಯಾರು ನೀಡುತ್ತಾರೆಯೋ, ಅಂತಹ ಅಧಿಕಾರಿಗಳ ಮೇಲೆ ಮೊದಲು ಕ್ರಮವನ್ನು ತೆಗೆದುಕೊಳ್ಳಬೇಕು. ಆದಾದ ಮೇಲೆ ಕೆಲಸಕ್ಕೆ ಸೇರುವ ಮೊದಲು ಸುಳ್ಳು ಪ್ರಮಾಣ ಪತ್ರವನ್ನು ಯಾರು ತೆಗೆದುಕೊಳ್ಳುತ್ತಾರೆಯೋ ಅಂತಹವರನ್ನು ಕೆಲಸದಿಂದ ವಜಾಗೊಳಿಸಿ, ಅವರಿಗೆ ಶಿಕ್ಷೆಯಾಗುವ ರೀತಿ ನೋಡಿಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಅದನ್ನು ಕೂಡ ಬಹಳ ಕಟ್ಟುನಿಟ್ಟಾಗಿ ಯಾವ ಸಕ್ಷಮ ಪ್ರಾಧಿಕಾರಕ್ಕೆ ಜಾತಿ ದೃಢೀಕರಣ ಪತ್ರವನ್ನು ಕೊಡತಕ್ಕಂಥ ಅಧಿಕಾರ ಇದೆಯೋ ಅಂತಹವರಿಗೆ ನಾವು ಬಹಳ ಕಟ್ಟೆಚ್ಚರವನ್ನು ನೀಡಿದ್ದೇವೆ. ಯಾವುದೇ ಒಂದು ಜಾತಿ ಸೂಚಕ ಪ್ರಮಾಣ ಪತ್ರವನ್ನು ಕೊಡಬೇಕಾದಂತಹ ಸಂದರ್ಭದಲ್ಲಿ ಇಡೀ ಅವರ ಕುಟುಂಬವನ್ನೆಲ್ಲಾ ಜಾಲಾಡಬೇಕು. ವಂಶವೃಕ್ಷವನ್ನೆಲ್ಲಾ ನೋಡಬೇಕು. ಆ ಜಾತಿಗೆ ಅವರು ಒಳಪಟ್ಟಿರುತ್ತಾರೆಯೋ ಇಲ್ಲವೋ ಎಂಬುದನ್ನು ನೋಡಿ ಪ್ರಮಾಣ ಪತ್ರವನ್ನು ಕೊಡಬೇಕು. ಒಂದು ವೇಳೆ ಯಾರದೋ ಒತ್ತಡಕ್ಕೆ ಅಥವಾ ಆಮಿಶಕ್ಕೆ ಒಳಗಾಗಿ ಏನಾದರೂ ಕೊಟ್ಟರೆ, ಅಧಿಕಾರಿಗಳನ್ನೇ ಶಿಕ್ಷೆಗೆ ಒಳಪಡಿಸಲಾಗುವುದೆಂಬ ಎಚ್ಚರಿಕೆಯನ್ನು ಕೊಟ್ಟಿದ್ದೇವೆ. ಈಗ ಸುಳ್ಳು ಪ್ರಮಾಣ ಪತ್ರದ ಬಗ್ಗೆ ಕೂಡ ವಿಚಾರಣೆ ಮಾಡುವುದಕ್ಕಾಗಿ ನಮ್ಮಲ್ಲಿಯೇ ಒಂದು Cell ಇದೆ ಹಾಗೂ ಕೆಲವು ವಿಶೇಷವಾದಂತಹ ನ್ಯಾಯಾಲಯಗಳನ್ನು ಕೂಡ ಮಾಡಿದ್ದೇವೆ. ಸುಳ್ಳು ಪ್ರಮಾಣ ಪತ್ರಗಳ ವಿತರಣೆಯನ್ನು ತಡೆಗಟ್ಟುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರು ಪ್ರಶ್ನೆಯನ್ನು ಕೇಳುತ್ತಾರೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ಈ false Caste Certificates ಕೊಡುವಂತಹ ವಿಚಾರದಲ್ಲಿ ಮಾನ್ಯ ಸಚಿವರು ಏನು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ನಿರ್ವಹಿಸುತ್ತಿರುವಂತಹ ಕೆಲಸ ಸರಿಯಿದೆ. ಸಮಸ್ಯೆ ಏನಾಗಿದೆಯೆಂದರೆ, ಕೆಲಸಕ್ಕೆ ಸೇರಿಕೊಂಡು ಎಲ್ಲಾ ರೀತಿಯ ಸವಲತ್ತನ್ನು ಪಡೆದುಕೊಂಡು, 30 ವರ್ಷ ಸೇವೆಯನ್ನು ಸಲ್ಲಿಸಿ, ನಿವೃತ್ತಿ ಹೊಂದಿ ಮನೆಗೆ ಹೋದ ಮೇಲೆ ಅವರ ಜಾತಿ ಪ್ರಮಾಣ ಪತ್ರ ಸುಳ್ಳು ಎಂದು ಕೊಡುತ್ತಾರೆ. ಶ್ರೀ ಪಾಲಾಕ್ಷಯ್ಯ ಎಂಬ ಜಿಲ್ಲಾ ನ್ಯಾಯಾಧೀಶರ ಬಗ್ಗೆ ಇವತ್ತಿನ ಪತ್ರಿಕೆಯಲ್ಲಿ ಒಂದು ವರದಿಯಾಗಿದೆ. ಒಂದು ಸುಳ್ಳು ಪ್ರಮಾಣ ಪತ್ರವನ್ನು ಕೊಟ್ಟು ಜಿಲ್ಲಾ ನ್ಯಾಯಾಧೀಶರಾಗಿ ನ್ಯಾಯಾಂಗದಲ್ಲಿ ಕೆಲಸ ಮಾಡಿ, ನಿವೃತ್ತಿ ಹೊಂದಿದ ಮೇಲೆ ಅವರ ಜಾತಿ ಪ್ರಮಾಣ ಪತ್ರ ಸುಳ್ಳೆಂದು ತಿಳಿದು ಬಂದಿದೆ. ಹಾಗಾಗಿ ಇದಕ್ಕೆ ಒಂದು ಕಾಲಮಿತಿ ಎಂಬುದು ಇರಬೇಕು. ಸಮಾಜ ಕಲ್ಯಾಣ ಇಲಾಖೆಯವರು ಏನು ಜಾತಿ ಪ್ರಮಾಣ ಪತ್ರಗಳನ್ನು ಕೊಡುತ್ತಾರೆಯೋ, ಅವರಿಗೆ ದೂರು ಬಂದಾಗ, ಅದರ ವಿಚಾರಣೆಗೆ ಒಂದು ಕಾಲಮಿತಿಯನ್ನು ನಿಗದಿ ಮಾಡಬೇಕು. ಇದಕ್ಕೆ ಸೂಕ್ತ ತಿದ್ದುಪಡಿಯನ್ನು ತಂದು ಮಾಡಿದರೆ, ಕನಿಷ್ಠ ಪಕ್ಷ ಆ ವ್ಯಕ್ತಿಯ ವಿರುದ್ಧ allegation ಬಂದಾಗ, ಮಾನ್ಯ ಸಚಿವರು ಏನು the Scheduled Castes and Scheduled Tribes (Prevention of Atrocities) Act ನ ಅಡಿಯಲ್ಲಿ ವಿಶೇಷ ನ್ಯಾಯಾಲಯವನ್ನು ಮಾಡಿ provision ಮಾಡಿದ್ದಾರೆಯೋ, ಅದೇ ರೀತಿ ಇದಕ್ಕೂ ಕೂಡ ಒಂದು ತಿದ್ದುಪಡಿಯನ್ನು ತಂದು, ಕಾಲಮಿತಿಯನ್ನು ಮಾಡಿದ್ದರೆ, ಕನಿಷ್ಠ ಅವರು



"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿರತಕ್ಕಂಥ ತಪ್ಪು ತಕ್ಷಣವೇ ಹೊರಗೆ ಬರುತ್ತದೆ. ಅದನ್ನು ಬಿಟ್ಟು, ಸರ್ಕಾರಿ ಕೆಲಸಕ್ಕೆ ಬಂದವರೆಲ್ಲರೂ ನ್ಯಾಯಾಲಯಕ್ಕೆ ಹೋಗುವುದು, ತಡೆಯಾಜ್ಞೆಯನ್ನು ತರುವುದು, ನಂತರ ಸಿವಿಲ್ ಕೋರ್ಟ್‌ನಲ್ಲಿ ಸಮಯವನ್ನು ತಳ್ಳುತ್ತಾರೆ. ಅವರ ನಿವೃತ್ತಿಯ ನಂತರ ತೀರ್ಪು ಬರುತ್ತದೆ. ಬಹುತೇಕ ಪ್ರಕರಣಗಳು ಈ ರೀತಿ ಆಗುತ್ತಿದೆ. ದಯಮಾಡಿ ಇದಕ್ಕೆ ಸರ್ಕಾರ ತಿದ್ದುಪಡಿಯನ್ನು ತರಬೇಕು. ಇದಕ್ಕೆ ಕಾಲಮಿತಿಯನ್ನು ಹಾಕಬೇಕು. ಕಾಲಮಿತಿಯನ್ನು ಹಾಕಿ, ತಕ್ಷಣವೇ ಪರಿಶೀಲನೆ ಮಾಡಿ, ಯಾರು ಸುಳ್ಳು ಜಾತಿ ಪ್ರಮಾಣ ಪತ್ರವನ್ನು ನೀಡುತ್ತಾರೆಯೋ ಅವರನ್ನು ಜೈಲಿಗೆ ಕಳುಹಿಸುವಂತಹ ಕೆಲಸವೂ ಆಗಬೇಕು.

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಹೌದು. ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ನಾವು.....

ಶ್ರೀ **ಶರಣಪ್ಪ ಮಟ್ಟೂರ್:–** ಮಾನ್ಯ ಸಭಾಪತಿಯವರೆ, ನೋಡಿ ಮಾನ್ಯ ಸಚಿವರೆ provisions ಇದೆ. ಇಲ್ಲವೆಂದಲ್ಲ. ಇಲ್ಲಿ ಪ್ರಶ್ನೆ ಏನಾಗಿದೆಯೆಂದರೆ, ನಾವು ಸಾಕಷ್ಟು cases ಗಳನ್ನು ನೋಡಿದ್ದೇವೆ. ಮಾನ್ಯ ಹೊರಟ್ಟಿಯವರು ಭರವಸೆ ಸಮಿತಿಯ ಸಭೆಯಲ್ಲಿ ಇದ್ದಾಗ ಈ ವಿಚಾರದ ಬಗ್ಗೆ 32 ಇಲಾಖೆಗಳ ಜೊತೆ ಬಹಳ ಆಳವಾಗಿ discussion ಮಾಡಿದ್ದೇವೆ. ಏನೆಂದರೆ, ಮೊದಲನೆಯದಾಗಿ, Rule 214(3) of Karnataka Civil Service Rules ಅನ್ನು ಯಾರು follow ಮಾಡುವುದಿಲ್ಲ. ಎರಡನೆಯದಾಗಿ, Section 468 of the Code of Criminal Procedure. ಇದನ್ನು ಕೂಡ ಯಾರು follow ಮಾಡುವುದಿಲ್ಲ. ಹಾಗಾಗಿ ಹತ್ತತ್ತು ವರ್ಷ, ಇಪ್ಪತ್ತು ವರ್ಷಗಳ ಕಾಲ ಪ್ರಕರಣಗಳು ಸಾವಿರಾರು ಕೋಟಿಗಳ ಭ್ರಷ್ಟಾಚಾರದಲ್ಲಿ ದಾಖಲೆಗಳಿದ್ದರೂ ಕೂಡ ಎಲ್ಲಾ ಇಲಾಖೆಗಳಲ್ಲಿ, I am not particularly alleging against anybody.

**ಸಭಾಪತಿಯವರು:–** ಈಗ ಅಷ್ಟೇ. Scheduled Castes and Scheduled Tribes ಗಳ ಬಗ್ಗೆ ಚರ್ಚೆ ಮಾಡಿ.

**ಶ್ರೀ ಶರಣಪ್ಪ ಮಟ್ಟೂರ್:–** ಮಾನ್ಯ ಸಭಾಪತಿಯವರೆ, ಅದಕೋಸ್ಕರ ಮಾನ್ಯ ಸಚಿವರಿಗೆ ಒಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಅದೇನೆಂದರೆ, there are sufficient provisions. ಮೊನ್ನೆ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಪಾಲಾಕ್ಷಯ್ಯ ಎಂಬ ನಿವೃತ್ತಿ ನ್ಯಾಯಾಧೀಶರ ಬಗ್ಗೆ false/concocted documents ತೆಗೆದುಕೊಂಡು, ಅದನ್ನು ನೀಡಿ ನೌಕರಿಯನ್ನು ಪಡೆದು ನಿವೃತ್ತಿಯಾದ ಮೇಲೆ ಅದನ್ನು ಈಗ unearth ಮಾಡಿ, ಈಗ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗುತ್ತಿದ್ದಾರೆ. ಇದರಿಂದ ಏನು ಪ್ರಯೋಜನ? ಅದಕೋಸ್ಕರ ಆಗಿಂದಾಗ್ಗೆ ಯಾವ ಒಂದು ಪ್ರಕರಣಗಳು ಅಧಿಕಾರಿಗಳ ಮೇಲೆ ಬರುತ್ತದೆಯೋ, ಕೂಡಲೇ ಅವರ ಮೇಲೆ cases ಅನ್ನು ಹಾಕುವ ವ್ಯವಸ್ಥೆಯನ್ನು ಮಾಡಬೇಕು.

**ಸಭಾಪತಿಯವರು:–** ಆಯ್ತು, ಸದಸ್ಯರು ಒಳ್ಳೆಯ ಸಲಹೆಯನ್ನು ಕೊಡುತ್ತಿದ್ದಾರೆ. ಮಾನ್ಯ ಸಚಿವರೆ ನಿಮ್ಮ ಅಭಿಪ್ರಾಯವನ್ನು ತಿಳಿಸಿ.

**ಶ್ರೀ ಶರಣಪ್ಪ ಮಟ್ಟೂರ್:–** ಮಾನ್ಯ ಸಭಾಪತಿಯವರೆ, at the same time, ಇಲಾಖಾ ವಿಚಾರಣೆಯನ್ನು ಕೂಡ ಮಾಡಬೇಕು. There is no such impediment or embargo to initiate parallel proceedings against the corrupt officials or any person who has created any document to get the job gaining the benefits of Scheduled Castes or Scheduled Tribes, ಎನ್ನತಕ್ಕಂಥ ಸಲಹೆಯನ್ನು ನಾನು ಕೊಡುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರು, ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ ಹೇಳಿ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಮೀಸಲಾತಿ ಕೊಟ್ಟಿರತಕ್ಕಂಥ ಪರಿಕಲ್ಪನೆಯೆನೆಂದರೆ, ಎಸ್‌ಟಿ/ಎಸ್‌ಸಿ ಸಮುದಾಯದವರು ಶತಶತಮಾನಗಳಿಂದ ತುಳಿತಕ್ಕೊಳಗಾಗಿದ್ದಾರೆ, ಅನ್ಯಾಯಕ್ಕೊಳಗಾಗಿದ್ದಾರೆ. ಈ ಸಮಾಜ ಎಸ್‌ಟಿ/ಎಸ್‌ಸಿ ಸಮುದಾಯದವರನ್ನು ಪ್ರತ್ಯೇಕವಾಗಿಟ್ಟಿದೆ. ಮನುಷ್ಯರಂತೆ ನೋಡಲಿಲ್ಲ. ನಾಯಿ–ನರಿಗಳಿಗಿಂತಲೂ ಕೂಡ ಕಡೆಯಾಗಿ ನೋಡುತ್ತಿದ್ದಾರೆ. ಅಂತಹವರಿಗೆ ಮೀಸಲಾತಿಯನ್ನು ಕೊಟ್ಟು, ಅವರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ತರಬೇಕೆಂಬ ದೃಷ್ಟಿಯನ್ನಿಟ್ಟುಕೊಂಡು ನಮ್ಮ ರಾಷ್ಟ್ರವನ್ನಾಳಿದಂತಹ ಮಹಾನ್ ನಾಯಕರಾದ ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಆಶಯದಂತೆ ಸಂವಿಧಾನ ಜಾರಿಗೆ ಬಂತು.

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**(668) 12.06.2017 12.40 ಬಿಎಸ್‌ಡಿ–ಕೆಎಸ್(ಜಿಆರ್)**

ಶ್ರೀ ಹೆಚ್.ಆಂಜನೇಯ (ಮುಂದು)

ಅದು ಜಾರಿಗೆ ಬಂದ ನಂತರ ಜನರಿಗೆ ದುರಾಸೆ ಹೆಚ್ಚಾಗಿ ಸುಳ್ಳುಗಳನ್ನು ಹೇಳಿ, ಆ ಜಾತಿಗೆ ಸೇರಿದ್ದೇನೆ ಎಂದು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದುಕೊಂಡು ನ್ಯಾಯಾಲಯಕ್ಕೆ ಹೋದರೆ ಹೇಗೆ? ಇದನ್ನು ಯಾರಿಗೆ ಕೇಳುವುದು? ಕುರಿ ತೋಳದ ಹತ್ತಿರ ನ್ಯಾಯ ಕೇಳಿದಂತೆ ಆಯಿತು! ಈ ರೀತಿ ಆಗಿಬಿಟ್ಟಿದೆ. ಇದು ಮಾತ್ರವಲ್ಲ ಒಬ್ಬ ಚೀಫ್ ಇಂಜಿನಿಯರ್ ಸುಳ್ಳು ಪ್ರಮಾಣಪತ್ರ ತೆಗೆದುಕೊಂಡು ವಿಧಾನ ಸೌಧವನ್ನೇ ಕಟ್ಟಿಬಿಟ್ಟಿದ್ದಾನೆ. ಆದ್ದರಿಂದ ಇಂತಹವುಗಳನ್ನು ನಾವು ನೋಡಿದ್ದು, ಇಂತಹವುಗಳನ್ನು ತಡೆಗಟ್ಟಲು ಹಾಗೂ ಖದೀಮರಿಗೆ ಶಿಕ್ಷೆ ನೀಡಲು ಉಗ್ರವಾದ ಶಾಸನವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಜಾರಿಗೆ ಬರಬೇಕು. ಈ ಬಗ್ಗೆ ನಮ್ಮ ಸರ್ಕಾರ ಗಂಭೀರವಾಗಿ ಪರಿಶೀಲನೆ ಮಾಡುತ್ತದೆ ಮತ್ತು ಮಾನ್ಯ ಸದಸ್ಯರ ಸಲಹೆಯನ್ನು ನಾನು ಹೃತ್ಪೂರ್ವಕವಾಗಿ ಸ್ವೀಕಾರ ಮಾಡಿದ್ದೇನೆ. ಧನ್ಯವಾದಗಳು.

(ಆ) **ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೆ.ಆರ್. ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ದಿನಾಂಕ 12ನೇ ಜೂನ್ 2017ರ ಸಮೂಹ 1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 130 ಪ್ರಶ್ನೆಗಳ ಪೈಕಿ 54 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಉತ್ತರಗಳನ್ನು ಲಗತ್ತಿಸಲಾಗಿದೆ)

**2. ಸದಸ್ಯರುಗಳು ಕೇಳಿದ ಚುಕ್ಕೆ ಗುರುತಿಲ್ಲದ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡದಿರುವ ಬಗ್ಗೆ.**

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ರಮೇಶ್‌ಕುಮಾರ್ ರವರು 134 ಪ್ರಶ್ನೆಗಳಿಗೆ 54 ಉತ್ತರಗಳನ್ನು ಮಂಡಿಸಿರುವ ಬಗ್ಗೆ ಗಮನಿಸಬೇಕು. ಮೊನ್ನೆ ಮಾನ್ಯ ಕಂದಾಯ ಸಚಿವರು ಕಡಿಮೆ ಸಂಖ್ಯೆಯ ಉತ್ತರಗಳನ್ನು ಕೊಟ್ಟರು. ಉತ್ತರ ಮಂಡಿಸುವ ಮಂತ್ರಿಗಳು ಮಾತ್ರ ಬದಲಾವಣೆಯಾಗುತ್ತಿದ್ದಾರೆ. ಇದರಿಂದ ನಾವು ಸುಮ್ಮನೆ ಪ್ರಶ್ನೆ ಕೇಳವುದನ್ನೇ ಬಿಟ್ಟುಬಿಡೋಣ ಎಂದು ಯೋಚನೆ ಮಾಡುತ್ತಿದ್ದೇವೆ. ಪ್ರಶ್ನೆಗಳನ್ನು ಏಕೆ ಕೇಳಬೇಕು? ಸರ್ಕಾರದಿಂದ ಉತ್ತರ ಬರುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಉತ್ತರಗಳನ್ನು ಕೊಟ್ಟೇ ಕೊಡುತ್ತೇವೆ ಎಂದು ದೊಡ್ಡ ಭರವಸೆಯ ಮಾತನ್ನು ಹೇಳಿದರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉತ್ತರಗಳನ್ನು ಯಾವಾಗ ಕೊಡುತ್ತಾರೆ? ಏನು ಕತೆ? ಸದನ ಮುಕ್ತಾಯವಾಗುವುದರೊಳಗೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಅದರಂತೆ ಉತ್ತರಗಳನ್ನು ಕೊಡುತ್ತಾರೆಯೇ? ಅವರು ಖಡಕ್ ಆಗಿ ಅನೇಕ ಸಾರಿ ಮಾತನಾಡುತ್ತಾರೆ. ಅಧಿಕಾರಿಗಳು ಸಂಬಳ ತೆಗೆದುಕೊಳ್ಳುವುದಿಲ್ಲವೇ? ನಾವು 10 ದಿನಗಳ ಮುಂಚೆ ಪ್ರಶ್ನೆಗಳನ್ನು ಕಳುಹಿಸಿರುತ್ತೇವೆ. ಉತ್ತರ ಕಳುಹಿಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಸರ್ಕಾರಕ್ಕೆ ಇರುವ ತೊಂದರೆ ಏನು? ಅಧಿಕಾರಿಗಳ ಮರ್ಜಿಯಲ್ಲಿ ಇದ್ದಾರೆಯೇ? ದಯವಿಟ್ಟು ಇದನ್ನು ಕ್ಲಿಯರ್ ಮಾಡಿ ಉತ್ತರ ಕೊಡಬೇಕು. ವಿರೋಧ ಪಕ್ಷದ ನಾಯಕನಾಗಿ ನನ್ನ ಕರ್ತವ್ಯವನ್ನು ನಾನು ಮಾಡುತ್ತೇನೆ. ಸರ್ಕಾರದ ಕರ್ತವ್ಯವಾಗಿ ಅವರು ಸ್ಪಷ್ಟ ಮಾಡಬೇಕು.

**ಶ್ರೀ ಕೆ.ಆರ್. ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರತಿಪಕ್ಷದ ನಾಯಕರು ಕೇಳಿರುವುದು ಸರಿಯಾಗಿದೆ. ನಾನು ಓದುವಾಗಲೇ ಇವತ್ತು ಈ ಜವಾಬ್ದಾರಿ ನನಗೆ ವಹಿಸಿದ್ದಾರೆ ಅಂದುಕೊಂಡೆನು. ಇದು ತೃಪ್ತಿ ಮತ್ತು ಗೌರವ ತರುವ ವಿಚಾರ ಅಲ್ಲ. ನಮ್ಮ Secretariat ಸುಧಾರಿಸಬೇಕು. Chairman ಕೂಡ ಸುಧಾರಿಸಬೇಕು. ಅನೇಕ ಸದಸ್ಯರಿಗೆ Orientation ತಪ್ಪಿ ಹೋಗಿದೆ. ಯಾವ ಪ್ರಶ್ನೆಗಳನ್ನು filter ಮಾಡಬೇಕು, ಉತ್ತರಗಳು ಏಕೆ ಬಂದಿಲ್ಲ? ಮಾನ್ಯ ಸಭಾಪತಿಯವರ ಗಮನಕ್ಕೆ ತರಬೇಕು. ಇಂತಹ ದಿನಾಂಕಕ್ಕೆ ಪ್ರಶ್ನೆಗಳನ್ನು ಕೊಟ್ಟಿರುತ್ತಾರೆ. The Power vests with the Presiding Officer. ಸರ್ಕಾರವಾಗಿ ಛೀಮಾರಿ ಹಾಕಬೇಕು. ನಾನು ತಪ್ಪಿಸಿಕೊಳ್ಳಲು ಮಾತನಾಡುತ್ತಿಲ್ಲ. ಎಲ್ಲೋ ಒಂದು ಕಡೆ ಯಾರ್‍ಯಾರು ಏನೇನು ಕರ್ತವ್ಯಗಳನ್ನು ಮಾಡಬೇಕು ಎನ್ನುವುದೇ confusion ಆಗಿಬಿಟ್ಟಿದೆ. ನಂತರ ಯಾವುದು ಚುಕ್ಕೆ ಗುರ್ತಿನ ಮತ್ತು ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಆಗಬಾರದು ಎಲ್ಲಾ ವಿವೇಚನೆಗಳನ್ನು ಕಳೆದುಕೊಳ್ಳಲಾಗಿದೆ. ಅದೃಷ್ಟವೋ, ದುರದೃಷ್ಟವೋ, ನನಗೆ 43 ವರ್ಷ ವಯಸ್ಸಾಗಿದ್ದಾಗ ಸಭಾಧ್ಯಕ್ಷರಾಗಿ ಕೆಲಸ ಮಾಡುವ ಸನ್ನಿವೇಶ ಸೃಷ್ಟಿಯಾಗಿದ್ದು, ಬಹುಶಃ ಆಗ ನಾನು ಸಂಪಾದನೆ ಮಾಡಿಕೊಂಡಷ್ಟು ಜ್ಞಾನ, ತಿಳುವಳಿಕೆ ಬೇರೆ ಸಂದರ್ಭದಲ್ಲಿ ಬಹುಶಃ ಸಿಗಲಿಲ್ಲ. ನಾನು ಮಾನ್ಯ ಸಭಾಪತಿಯವರಲ್ಲಿ ವಿನಂತಿಸುವುದೇನೆಂದರೆ, ತಮ್ಮ ಸಚಿವಾಲಯಕ್ಕೆ ಪ್ರಶ್ನೆಗಳು ಬಂದ ನಂತರ ಎಷ್ಟಕ್ಕೆ ಉತ್ತರ ಬಂದಿದೆ ಮತ್ತು ಎಷ್ಟಕ್ಕೆ ಉತ್ತರ ಬಂದಿಲ್ಲ ಎಂದು they must update you. ತಾವು strict ಆಗಿ these Departments have failed ಎಂದು ಹೇಳಿ. ಆಗ Concerned Ministers will step into picture. I think ಜಂಟಿಯಾಗಿ ನಾವು ನೀವು ಎಲ್ಲೋ ಒಂದು ಕಡೆ ತಪ್ಪಿದ್ದೇವೆ. I will immediately take Parliamentary Affairs Minister and it should not continue ಎಂದು ಹೇಳುತ್ತೇನೆ. ನಾವು ಇನ್ನೊಂದು ವಾರ ಇರುತ್ತೇವೆ, ಬಹಳ ತಡ ಆಯಿತು. ನಾನು ಈ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಜುಗರದ ಸನ್ನಿವೇಶ ಎದುರಿಸುವಂತಾಯಿತು. Still I think, within the available time ನಾನು ಇದನ್ನು ಸರಿಪಡಿಸುವ ಕೆಲಸ ಮಾಡುತ್ತೇನೆ.

**ಸಭಾಪತಿಯವರು:-** ನಾನು ಸಭೆಯ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಈ ಬಾರಿಯ ಸದನ ಪ್ರಾರಂಭವಾಗುವುದಕ್ಕೆ ಪೂರ್ವದಲ್ಲಿ ನಾನು ಮತ್ತು ಸಭಾಧ್ಯಕ್ಷರು ಒಟ್ಟಾಗಿ ಸರ್ಕಾರದಿಂದ ನೇಮಿಸಿರುವ ನೋಡೆಲ್ ಅಧಿಕಾರಿಗಳು ಮತ್ತು ನಮ್ಮ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಅಧಿಕಾರಿಗಳ ಜೊತೆ ಜಂಟಿ ಸಭೆಯನ್ನು ಮಾಡಿದೆವು. ಆ ಸಭೆಯಲ್ಲಿ ಇದೇ ವಿಷಯ ಇದ್ದು, ಪ್ರಶ್ನೆಗಳಿಗೆ ಉತ್ತರ ಕೊಡುತ್ತಿಲ್ಲ, 100 ಪ್ರಶ್ನೆಗಳಿಗೆ 20-30-40 ಪ್ರಶ್ನೆಗಳಿಗೆ ಉತ್ತರ ಬರುತ್ತಿದ್ದು, ಉಳಿದ ಪ್ರಶ್ನೆಗಳಿಗೆ ಉತ್ತರ ಬರುತ್ತಿಲ್ಲ ಎಂದು ಬಹಳ ಗಂಭೀರವಾದ ಚರ್ಚೆ ಮಾಡಿದೆವು. ಆಗ ಸರ್ಕಾರದ ಪರವಾಗಿ ಅಧಿಕಾರಿಗಳು ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡುವುದು ಕಷ್ಟವಾಗುತ್ತಿದ್ದು, ಅದರಲ್ಲಿ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ದೊಡ್ಡ ಪ್ರಶ್ನೆ ಇರುವ ಬಗ್ಗೆ ತಿಳಿಸಿದರು. ನಾನು ಮಧ್ಯೆ 'ಆ ರೀತಿಯ ಎಷ್ಟು ಪ್ರಶ್ನೆಗಳು ಇರಬಹುದು?' ಎಂದು ಕೇಳಿದೆ. ಉದಾಹರಣೆಗೆ 1000 ಪ್ರಶ್ನೆಗಳೂ ಬಂದರೆ ಒಂದು ಪರ್ಸೆಂಟ್ ಅಥವಾ ಎರಡು ಪರ್ಸೆಂಟ್ ಅಂದರೆ 10 ಪ್ರಶ್ನೆಗಳ ಬಗ್ಗೆ ಉತ್ತರ ಒದಗಿಸಲು ಕಷ್ಟವಾಗಬಹುದು, ಅದರಲ್ಲಿ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಮಾಹಿತಿ ಮತ್ತು ಪುಸ್ತಕಗಟ್ಟಲೆ ಉತ್ತರ ಒದಗಿಸಬಹುದಾದಂತಹ ಪ್ರಶ್ನೆಗಳ ಬಗ್ಗೆ Presiding Officer ಗಮನಕ್ಕೆ ತಂದರೆ ಬೇರೆ ವ್ಯವಸ್ಥೆ ಮಾಡುತ್ತೇವೆ. ಆದರೆ general question ಗೆ ಉತ್ತರ ಕೊಡಲು ಸಮಯ ಕೊಟ್ಟರೂ ಉತ್ತರ ಕೊಡದಿದ್ದರೆ ತಪ್ಪಾಗುತ್ತದೆ ಎಂದು ಹೇಳಿದ್ದೇವೆ. ಆಗ ಅಧಿಕಾರಿಗಳು 'ದಯಮಾಡಿ ಈ ಬಾರಿಯ ಅಧಿವೇಶನವನ್ನು ನೋಡಿ, ಎಷ್ಟು ಚೆನ್ನಾಗಿ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡುತ್ತೇವೆ' ಎಂದು ಮಾತು ಕೊಟ್ಟಿದ್ದರು. ಏಕೆಂದರೆ ಮಾನ್ಯ ಸಚಿವರು indirect ಆಗಿ ಪರೋಕ್ಷವಾಗಿ ಸಭಾಪತಿ ಮತ್ತು ಸಭಾಧ್ಯಕ್ಷರ ಬಗ್ಗೆ ಪ್ರಸ್ತಾಪ ಮಾಡಿ ಸಹಾಯ ಮಾಡುವ ಬಗ್ಗೆ ಕೇಳಿದರು. ನಾವು ಸದನ ಪ್ರಾರಂಭವಾಗುವ ಮುಂಚೆ ನಮ್ಮ ಅನುಭವದ ಹಿನ್ನೆಲೆಯಲ್ಲಿ ಪ್ರಯತ್ನ ಮಾಡಿದ್ದೇವೆ. ಹಾಗಾಗಿ ಈಗ ಸರ್ಕಾರದ ಕೆಲಸ ಮಾತ್ರ ಉಳಿದಿದೆ. ನಾನು ಸಭಾಪತಿಯಾಗಿ ಇಲ್ಲಿನ ಪರಿಸ್ಥಿತಿ ಬಗ್ಗೆ ಹೇಳಿದೆ, ಕೆಳಗಿನ ಮನೆಯಲ್ಲಿ ಏನು ಪರಿಸ್ಥಿತಿ ಇದೆ ನನಗೆ ಗೊತ್ತಿಲ್ಲ. ಇಲ್ಲಿ ನೋಡಿದಾಗ ಅಲ್ಲಿಯೂ ಹೀಗೆ ಇರಲೂಬಹುದು. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಸರ್ಕಾರ ಗಮನಿಸಬೇಕು.

**ಶ್ರೀ ಕೆ.ಆರ್. ರಮೇಶ್ ಕುಮಾರ್:-** ಮಾನ್ಯ ವಿಪಕ್ಷ ನಾಯಕರು ಹೇಳಿದ ಮಾತನ್ನು ತಮ್ಮ ನೆನಪಿಗೆ ತರುತ್ತೇನೆ. ನಾವೆಲ್ಲರೂ collective ಆಗಿ ಸಂಬಳ ತೆಗೆದುಕೊಂಡು ಕೆಲಸ ಮಾಡಬೇಕಾಗಿದ್ದವರನ್ನು ತಹಬದಿಗೆ ತರಲು ಆಗದಿದ್ದರೆ ಸದನ ಇರಬೇಕೆ? ನಾವು ಇರಬೇಕೇ? ಎಂಬುದನ್ನು ಸಂಪೂರ್ಣವಾಗಿ ನಾನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮರ್ಥಿಸುತ್ತೇನೆ. ಯಾರು ಎಲ್ಲಿ ಯಾವಾಗ ಕುಳಿತುಕೊಳ್ಳುತ್ತಾರೆ ಎನ್ನುವ ಪ್ರಶ್ನೆ ಬೇರೆ ವಿಷಯ ಅಥವಾ ಯಾರು ಒಳಗೆ ಇರುತ್ತಾರೆ, ಯಾರು ಹೊರಗೆ ಇರುತ್ತಾರೆ ಎನ್ನುವುದೆಲ್ಲ, they are all different issues. ಆದರೆ ವ್ಯವಸ್ಥೆ ಮುಂದುವರಿಯಬೇಕು. ಪ್ರಶ್ನೆಗಳನ್ನು ಕೇಳುವುದಕ್ಕೆ ಅರ್ಥನೇ ಹೋದರೆ ಹೇಗೆ? ಆದ್ದರಿಂದ ತಾವು ಹೇಳಿದಂತೆ ಬಹಳ ಸಂಕೀರ್ಣ, complicated ಪ್ರಶ್ನೆಗಳು ತಾವು ಹೇಳಿದಂತೆ ಇರುತ್ತವೆ. ನಮ್ಮ Rues of Procedure ನಲ್ಲಿ ಯಾವ ಪ್ರಶ್ನೆ ಚುಕ್ಕೆ ಗುರುತು ಮತ್ತು ಯಾವ ಪ್ರಶ್ನೆ ಚುಕ್ಕೆ ಗುರುತಿಲ್ಲದ ಪ್ರಶ್ನೆಯ್ಯಾಗಬೇಕು ಎಂದು ಬಹಳ clear ಆಗಿ ಇದೆ. ಎಲ್ಲೋ ಒಂದು ಕಡೆ ನಾವು mind apply ಮಾಡಬೇಕು, Scrutinize ಮಾಡಬೇಕು. ಅದಾದ ಮೇಲೆ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ exhaustive reply ಬೇಕೇ? Even Unstarred Questions ಗಳಿಗೂ ಕೊಡುವುದಕ್ಕೆ ಬರುವುದಿಲ್ಲ. ಸಂಬಂಧಪಟ್ಟ ಸದಸ್ಯರನ್ನು ಕರೆಸಿಕೊಂಡು ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಎಂದಾದರೂ ಹೇಳಬೇಕು. ಆದರೆ 130 ಪ್ರಶ್ನೆಗಳಲ್ಲಿ 54 ಕ್ಕೆ ಉತ್ತರ ಕೊಟ್ಟಾಗ ಯಾರೂ ಕೂಡ ಸಂತೋಷ ಅಥವಾ ಹೆಮ್ಮೆ ಪಡುವ ವಿಚಾರ ಅಲ್ಲ. ಇದರಲ್ಲಿ defend ಮಾಡಿಕೊಳ್ಳುವುದು ಏನೂ ಉಳಿದಿಲ್ಲ. Atleast ನಮಗೆ Department whise who are the Officers? Who are Authorities responsible? ಎಂದು idea ಸಿಕ್ಕಿ ನಾಲ್ಕಾರು ಜನರಿಗೆ ಬಿಸಿ ಮುಟ್ಟಿಸಿದರೆ ನಾಲ್ಕು ದಿನ ಜವಾಬ್ದಾರಿಯಾಗಿ ಕೆಲಸ ಮಾಡುತ್ತಾರೆ. ಸರ್ಕಾರ ನಡೆಸುವ ಅಥವಾ ಆಡಳಿತ ಪಕ್ಷದವರು ಸರ್ಕಾರದ ನೀತಿಗಳನ್ನು ಸಮರ್ಥನೆ ಮಾಡಿಕೊಳ್ಳುವುದಾಗಿದೆ, ಆಡಳಿತದಲ್ಲಿರುವ ಲೋಪಗಳನ್ನು ಅಥವಾ ಇನ್ನೊಂದನ್ನು ಸಮರ್ಥಿಸಿಕೊಳ್ಳುವುದು ನಮ್ಮ ಕರ್ತವ್ಯ ಅಲ್ಲ. They are responsible for those mistakes. They have pay for it if have committed fault. ಈ clarity ನಮಗೆ ಇರಬೇಕಾಗುತ್ತದೆ. The Governance is different and Administration is different. ಅದಕ್ಕಾಗಿಯೇ ಅವರಿಗೆ ಸಂಬಳ ಕೊಡುತ್ತಿದ್ದು, ಅವರ ಕೆಲಸ ನಾವು ಮಾಡುವುದಕ್ಕೆ ಬರುವುದಿಲ್ಲ. ನಮ್ಮ ಕೆಲಸದಲ್ಲಿ ನಾವು ವಿಫಲರಾದಾಗ ನಮ್ಮನ್ನು ಹರಿದು ಬಿಸಾಕುವುಕ್ಕೆ ಅವರಿಗೆ ಅಧಿಕಾರ ಇರುತ್ತದೆ. ನಾವು ಅನೇಕ ವೇಳೆ ನಮ್ಮ ಕೆಲಸ ಬಿಟ್ಟು ಅವರ ಕೆಲಸ ಮಾಡುವುದಕ್ಕೆ ಹೊರಟುಬಿಡುತ್ತೇವೆ. ಇದು ಅಲ್ಲಿ ಲೋಪವಾಗಿದೆ. ಇದರ ಬಗ್ಗೆ ನಾನು ಕ್ಷಮೆಯಾಚಿಸುತ್ತೇನೆ. ಇದರ ಬಗ್ಗೆ ಸಂಸದೀಯ ವ್ಯವಹಾರಗಳ ಸಚಿವರ ಜೊತೆ ಯಾವ ಪ್ರಶ್ನೆಗಳಿಗೆ ಏಕೆ ಉತ್ತರ ಕೊಟ್ಟಿಲ್ಲ ಎಂದು ಮಾತನಾಡುತ್ತೇನೆ. ಬಹುಶಃ two-three days, before the end of this Session ಉತ್ತರ ಕೊಡುತ್ತೇವೆ, atleast ತರಿಸಿಕೊಡುವ ಪ್ರಯತ್ನ ಮಾಡುತ್ತೇನೆ. ದಯಮಾಡಿ ಸಹಕರಿಸಬೇಕೆಂದು ವಿನಂತಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇವತ್ತಿನ ನಾಲ್ಕು ಪ್ರಶ್ನೆಗಳಲ್ಲಿ ಮೂರು ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಮಗೆ Nodal Officers ಕೊಟ್ಟಿರುವ ಮಾಹಿತಿ ತಪ್ಪು ಎಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕಳೆದ ಅಧಿವೇಶನದಲ್ಲಿ ಒಂದು ಸರಳವಾದ ವಿಷಯವನ್ನು ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದು, ಮಾನ್ಯ ಸಭಾನಾಯಕರು ಉತ್ತರ ಕೊಡುತ್ತೇನೆ ಎಂದು ಹೇಳಿದ್ದರು. ಇಡೀ ರಾಜ್ಯದಲ್ಲಿರುವ ಪ್ರೌಢಶಾಲೆಗಳಲ್ಲಿ......

**ಸಭಾಪತಿಯವರು:-** ಪ್ರಶ್ನೆ ವಿಚಾರ ಬೇಡ, ಉತ್ತರ ಬರಲಿಲ್ಲ ಎಂದು ಹೇಳಿ.

**(669) 12-06-2017 SK-KS (GR) 12.50**

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಅದು complicated issues ಗಳಲ್ಲಿ ಒಂದು ಅದು ತಮ್ಮ ಗಮನಕ್ಕೆ ಬರಬೇಕು. ಅವರು complicated ವಿಷಯಕ್ಕೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಅದಕ್ಕೋಸ್ಕರವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ.

**Mr. CHAIRMAN:-** Complicated issues ಗೂ ಉತ್ತರ ಕೊಡಬಹುದು. ಆದರೆ ಅದಕ್ಕೆ Time ಕೊಡಬೇಕಾಗುತ್ತದೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಈಗ ಮಹಿಳಾ ಶಿಕ್ಷಕಿಯರು ಸಭ್ಯ ಉಡುಗೆಯಲ್ಲಿ ಅಂದರೆ, ಸೀರೆ ಉಟ್ಟಿಕೊಂಡು ಬಂದಿಲ್ಲ ಎಂದು Memo issue ಮಾಡಿದ್ದಾರೆ. ಇದು ತಪ್ಪು. ಸಭ್ಯ ಉಡುಗೆ ಅಂದರೆ ಬೇರೆ dress ಕೂಡ ಬರುತ್ತದೆ. ಅವರು Salwar kameez ಹಾಕಿಕೊಂಡು ಬರಬಹುದು. ಅವರು ಬೇರೆ ಸಭ್ಯ ಉಡುಗೆ ಹಾಕಿಕೊಂಡು ಬರಬಹುದೇ ಎಂದು ಸರ್ಕಾರಕ್ಕೆ ಪ್ರಶ್ನೆ ಕೇಳಿದ್ದು ಶೂನ್ಯವೇಳೆಯಲ್ಲಿ ಇದನ್ನು ಚರ್ಚೆ ಕೂಡ ಮಾಡಿದ್ದಾರೆ. ಆದರೆ ಇದುವರೆಗೂ ಅದಕ್ಕೆ ಉತ್ತರ ಬಂದಿಲ್ಲ. Principal Secretary ಯವರನ್ನು ಕೇಳಿದರೂ ಉತ್ತರ ಕೊಟ್ಟಿಲ್ಲ. ಮಾನ್ಯ ಹಿರಿಯ ಸಚಿವರಾದ ರಮೇಶ ಕುಮಾರ್‌ರವರು ಬಿಸಿ ಮುಟ್ಟಿಸುವಂತಹ ಕೆಲಸವಾಗಬೇಕೆಂದು ಹೇಳಿದರು. ದಯಮಾಡಿ ಅದು ಆಗದೇ ಇದ್ದರೆ ನಮಗೆ ಇಲ್ಲಿ ಏನು ಪ್ರಯೋಜನವಾಗುವುದಿಲ್ಲ. ನಾವು ಆಸಕ್ತಿ ಕಳೆದುಕೊಳ್ಳುತ್ತೇವೆ. ದಯಮಾಡಿ ಕೆಲಸವಾಗಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಬೇಡಿ. ಎಲ್ಲಾ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಸರ್ಕಾರ ಹಾದಿ ಹುಡುಕಿ ಎಂದು ಹೇಳಿದ್ದೇವೆ. ಸರ್ಕಾರದವರು ಹಾದಿ ಹುಡುಕುತ್ತೇವೆ ಎಂದು ಹೇಳಿದ್ದಾರೆ. ಲಿಖಿತ ಮೂಲಕ ಉತ್ತರಿಸುವ ಯಾವ ಪ್ರಶ್ನೆಗಳಿಗೂ ಉತ್ತರ ಕೊಡುವುದನ್ನು ತಪ್ಪಿಸಕೂಡದು. ಎಲ್ಲಕ್ಕೂ ಉತ್ತರ ಕೊಡಬೇಕು ಎಂದು ಪದೇ ಪದೇ ಸದನದಲ್ಲಿ ಸ್ವತಃ ಮುಖ್ಯ ಮಂತ್ರಿಗಳು ಮಾತುಕೊಟ್ಟಿದ್ದಾರೆ ಮತ್ತು ಅಧಿಕಾರಿಗಳನ್ನು ಉದ್ದೇಶಿಸಿ ಹೇಳಿದ್ದಾರೆ. ನೋಡೋಣ ಏನು ಮಾಡುತ್ತಾರೆ.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೇ, ನಾನು ನಾಲ್ಕು ಪ್ರಶ್ನೆಗಳನ್ನು ಕೇಳಿದ್ದೆನು. ಕೇಂದ್ರ ಸರ್ಕಾರ ...

**ಸಭಾಪತಿಯವರು:-** ಬಂದಿಲ್ಲ.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೇ, ಒಂದು ಕೆಜಿ ಅಕ್ಕಿಗೆ ...

**ಸಭಾಪತಿಯವರು:-** ಬಂದಿಲ್ಲ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ಎಷ್ಟು ದುಡ್ಡು ಬರುತ್ತಿದೆ ಎಂದರೆ ಇದು complicated ಪ್ರಶ್ನೆಯಲ್ಲವೇ?

**ಸಭಾಪತಿಯವರು:-** ನಿಮ್ಮದು ಮಾತ್ರ ಅಲ್ಲ. ಇವತ್ತು ಒಟ್ಟು ಎಂಭತ್ತು ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೇ, ಇದು complicated ಅಲ್ಲವೇ?

**ಸಭಾಪತಿಯವರು:-** ಇದು complicated ಅಲ್ಲ. ಎಂಭತ್ತು ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲ ಅದಕ್ಕೆ ಅವರು ಕಾರಣ ಹೇಳಿಲ್ಲ.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೇ, ಉತ್ತರ ಬರಲಿಲ್ಲ.

**ಸಭಾಪತಿಯವರು:-** ಸರ್ಕಾರ ಅದರ ಬಗ್ಗೆ ಕೇಳಿದ್ದಾರೆ.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೇ ...

(ಗೊಂದಲ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಆಯಿತು.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೇ, ಇದು ನಿರಂತರ.

**ಸಭಾಪತಿಯವರು:–** ಏನು ಮಾಡುವುದಕ್ಕೆ ಆಗುತ್ತದೆ.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೇ, ನನಗೆ ಗೊತ್ತಾಗುತ್ತಿಲ್ಲ.

**(ಗೊಂದಲ)**

**ಶ್ರೀ ಕೆ.ಆರ್.ರಮೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ ಮಾನ್ಯ ವೀರಯ್ಯನವರು ದಯಮಾಡಿ ಕೇಳಿ. ಅವರು ಕೇಳಿದಂತಹ ಪ್ರಶ್ನೆ complicated ಎಂದು ಹೇಳಲಿಲ್ಲ. Rules of Procedure and Conduct of Business in the Karnataka Legislative Council ಪುಸ್ತಕದಲ್ಲಿ ಯಾವುದು Starred Question ಆಗಬೇಕು ಮತ್ತು Unstarred Question ಆಗಬೇಕು ಎನ್ನುವಂತಹದು ಸ್ಪಷ್ಟವಾಗಿದೆ. ನಮ್ಮ Secretariat ನಲ್ಲಿಯೂ ಕೂಡ ತಿಳುವಳಿಕೆಯ ಕೊರತೆ ಸಾಕಷ್ಟು ಇದೆ. ದಯಮಾಡಿ ಕೇಳಿ ನಿಜವಾಗಲೂ ...

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಪ್ರಶ್ನೆಗಳಿಗೆ ಉತ್ತರ ಕೊಡದೇ ಇರುವುದು ತಪ್ಪು. ನಾನು ಅದನ್ನೇ ಹೇಳುತ್ತಿದ್ದೇನೆ ಮತ್ತೆ ತಾವು ಅದನ್ನೇ ಹೇಳುತ್ತಿದ್ದೀರಿ. ನಿಮ್ಮದು ಒಬ್ಬರದೇ ಅಲ್ಲ, ಇವತ್ತು ಎಂಭತ್ತು ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲ.

**ಶ್ರೀ ಕೆ.ಆರ್.ರಮೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, by chance Unstarred Questions cover ಮಾಡದೆ ಇರುವಂತಹ ಬಹಳ exhaustive ವಾಗಿ ಇರುವಂತಹ ಪ್ರಶ್ನೆಯ ಬಗ್ಗೆ concerned Member ಅನ್ನು ಕರೆಸಿ ನಾವು ಇದಕ್ಕೆ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಬೇಕು. Mistake lies on the part of all of us. We will set it right.

**ಸಭಾಪತಿಯವರು:–** ಸಾಕು ಬಿಡಿ, ಈಗ ಶೂನ್ಯವೇಳೆಯ ಪ್ರಸ್ತಾವಗಳನ್ನು ತೆಗೆದುಕೊಳ್ಳೋಣ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಕಳೆದ ಸೋಮವಾರ ನನ್ನ ಪ್ರಶ್ನೆಗಳಿಗೆ ಉತ್ತರಗಳನ್ನು ಮಂಡಿಸುತ್ತೇವೆಂದು ಹೇಳಿದ್ದೀರಿ.

**ಸಭಾಪತಿಯವರು:–** ನಾಳೆ ಅಥವಾ ನಾಡಿದ್ದು ಮಂಡಿಸಿ ಎಂದು ಹೇಳಿದ್ದೆನು. ಸಚಿವರು ರೆಡಿಯಾಗಿ ಬಂದಿಲ್ಲ. ನಾನು ಮಂಡಿಸಲು ತಿಳಿಸುತ್ತೇನೆ. ನಾಳೆ ಅಥವಾ ನಾಡಿದ್ದು ಮಂಡಿಸುತ್ತೇನೆ. ಮಾನ್ಯ ಪುಟ್ಟಸ್ವಾಮಿಯವರೇ ನಾಳೆ ಮಂಡಿಸೋಣ. ಈಗ ಶ್ರೀ ಭಾನುಪ್ರಕಾಶ್‌ರವರು ತಮ್ಮ ಶೂನ್ಯವೇಳೆ ಪ್ರಸ್ತಾವನೆಯನ್ನು ಓದಿ.

**3. <u>ಸಭಾಪತಿಗಳ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>**

**ಅ) ಒಲಂಪಿಕ್ ಕ್ರೀಡೆಯಲ್ಲಿ ಭಾಗವಹಿಸುವ ಕ್ರೀಡಾ ಪಟುಗಳಿಗೆ ಆಗಿರುವ ಸಮಸ್ಯೆಗಳ ಕುರಿತು.**

– – –

**ಶ್ರೀ ಭಾನುಪ್ರಕಾಶ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

"ಅಭ್ಯಾಸಕ್ಕೆ ರಜೆ ಇಲ್ಲ, ತರಬೇತಿಯೂ ಇಲ್ಲ ಚಿನ್ನ ಗೆಲ್ಲುವುದು ಹೇಗೆ" ಎನ್ನುವ ಶೀರ್ಷಿಕೆಯ ಅಡಿಯಲ್ಲಿ 'ಕನ್ನಡಪ್ರಭ' ಪತ್ರಿಕೆಯಲ್ಲಿ ಪ್ರಕಟವಾಗಿರುವ ಪ್ಯಾರಾ ಒಲಂಪಿಕ್ಸ್‌ನಲ್ಲಿ ಭಾಗವಹಿಸಬೇಕಾದ ಕ್ರೀಡಾಪಟುವಿಗೆ ಆಗಿರುವ ಸಮಸ್ಯೆ ಮತ್ತು ನೋವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಜುಲೈ 2014 ರಿಂದ ಲಂಡನ್‌ನಲ್ಲಿ ವಿಶ್ವ ಪ್ಯಾರಾ ಒಲಂಪಿಕ್ಸ್ ಪಂದ್ಯಾವಳಿಗಳು ಆರಂಭವಾಗುತ್ತದೆ. ಪ್ಯಾರಾ ಅಥ್ಲೆಟಿಕ್ಸ್ ಚಾಂಪಯನ್‌ಶಿಪ್‌ನ ಈ ಪಂದ್ಯಾವಳಿಗೆ ಭಾಗವಹಿಸಲು, ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಕೊಂಡ್ಲಹಳ್ಳಿಯ ಶಿಕ್ಷಕ, ಶ್ರೀ ಆರ್.ಟಿ.ಪ್ರಸನ್ನಕುಮಾರ್ ಇವರು ಆಯ್ಕೆಯಾಗಿದ್ದಾರೆ. ರಾಜ್ಯದಿಂದ ಆಯ್ಕೆಯಾಗಿರುವ ಏಕೈಕ ಕನ್ನಡ ಕ್ರೀಡಾಪಟು ಇವರು, 2002 ರಲ್ಲಿ ರಾಜ್ಯ ಮಟ್ಟದ ಪ್ಯಾರಾ ಅಥ್ಲೆಟಿಕ್ಸ್ ಶಿಪ್‌ನಲ್ಲಿ ಚಿನ್ನದ ಪದಕ, 2002ರಲ್ಲಿ ದಕ್ಷಿಣ ಕೊರಿಯಾದಲ್ಲಿ ಏಷಿಯನ್ ಗೇಮ್ಸ್‌ನಲ್ಲಿ ಬೆಳ್ಳಿಯ ಪದಕ, ಅಥೆನ್ಸ್‌ನ ಪ್ಯಾರಾ ಒಲಂಪಿಕ್ಸ್‌ನಲ್ಲಿ ಭಾಗವಹಿಸಿದರು. 2013ರಲ್ಲಿ ರಾಜ್ಯ ಮಟ್ಟದ ಪ್ಯಾರಾ ಅಥ್ಲೆಟಿಕ್ಸ್ ಶಿಪ್‌ನಲ್ಲಿ ಚಿನ್ನದ ಪದಕ ಹಾಗೂ 2016 ರಲ್ಲಿ ರಿಯೋ ಪ್ಯಾರಾ ಒಲಂಪಿಕ್ಸ್‌ನಲ್ಲಿ ಭಾಗಿಯಾಗಿದ್ದರು. ಇವರು ಮೊಳಕಾಲ್ಮೂರು ತಾಲ್ಲೂಕಿನ ಶಿಕ್ಷಣ ಸಂಯೋಜಕನಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 2016ರಲ್ಲಿ ಕೂಡಾ ಇವರಿಗೆ ಸಂಬಳ ಸಹಿತ ರಜೆ ನೀಡದ ಸರ್ಕಾರ, ನಂತರ ವಿಶೇಷ ಪ್ರಕರಣ ಎಂದು ಭಾವಿಸಿ ಸಮಸ್ಯೆಯನ್ನು ಬಗೆಹರಿಸಿತ್ತು. ಆಗ ಶಿಕ್ಷಣ ಸಚಿವರು ಆದೇಶ ಮಾಡಿ ಕರ್ನಾಟಕ ಸಿವಿಲ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸರ್ವೀಸ್ ನಿಯಮಕ್ಕೆ (ಕೆಸಿಎಸ್‌ಆರ್) ತಿದ್ದುಪಡಿ ತಂದು ಪ್ಯಾರಾ ಒಲಂಪಿಕ್ಸ್ ಫೆಡರೇಶನ್ ಸೇರ್ಪಡಿಸಲು ಲಿಖಿತ ಆದೇಶ ನೀಡಿದ್ದರು. ಕ್ರೀಡಾ ಸಚಿವರು ಆದೇಶ ಈವರೆಗೆ ಜಾರಿಗೆ ಬಂದಿಲ್ಲವಾಗಿರುವುದರಿಂದ, ಈ ವರ್ಷ ಕೂಡ ನಮ್ಮ ರಾಜ್ಯದ ಹೆಮ್ಮೆಯ ಕ್ರೀಡಾಪಟುವಿಗೆ, ಅಭ್ಯಾಸ ಮಾಡಲು, ತರಬೇತಿ ಪಡೆಯಲು ರಜಾ ಮಂಜೂರು ಮಾಡದೆ, ಕ್ರೀಡಾ ಇಲಾಖೆ ಹಾಗೂ ಶಿಕ್ಷಣ ಇಲಾಖೆಯು ಉದಾಸೀನ ಪ್ರವೃತ್ತಿ ತೋರುತ್ತಿದೆ. ಇದರಿಂದ ರಾಜ್ಯದ ಕ್ರೀಡಾ ಪಟುಗಳಿಗೆ ಸರ್ಕಾರ ಅವಮಾನ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ಸರ್ಕಾರ, ಕ್ರೀಡಾ ಇಲಾಖೆ ಮತ್ತು ಶಿಕ್ಷಣ ಇಲಾಖೆ ಸಚಿವರು ತುರ್ತಾಗಿ ಗಮನಹರಿಸಿ, ಶ್ರೀ ಪ್ರಸನ್ನಕುಮಾರ್ ಇವರು ಪ್ಯಾರಾ ಒಲಂಪಿಕ್ಸ್‌ನಲ್ಲಿ ಭಾಗವಹಿಸಲು ಇರುವ ಎಲ್ಲಾ ಅಡ್ಡಿ–ಆತಂಕಗಳನ್ನು ಬಗೆಹರಿಸಿ, ಅವರಿಗೆ ಅಗತ್ಯವಾದ ಹಣದ ನೆರವನ್ನು ನೀಡಿ, ಅವರು ಗೆದ್ದು ಚಿನ್ನದ ಪದಕ ತರುವಂತೆ ಮಾಡಬೇಕೆಂದು ಕ್ರೀಡಾ ಪಟುಗಳಿಗೆ ಅವರ ಭಾವನೆಗಳಿಗೆ ಗೌರವ ನೀಡಬೇಕೆಂದು ಸರ್ಕಾರವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಕೆ.ಆರ್.ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಕ್ರೀಡೆ ಮತ್ತು ಯೋಜನಾ ಸಚಿವರ ಕಡೆಯಿಂದ ಎಲ್ಲಾ ವರದಿಗಳನ್ನು ತರಿಸಿಕೊಂಡು, ಅವರ ಕೈಯಲ್ಲಿ ಉತ್ತರ ಹೇಳಿಸುತ್ತೇನೆ. ಇಲ್ಲ ಸರ್ಕಾರದ ಪರವಾಗಿ.....

**ಶ್ರೀ ಭಾನುಪ್ರಕಾಶ:–** ಮಾನ್ಯ ಸಭಾಪತಿಯವರೇ, ಈ ತಿಂಗಳಿನಲ್ಲಿ ಮಾಡದೇ ಇದ್ದರೆ...

**Mr.CHAIRMAN:-** Late ಆದರೆ ಉಪಯೋಗ ಇಲ್ಲ.

**ಶ್ರೀ ಭಾನುಪ್ರಕಾಶ:–** ಮಾನ್ಯ ಸಭಾಪತಿಯವರೇ, ಅವನಿಗೆ ಅನ್ಯಾಯವಾಗಿ ಬಿಡುತ್ತದೆ.

**ಆ) ರೈತರಿಗೆ ಒಂದು ರೂಪಾಯಿಯನ್ನು ಬೆಳೆ ಪರಿಹಾರವನ್ನಾಗಿ ನೀಡಿರುವ ಕುರಿತು.**

– – – –

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ನವಲಗುಂದಲ್ಲಿ ರೈತರ ಮೇಲೆ ನಡೆದ ಪೊಲೀಸ್ ದೌರ್ಜನ್ಯ ಅಮಾನವೀಯವಾದುದ್ದು ಹಾಗೂ ಅತ್ಯಂತ ಕ್ರೂರವಾಗಿದ್ದು, ಇದರಲ್ಲಿ ನೊಂದ ರೈತರಿಗೆ ನೀಡಿದ ಪರಿಹಾರ ನಗೆಪಾಟಲಿಗೀಡಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಒಂದು ಬಾಸುಂಡೆಗೆ ಒಂದು ರೂಪಾಯಿ!**

ಬಾಸುಂಡೆಗೆ ಒಂದು ರೂಪಾಯಿಯಂತೆ ಪರಿಹಾರ ನೀಡಿರುವಿರಾ? ಯಾರಿಗೆ ಬೇಕು ನಿಮ್ಮ ಪರಿಹಾರ ಇಟ್ಕೊಳ್ಳಿ ನೀವೆ.

ಮಹದಾಯಿ ಗಲಾಟೆಯ ಹಿನ್ನೆಲೆಯಲ್ಲಿ ಪೊಲೀಸ್ ಅತಿರೇಕ ಅನುಭವಿಸಿದ ನವಲಗುಂದ ತಾಲ್ಲೂಕು ಯಮನೂರು, ಅರೇಕುರಹಟ್ಟಿ ಹಾಗೂ ಸುತ್ತಮುತ್ತಲಿನ ಗ್ರಾಮದ ರೈತರ ನಿಲುವು ಇದು. ಈಗಾಗಲೇ ವರದಿಯಾಗಿರುವಂತೆ ಪೊಲೀಸ್ ಥಳಿತಕ್ಕೆ ಒಳಗಾದ ರೈತರು ಮತ್ತಿತರ ಸಾರ್ವಜನಿಕರಿಗೆ ವೈದ್ಯಕೀಯ ಪರಿಹಾರದ ವೆಚ್ಚವಾಗಿ ಒಂದಿಷ್ಟು ಪರಿಹಾರವನ್ನು ಘೋಷಣೆ ಮಾಡಲಾಗಿದೆ. ನೂರು ರೂಪಾಯಿಯಿಂದ ಹಿಡಿದು ಸಾವಿರ, ಎರಡು ಸಾವಿರ ಮತ್ತು ಮೂರು ಸಾವಿರ ರೂಪಾಯಿಯವರೆಗೆ ಪರಿಹಾರದ ಮೊತ್ತವನ್ನು ನಿಗದಿಪಡಿಸಲಾಗಿದೆ ಎಂಬ ಆರೋಪಗಳು ಕೇಳಿ ಬರಲಾಗುತ್ತಿದೆ. ಮೂಲಗಳ ಪ್ರಕಾರ ಪ್ರತಿ ರೈತರಿಗೆ ಒಂದು ಸಾವಿರ ರೂಪಾಯಿ ಪರಿಹಾರವನ್ನು ಘೋಷಣೆ ಮಾಡಲಾಗಿದೆ.

ಇದು ಈಗ ಅಲ್ಲಿನ ಜನರಲ್ಲಿ ಆಕ್ರೋಶ ಮೂಡಿಸಲು ಕಾರಣವಾಗಿದೆ. ಪೊಲೀಸ್ ದೌರ್ಜನ್ಯವನ್ನು ಎದುರಿಸಿದ ಈ ಜನತೆಗೆ ಪುಡಿಗಾಸಿನ ಪರಿಹಾರ ನೀಡಿರುವುದೇ ಸಿಟ್ಟಿಗೆ ಕಾರಣವಾಗಿರುವ ಅಂಶ. ಥಳಿತಕ್ಕೆ ಒಳಗಾದ ರೈತರಿಗೆ ವೈದ್ಯಕೀಯ ವೆಚ್ಚದ ಪರಿಹಾರವನ್ನು ನೀಡಲಾಗುವುದು ಎಂದು ತಿಳಿಸಿದ್ದಂತೆ ಈಗ ಘೋಷಣೆ ಮಾಡಲಾಗಿದೆ. ಆದರೆ ಘೋಷಿತ ಮೊತ್ತವನ್ನು ನೋಡಿ ರೈತರು ಕಂಗಾಲಾಗಿದ್ದಾರೆ. ತಲಾ ಒಂದು ಸಾವಿರ ರೂಪಾಯಿ ಪರಿಹಾರದ ಚೆಕ್ ನೀಡಲು ಉದ್ದೇಶಿಸಲಾಗಿದೆ ಎಂಬುದಾಗಿ ಮೂಲಗಳು ತಿಳಿಸಿರುವುದು ರೈತರ ಆತ್ಮಾಭಿಮಾನ ಕೆರಳಲು ಕಾರಣವಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ.

ಪೊಲೀಸರಿಂದ ಹೊಡೆತ ತಿಂದಿದ್ದ ಯಮನೂರು ಮತ್ತು ಸುತ್ತಮುತ್ತಲಿನ ಜನತೆ, ಪೊಲೀಸ್ ಲಾಠಿಯಿಂದ ಉಂಟಾಗಿದ್ದ ಗಾಯಗಳಿಗೆ ತಮ್ಮ ಸ್ವಂತ ಖರ್ಚಿನಿಂದ ಚಿಕಿತ್ಸೆ ಪಡೆದು ತಿಂಗಳುಗಳೇ ಉರುಳಿವೆ.

ಆ ಗಾಯಗಳನ್ನು ಮರುಕಳಿಸುವಂತೆ ಅಂದರೆ, ಮತ್ತೊಂದು ಮಾನಸಿಕ ಗಾಯವನ್ನು ಉಂಟು ಮಾಡಿದೆ. ಈಗ ನೀಡಲಾಗಿರುವ ಪರಿಹಾರದ ಘೋಷಣೆ ಅವರಿಗೆ ನೋವು ಉಂಟು ಮಾಡಿದೆ ಎನ್ನುವುದು ಅವರ ನೋವು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಷ್ಟು ದೊಡ್ಡ ಪ್ರಮಾಣದ ದೌರ್ಜನ್ಯ ನಡೆಸಿ, ಈಗ ಜುಜುಬಿ ಮೊತ್ತವನ್ನು ನೀಡಿರುವ ಸರ್ಕಾರದ ಕ್ರಮವನ್ನು ಖಂಡಿಸಿರುವ ರೈತರು ತಮಗೆ ನೀಡಲಾಗುವ ಪರಿಹಾರ ಚೆಕ್‌ಗಳನ್ನು ಸಾಮೂಹಿಕವಾಗಿ ತಹಶೀಲ್ದಾರರಿಗೇ ಹಿಂದಿರುಗಿಸಲು ನಿರ್ಧರಿಸಿದ್ದಾರೆಂಬ ಮಾತುಗಳು ಕೇಳಿ ಬರುತ್ತಿವೆ.

ಥಳಿತದಿಂದ ಉಂಟಾದ ಒಂದು ಬಾಸುಂಡೆಗೆ ಒಂದು ರೂಪಾಯಿ ಕೊಡಬೇಕೆಂಬ ಲೆಕ್ಕಚಾರ ಹಾಕಿದಂತೆ ಕಾಣುತ್ತಿದೆ ಎಂದು ಗ್ರಾಮದ ರೈತರೊಬ್ಬರು ವ್ಯಂಗ್ಯವಾಗಿ ಹೇಳಿದ್ದು ಕೇಳಿ ಬಂತು.

**ಬೆಳೆ ಹಾನಿ ಪರಿಹಾರ ಒಂದು ರೂ!!**

ಬೆಳೆ ಹಾನಿ ಪರಿಹಾರ ಕುರಿತು ಸರ್ಕಾರದ ಅಧಿಕಾರಿಗಳಿಂದ ವರದಿ ಪಡೆದು ಹಾರೋಬೆಳವಡಿಯ ಗ್ರಾಮದ ರೈತರಿಗೆ ಒಂದು ರೂಪಾಯಿ ಪರಿಹಾರ ನೀಡಿದ್ದು, ಬೆಳೆ ಹಾನಿ ಪರಿಹಾರ ನಿರ್ಧರಿಸುವಲ್ಲಿ ಸರ್ಕಾರ ಹಾಗೂ ಅಧಿಕಾರಗಳು ಯಾವ ಮಾನದಂಡ ಹಾಕಿಕೊಂಡಿದ್ದಾರೆಂಬುದು ಆರ್ಥಿಕ ತಜ್ಞರಿಗೂ ಯಕ್ಷ ಪ್ರಶ್ನೆಯಾಗಿದೆ. ಹಾರೋಬೆಳವಡಿಯ ಶ್ರೀ ಸಂಗನಗೌಡ ಕಡ್ಲಿ ಎಂಬ ರೈತನಿಗೆ ಒಂದು ರೂಪಾಯಿ ಪರಿಹಾರ ನೀಡಿದ್ದು, ರೈತರ ಬಗ್ಗೆ ಸರ್ಕಾರಕ್ಕೆ ಎಷ್ಟು ಕಾಳಜಿ ಎಂಬುದನ್ನು ಎತ್ತಿ ತೋರಿಸುತ್ತಿದೆ. ಸ್ವತಃ ಮುಖ್ಯಮಂತ್ರಿಗಳೇ ಹಾರೋಬೆಳವಡಿ ಗ್ರಾಮಕ್ಕೆ ಭೇಟಿ ನೀಡಿ ಬೆಳೆ ಹಾನಿಯ ಬಗ್ಗೆ ಪರಿಶೀಲಿಸಿ ಪರಿಹಾರ ನೀಡುವಂತೆ ಅಧಿಕಾರಿಗಳಿಗೆ ಆದೇಶಿಸಿದ್ದರೂ ಅಧಿಕಾರಿಗಳ ಅಸಡ್ಡೆ ಹಾಗೂ ಬೇಜವಾಬ್ದಾರಿಗಳಿಂದಾಗಿ ರೈತರ ಬಾಳು ನರಕ ಸದೃಶವಾಗಿದೆ.

ಕೂಡಲೇ ಈ ಕುರಿತು ಪರಿಶೀಲಿಸಿ ರೈತರಿಗೆ ಅಪಮಾನ ಮಾಡಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರವನ್ನು ಒತ್ತಾಯಿಸುತ್ತೇನೆ. ನಾನು ಸರ್ಕಾರಕ್ಕೆ ಏನು ಹೇಳುವುದಿಲ್ಲ. ಪತ್ರಿಕೆಯಲ್ಲಿ ಬಂದಿದೆ ದಯಮಾಡಿ ನೋಡಿ ಅವರಿಗೆ ಬಾಸುಂಡೆ ಹೇಗೆ ಬಿದ್ದಿದೆ. ಶೂನ್ಯ ವೇಳೆಯನ್ನು ಚರ್ಚೆ ಮಾಡಬಾರದು. ಬಲವಂತವಾದ ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಕೆ.ಆರ್. ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪತ್ರಿಕೆಯಲ್ಲಿ ಬಂದಿರುವುದನ್ನು ಆಧರಿಸಿ ಹೇಳಿದ್ದಾರೆ. ಅದು ನಿಜನೋ ಅಥವಾ ಸುಳ್ಳೋ ನನಗೆ ಗೊತ್ತಿಲ್ಲ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು clarify ಮಾಡುತ್ತೇನೆ. ಈ ಕುರಿತು ನಾನು ಅಪರ ಜಿಲ್ಲಾಧಿಕಾರಿಯವರನ್ನು ಕೇಳಿದಾಗ, ಅವರು ಅದು ನಿಜ ಎಂದು ಹೇಳಿದ್ದಾರೆ. ನಿಜ ಎಂದು ಪತ್ರಿಕೆಯಲ್ಲಿ ಬಂದಿದ್ದು, ಇದನ್ನೆಲ್ಲಾ ಓದಿದ್ದೇವೆ. ಈ ಕುರಿತು ಅಪರ ಜಿಲ್ಲಾಧಿಕಾರಿಯವರನ್ನು ಕೇಳಿದಾಗ, ಹೌದು ಸಾರ್ ಒಂದು ರೂಪಾಯಿನೇ ಕೊಟ್ಟಿದ್ದು, ಅದನ್ನು ಪರೀಕ್ಷೆ ಮಾಡುವುದಕ್ಕೆ ಕೊಟ್ಟಿದ್ದು ಎಂದು ಹೇಳುತ್ತಾರೆ. ಧಾರವಾಡ ಜಿಲ್ಲೆಯ ಅಪರ ಜಿಲ್ಲಾಧಿಕಾರಿಯವರು ನನ್ನ ಹತ್ತಿರ ಮಾತನಾಡಿದ್ದಾರೆ. ಆದಾದ ನಂತರ ನಾನು ಶೂನ್ಯ ವೇಳೆಗೆ ಕಳುಹಿಸಿದ್ದೇನೆ. ಒಟ್ಟಿನಲ್ಲಿ ಪತ್ರಿಕೆಯಲ್ಲಿ ಅಲ್ಲ.

**ಶ್ರೀ ಕೆ.ಆರ್.ರಮೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಏಕಾಏಕಿ ಪತ್ರಿಕೆಯಲ್ಲಿ ಬರೆದಿರುವುದು ಸತ್ಯವಲ್ಲ ಎಂದು ಹೇಳಲಿಲ್ಲ. ಅದನ್ನು ಆಧರಿಸಿ ಅವರಿಗೆ ಹೇಳಿದ್ದೇನೆ. Factual Position ಏನಿದೆ ನಾನು ಮಾನ್ಯ ಗೃಹ ಮಂತ್ರಿ ಮತ್ತು ಕೃಷಿ ಮಂತ್ರಿಯವರಿಬ್ಬರನ್ನೂ ಕೇಳಬೇಕಾಗುತ್ತದೆ. ಮಾನ್ಯ ಸದಸ್ಯರು ಏನು ವಿಷಯವನ್ನು raise ಮಾಡಿದ್ದಾರೋ, ಅದರ ಗಾಂಭಿರ್ಯತೆಯನ್ನು ಸರ್ಕಾರದ ಗಮನಕ್ಕೆ ತಂದು ಬಹುಶ: further ನಾವು ನಿಮಗೆ ಉತ್ತರ ಕೊಡುತ್ತೇವೆ. We will give you the reply. ಮಾನ್ಯ ಗೃಹ ಮಂತ್ರಿಗಳು ಮತ್ತು ಕೃಷಿ ಮಂತ್ರಿಗಳು ಇವರಿಬ್ಬರನ್ನು ಸಂಪರ್ಕಿಸಿ, ಮಾನ್ಯ ಸದಸ್ಯರು ವಿಚಾರವನ್ನು ಏನು ಪ್ರಸ್ತಾಪ ಮಾಡಿದ್ದಾರೋ, ಅವರ ಗಮನಕ್ಕೆ ತಂದು ಇದು ಹೀಗಾಗಿರುವುದು ನಿಜನಾ ಈ ರೀತಿ ಮಾನ್ಯ ಹಿರಿಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ನಮ್ಮ ನಿಲುವು ಏನು? ನಾವು ಈಗ ಮಾಡಿರುವುದು ನಿಜನಾ ಅಥವಾ ಈ ನಿಲುವಿನಿಂದ ದೂರ ಸರಿಬೇಕು ಏನು ಎನ್ನುವ ಸ್ಪಷ್ಟವಾದ ಉತ್ತರವನ್ನು ಸರ್ಕಾರ ಕೊಡಬೇಕಲ್ಲ. ಅವರ ಕಡೆಯಿಂದ ಕೊಡಿಸುತ್ತೇನೆಂದು ಹೇಳುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು.

(670) 12.06.2017/ 1.00 **ಹೆಚ್‌ವಿ-ಜಿಆರ್**

ಇ) ಭೂ ಒಡೆತನ ಯೋಜನೆ ಅಡಿಯಲ್ಲಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಡಾ: ಬಿ.ಆರ್.ಅಂಬೇಡ್ಕರ್ ನಿಗಮದಿಂದ ನಡೆದ ಅವ್ಯವಹಾರ ಕುರಿತು.

- - - -

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವನಗೌಡ ಆರ್.ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಭೂ ಒಡೆತನ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಭೂ ರಹಿತ ಕೃಷಿ ಕಾರ್ಮಿಕ ಮಹಿಳೆಯವರಿಗೆ ಖುಷ್ಕಿ ಇರುವ ಎರಡು ಎಕರೆ ಜಮೀನು ಮತ್ತು ಒಂದು ಎಕರೆ ನೀರಾವರಿ ಜಮೀನು ನೀಡುವ ಯೋಜನೆ ಸರ್ಕಾರದ ವತಿಯಿಂದ ಜಾರಿಯಲ್ಲಿರುತ್ತದೆ. ಈ ಯೋಜನೆಯಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಹಾಗೂ ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಭಾರಿ ಅವ್ಯವಹಾರ ಮಾಡಲಾಗಿದೆ ಎಂಬ ಆರೋಪ ಕೇಳಿ ಬರುತ್ತಿರುತ್ತದೆ.

ಸರ್ಕಾರದ ಮಾರ್ಗಸೂಚಿಯ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಬಡ ಕೂಲಿ ಕುಟುಂಬದವರು ತಮ್ಮ ಹೆಸರಿನಲ್ಲಿ ಯಾವುದೇ ಸವಂತ ಜಮೀನು ಇಲ್ಲವೆಂದು ದೃಢೀಕರಣ ನೀಡಿದಾಗ ಮಾತ್ರ ಇವರಿಗೆ ಈ ಜಮೀನು ಖರೀದಿಸಲು ಅವಕಾಶವಿದ್ದು, ಖರೀದಿ ಮೊತ್ತವನ್ನು ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದಿಂದ ಭರಿಸಲಾಗುತ್ತದೆ.

ಆದರೆ, ವಿಜಯಪುರದ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಜಮೀನನ್ನು ಖರೀದಿಸಲು ಶಿಫಾರಸ್ಸುಗೊಂಡ 23 ಫಲಾನುಭವಿಗಳ ಪೈಕಿ 09 ಜನರು ವಿಜಯಪುರ ತಾಲ್ಲೂಕಿನ ಅರ್ಜುಣಗಿ ಗ್ರಾಮದವರೆಂದು ದೃಢೀಕರಿಸಲಾಗಿರುತ್ತದೆ. ಆದರೆ, ಇವರುಗಳು ಅರ್ಜುಣಗಿ ಗ್ರಾಮದವರಾಗಿರುವುದಿಲ್ಲ. ಸದರಿಯವರುಗಳು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕನ್ನೊಳ್ಳಿ ಗ್ರಾಮದವರಾಗಿದ್ದು, ಇವರೆಲ್ಲರೂ ರಹವಾಸಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ರೇಷನ್ ಕಾರ್ಡ್, ಕೃಷಿ ಕಾರ್ಮಿಕ ದೃಢೀಕರಣ ಪ್ರಮಾಣ ಪತ್ರಗಳನ್ನು ನಕಲಿ ಸೃಷ್ಟಿಸಿ ಅರ್ಜಿಯ ಸಲ್ಲಿಸಿರುತ್ತಾರೆ. ನಂತರ ಈ ಪ್ರಮಾಣ ಪತ್ರಗಳನ್ನು ಪರಿಶೀಲಿಸಲಾಗಿ, ಯಾವುದೇ ಪ್ರಮಾಣ ಪತ್ರವನ್ನು ಸರ್ಕಾರದ ಅಧಿಕಾರಿಗಳಿಂದ ಪಡೆದಿರುವುದಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಸದಾಶಿವ ರಾಮಣ್ಣ ಹರಿಜನ(ಪೂಜಾರಿ) ಎಂಬುವವರು ಈ ನಕಲಿ ಪ್ರಮಾಣ ಪತ್ರಗಳನ್ನು ಸೃಷ್ಟಿಸಿ ಫಲಾನುಭವಿಗಳಿಂದ ಹಣ ಪಡೆದು ನಿಗಮದ ಕೆಲ ಅಧಿಕಾರಿಗಳನ್ನು ತಮ್ಮ ಜೊತೆ ಶಾಮೀಲು ಮಾಡಿಕೊಂಡು ಸದರಿ ಫಲಾನುಭವಿಗಳಿಗೆ ಜಮೀನು ಕೊಡಿಸಲು ಮುಂದಾಗಿರುತ್ತಾನೆ ಎಂದು ತಿಳಿದು ಬಂದಿದೆ. ನಂತರ ವಿಜಯಪುರ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಈ ಫಲಾನುಭವಿಗಳಿಗೆ ಜಮೀನು ಖರೀದಿ ಮೊತ್ತವಾಗಿ ರೂ. 1.70 ಕೋಟಿ ಹಣದ ಚೆಕ್ಕನ್ನು ಬರೆಯಲಾಗಿತ್ತು. ಇದರ ಬಗ್ಗೆ ಮಾಹಿತಿ ದೊರೆತ ತಕ್ಷಣ ನಿಗಮದ ಜಿಲ್ಲಾ ವ್ಯವಸ್ಥಾಪಕರು, ಚೆಕ್ಕನ್ನು ವಿತರಣೆ ಮಾಡದೇ, ತಹಸೀಲ್ದಾರ್‌ರವರಿಗೆ ದಾಖಲಾತಿ ಮತ್ತು ಪ್ರಮಾಣ ಪತ್ರಗಳನ್ನು ಪರಿಶೀಲನೆ ಮಾಡಲು ಕೋರಿದ್ದು ಪರಿಶೀಲನೆಯ ನಂತರ ಎಲ್ಲಾ ಪ್ರಮಾಣ ಪತ್ರಗಳು ನಕಲಿ ಎಂದು ತಿಳಿದುಬಂದಿದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

2004 ರಿಂದ 2007ರ ಅವಧಿಯಲ್ಲಿ ಸದಾಶಿವ ರಾಮಣ್ಣ ಹರಿಜನ (ಪೂಜಾರಿ) ನಕಲಿ ಪ್ರಮಾಣ ಪತ್ರಗಳನ್ನು ಸೃಷ್ಟಿಸಿ ವಿಜಯಪುರ ತಾಲ್ಲೂಕಿನ ಹೊಕ್ಕುಂಡಿ ಗ್ರಾಮದಲ್ಲಿ 18 ಎಕರೆ ಜಮೀನನ್ನು ತನ್ನ ಮತ್ತು ತನ್ನ ಸಂಬಂಧಿಗಳ ಹೆಸರಿನಲ್ಲಿ ಪಡೆದಿರುತ್ತಾನೆ. ಇದೇ ರೀತಿ ತನ್ನ ದೊಡ್ಡ ಜಾಲದಿಂದ ತೊದಲಬಾಗಿ, ಬೋಳಚಿಕ್ಕಲಕಿ, ಚಿಕ್ಕಲಕಿ, ಕನ್ನೊಳ್ಳಿ, ಹೊಳೆಹಂಗರಗಿ ಗ್ರಾಮಗಳಲ್ಲಿ ಜಮೀನು ಖರೀದಿಸಿರುತ್ತಾನೆ.

ಆದ್ದರಿಂದ ಇಂತಹ ನಕಲಿ ಪ್ರಮಾಣ ಪತ್ರ ತಯಾರಿಸಲು ಸಹಾಯವಾದ ಅಧಿಕಾರಿಗಳು ಹಾಗೂ ಇದಕ್ಕೆ ಸಂಬಂಧಿಸಿದ ತಂಡದ ಹಿಂದೆ ಇರುವವರ ಪ್ರಭಾವಿಗಳು ಮತ್ತು ಅಭಿವೃದ್ಧಿ ನಿಗಮದಲ್ಲಿ ಶಾಮಿಲಾದ ಅಧಿಕಾರಿಗಳ ಕುರಿತು ತನಿಖೆ ಮಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಬಡ ಕೃಷಿ ಕಾರ್ಮಿಕರಿಗೆ ಮೋಸ ಮಾಡುತ್ತಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಮತ್ತು ಬಡ ಕೃಷಿ ಕಾರ್ಮಿಕರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ. ಇದಕ್ಕೆ ಸಂಬಂಧಪಟ್ಟ ದಾಖಲೆಗಳು ನನ್ನ ಬಳಿ ಲಭ್ಯವಿದ್ದು, ಅದನ್ನು ಸರ್ಕಾರಕ್ಕೆ ಕಳುಹಿಸಿಕೊಡುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಬಸವನಗೌಡ ಪಾಟೀಲ ಯತ್ನಾಳ್‌ರವರೇ, ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶವಿಲ್ಲ. ತಮ್ಮ ಬಳಿ ಇರುವಂತಹ ದಾಖಲೆಗಳನ್ನು ಮಾನ್ಯ ಸಚಿವರಿಗೆ ಕಳುಹಿಸಿಕೊಡಿ. ಮಾನ್ಯ ಸಚಿವರೇ, ತಮ್ಮ ಬಳಿ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಉತ್ತರ ತಯಾರು ಇದ್ದರೆ ಉತ್ತರವನ್ನು ನೀಡಿ.

**ಶ್ರೀ ಹೆಚ್.ಆಂಜನೇಯ(ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಕೂಡಲೇ ಸಂಬಂಧಪಟ್ಟ ಒಬ್ಬ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿಕೊಟ್ಟು ತಪ್ಪು ಮಾಡಿರುವ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡುವುದಕ್ಕೆ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡುವಂತೆ ಸೂಚನೆ ನೀಡುತ್ತೇನೆ. ಅರ್ಹ ಫಲಾನುಭವಿಗಳಿಗೆ ಸೂಕ್ತ ಅವಕಾಶ ಮತ್ತು ಸೌಲಭ್ಯಗಳು ದೊರೆಯಬೇಕು. ಕ್ರಿಮಿನಲ್‌ಗಳಿಗೆ ಪ್ರೋತ್ಸಾಹ ನೀಡುವಂತಹ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ತಪ್ಪು ಮಾಡಿದವರು ಯಾರೇ ಆಗಿರಲಿ, ಅದಕ್ಕೆ ಸಂಬಂಧಪಟ್ಟ ಪೂರ್ಣ ಮಾಹಿತಿಗಳನ್ನು ಮಾನ್ಯ ಸದಸ್ಯರು ನನಗೆ ಕಳುಹಿಸಿಕೊಟ್ಟರೆ, ನಾಳೆಯೇ ನಾನು ಒಬ್ಬ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿಕೊಟ್ಟು, ತನಿಖೆ ಮಾಡಿಸಿ, ಪೊಲೀಸ್ ಠಾಣೆಗೆ ದೂರನ್ನು ನೀಡಿ ತಪ್ಪಿತಸ್ಥರಿಗೆ ಜೈಲು ಶಿಕ್ಷೆಯಾಗುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಿಳಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಸದಸ್ಯರು ತಮ್ಮ ಬಳಿ ಲಭ್ಯವಿರುವ ಮಾಹಿತಿಯನ್ನು ಮಾನ್ಯ ಸಚಿವರಿಗೆ ನೀಡಿದರು)**

**ಈ) ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕಗಳ ಪೂರೈಕೆ ಕುರಿತು**

– – – –

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, "ಶಾಲಾ ಆರಂಭದಲ್ಲೇ ಪುಸ್ತಕ ಪೂರೈಸುವ ಮಾತು ಉಳಿಸಿಕೊಳ್ಳದ ಸರ್ಕಾರ", "ಪಠ್ಯ ಪುಸ್ತಕ ಪೂರೈಕೆ ಆಗಸ್ಟ್‌ವರೆಗೆ ಪರದಾಟ" ಎಂಬ ವಿಷಯವು ಇಂದಿನ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿದೆ. ಹೊಸ ಶೈಕ್ಷಣಿಕ ವರ್ಷಾರಂಭದಲ್ಲೇ ಪಠ್ಯಪುಸ್ತಕ ಪೂರೈಸುವುದಾಗಿ ಘಂಟಾಘೋಷವಾಗಿ ಹೇಳಿದ್ದ ಸರ್ಕಾರ ಈ ಮಾತು ಉಳಿಸಿಕೊಳ್ಳುವಲ್ಲಿ ವಿಫಲವಾಗಿದೆ. ಈ ಪ್ರಕ್ರಿಯೆ ಪೂರ್ಣಗೊಳಿಸಲು ಆಗಸ್ಟ್‌ವರೆಗೂ ಕಾಯುವಂತಹ ಸನ್ನಿವೇಶ ಸೃಷ್ಟಿಯಾಗಿದೆ. ಡಿಸೆಂಬರ್‌ನಲ್ಲಿ ಮುದ್ರಣ ಕಾರ್ಯ ಪ್ರಾರಂಭವಾದರೆ ಮುಂದಿನ ಎಲ್ಲಾ ಕೆಲಸ ಸಲೀಸಾಗುತ್ತದೆ. ವಿದ್ಯಾರ್ಥಿಗಳು ಶಾಲೆಯ ಮೆಟ್ಟಿಲೇರುತ್ತಿದಂತೆಯೇ ಅವರ ಕೈಗೆ ಪುಸ್ತಕ ಕೊಡಬಹುದು. ಈ ಬಾರಿ ಮಾರ್ಚ್ ಅಂತ್ಯ ಅಥವಾ ಏಪ್ರಿಲ್ ಮೊದಲ ವಾರದ ಹೊತ್ತಿಗೆ ಪ್ರಿಂಟಿಂಗ್ ಆರಂಭವಾಗಿದೆ. ಈ ನಡುವೆಯೂ ಶಾಲೆ ಪುನರಾರಂಭ ಆಗುತ್ತಿದ್ದಂತೆ ಪಠ್ಯ ಪುಸ್ತಕ ವಿತರಣೆಯಾವುದಾಗಿ ಶಿಕ್ಷಣ ಸಚಿವರು ಕಳೆದ ಅಧಿವೇಶನದಲ್ಲಿ ಸ್ಪಷ್ಟ ಭರವಸೆ ನೀಡಿದ್ದರು. ಆದರೆ, ಈವರೆಗೆ ಶೇಕಡಾ 40 ರಿಂದ 50ರಷ್ಟು ಪೂರೈಕೆಯಷ್ಟೇ ಸಾಧ್ಯವಾಗಿದೆ ಎಂಬ ವಿಷಯವು ಶಿಕ್ಷಣ ಇಲಾಖೆಯ ಮೂಲದಿಂದಲೇ ಸಿಕ್ಕಿರುವ ಮಾಹಿತಿಯೆಂದು ವರದಿಯಾಗಿದೆ. ಈ ಬಾರಿ ನವೆಂಬರ್‌ನಲ್ಲಿ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಯಿತು. ಬಳಿಕ ಮರು ಟೆಂಡರ್ ಕರೆಯದ "ಹಿನ್ನೆಲೆಯಲ್ಲಿ ಪಠ್ಯ ಪುಸ್ತಕ ಮುದ್ರಣ ಕಾರ್ಯ ಗೋಜಲಾಗಿ ಪರಿಣಮಿಸಿತು" ಎಂದು ಇಲಾಖೆಯೊಳಗೆ ಅಪಸ್ವರ ಕೇಳಿ ಬರುತ್ತಿದೆ. ಈ ಬಾರಿ ಪರಿಷ್ಕೃತ ಪಠ್ಯ ಪುಸ್ತಕಗಳನ್ನು ವಿದ್ಯಾರ್ಥಿಗಳು ವ್ಯಾಸಂಗ ಮಾಡಬೇಕಾಗಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಆದರೆ, ಶಿಕ್ಷಣ ಇಲಾಖೆಯ ಈ ಬೇಜವಾಬ್ದಾರಿತನದಿಂದಾಗಿ ಪರಿಷ್ಕೃತ ಪಠ್ಯ ಪುಸ್ತಕಗಳ ಮುದ್ರಣ ಕಾರ್ಯ ಮುಗಿಯದೇ ಇರುವ ಕಾರಣದಿಂದಾಗಿ ಈ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳು ಆತಂಕ ಪಡುವಂತಾಗಿದೆ. ಅಲ್ಲದೇ ಪರಿಷ್ಕೃತ ಪಠ್ಯಗಳಲ್ಲಿ ಈಗಾಗಲೇ ಅನೇಕ ಲೋಪಗಳು ಉಂಟಾಗಿದ್ದರೂ ಅವುಗಳನ್ನು ಸರಿಪಡಿಸುವತ್ತ ಶಿಕ್ಷಣ ಇಲಾಖೆ ಗಮನಹರಿಸಿಲ್ಲ. ಇದರ ಜೊತೆಗೆ ಈ ಸಮಸ್ಯೆಗೆ ಸಿಲುಕಿಕೊಂಡಿದೆ.  ಈ ರೀತಿ ಒಂದರ ನಂತರ ಒಂದರಂತೆ ಪಠ್ಯ ಪುಸ್ತಕ ಪರಿಷ್ಕರಣೆ, ಪಠ್ಯ ಪುಸ್ತಕ ಮುದ್ರಣ ಕಾರ್ಯದಲ್ಲಿ ಶಿಸ್ತು ತೋರದೇ ಈ ಅವಾಂತರಕ್ಕೆ ಕಾರಣವಾಗಿರುವವರ ಮೇಲೆ ಕಠಿಣ ಕ್ರಮವನ್ನು ಕೈಗೊಳ್ಳಬೇಕೆಂದು, ಹಾಗೇ ತ್ವರಿತವಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡಲೇ ಪುಸ್ತಕಗಳು ಅವರ ಕೈಗಳಿಗೆ ಸೇರುವಂತೆ ಕ್ರಮ ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಕೆ.ಆರ್.ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, I have a small submission to you. Definition of the Zero Hour ಏನೆಂದರೆ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಹಿಂದಿನ ದಿನದ ಉಪವೇಶನ ಮುಗಿದ ಮೇಲೆ ಮತ್ತು ಮರು ದಿನದ ಉಪವೇಶನ ಪ್ರಾರಂಭವಾಗುವ ಅವಧಿಯೊಳಗಾಗಿ ಯಾವುದಾದರು ಸಾರ್ವಜನಿಕ ಮಹತ್ವದ ವಿಚಾರಗಳು ಹಿಂದಿನ ಅಧಿವೇಶನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲದಿರುವಾಗ ಅಥವಾ ನಿಯಮಾವಳಿಗಳ ಪ್ರಕಾರ ನೋಟೀಸ್ ಕೊಡುವುದಕ್ಕೆ ಕಾಲಾವಕಾಶ ಸಾಕಾಗದೇ ಹೋದಾಗ, ಪ್ರಶ್ನೋತ್ತರ ಅವಧಿಯ ನಂತರ ಚುಕ್ಕೆ ರಹಿತ ಪ್ರಶ್ನೆಗಳಿಗೆ ಉತ್ತರಗಳನ್ನು ಮಂಡನೆ ಮಾಡಿದ ಮೇಲೆ ಶೂನ್ಯವೇಳೆಯ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. That's the definition of the Zero Hour in the House of Commons and it should be the Zero Hour. ಇದಕ್ಕೆ ರಾಜಸಭೆಯಲ್ಲಿ Rajnarayan Hour ಎಂದೇ ಕರೆಯುತ್ತಿದ್ದರು, because, that man used to raise these issues. ವಿಧಾನಸಭೆಯಲ್ಲಿ ಇಂತಹ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ 'Matters of Urgent Public Importance' ಅಡಿಯಲ್ಲಿ ಒಂದು ಅವಕಾಶವಿತ್ತು. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಸದಸ್ಯರು ಬಹಳ ಗಂಭೀರವಾಗಿರುವಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಎದ್ದು ನಿಂತು ಸಾಂಪ್ರದಾಯಿಕವಾಗಿ 'ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇನೆ' ಎಂದು ಹೇಳಿ ಕುಳಿತುಕೊಳ್ಳುತ್ತೇನೆ. It doesn't serve the purpose. Instead, kindly apply your mind. ಈ ವಿಚಾರವನ್ನು ಶೂನ್ಯವೇಳೆಯ ಪಟ್ಟಿಯಿಂದ ತೆಗೆದು 'Matters of Urgent Public Importance' ಅಡಿಯಲ್ಲಿ ಪಟ್ಟಿ ಮಾಡಿದರೆ, we must make the concerned people obligatory to the House. ಒಂದು ದಿನದಲ್ಲಿ ಇಂತಹ ಎಷ್ಟು ವಿಚಾರಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ತಾವು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆಗ ಯಾವುದೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ವಿಚಾರ ತಾರ್ಕಿಕವಾಗಿ ಕೊನೆಗಾಣುತ್ತದೆ. ಇಲ್ಲದಿದ್ದರೆ, for the sake of satisfaction ಅವರು ಪ್ರಸ್ತಾಪ ಮಾಡುತ್ತಾರೆ, ನನಗೆ ನೀಡಿರುವ ಜವಾಬ್ದಾರಿಯ ವ್ಯಾಪ್ತಿಯಲ್ಲಿ ನಾನು 'ಮಂತ್ರಿಗಳಿಂದ ಉತ್ತರ ತರಿಸಿಕೊಡುತ್ತೇನೆ' ಎಂದು ಹೇಳುತ್ತೇನೆ ಅಷ್ಟೆ.



ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**Mr.CHAIRMAN**:- It doesn't serve the purpose.

**ಶ್ರೀ ಕೆ.ಆರ್.ರಮೇಶ್‌ಕುಮಾರ್:–** ಸನ್ಮಾನ್ಯ ಸಭಾಪತಿಯವರೇ, therefore, the Chair should intervene.

**ಸಭಾಪತಿಯವರು:–** ತಾವು ಹೇಳಿದ್ದು ಸರಿ ಇದೆ.

**ಶ್ರೀ ಕೆ.ಆರ್.ರಮೇಶ್ ಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಿಗೆ ಹೇಳುವುದೇನೆಂದರೆ, I will convey it. ಆಗಲೇ 130 ಪ್ರಶ್ನೆಗಳ ಪೈಕಿ 54 ಪ್ರಶ್ನೆಗಳಿಗೆ ಉತ್ತರ ಬಂದಿದೆ ಎಂದು ಮಾನ್ಯ ಹೊರಟ್ಟಿಯವರು ಹೇಳಿರುವುದರ ಬಗ್ಗೆ its working in my mind. I become restless when these things come to me. 'How to initiate this' ಎಂದು ನಾನು ಮಾನ್ಯ ಸರ್ಕಾರದ ಮುಖ್ಯ ಸಚೇತಕರಿಗೆ ಹೇಳಿ ಹೋಗುತ್ತೇನೆ. ನನ್ನ ಕರ್ತವ್ಯವನ್ನು ನಾನು ಮಾಡುತ್ತೇನೆ. Mr.Chairman sir, you should also convey this.

**ಸಭಾಪತಿಯವರು:–** ಸಚಿವರಾದ ಮಾನ್ಯ ರಮೇಶ್‌ಕುಮಾರ್‌ರವರು ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. 'ಸಾರ್ವಜನಿಕ ಮಹತ್ವದ ವಿಚಾರದ ಬಗ್ಗೆ ನಮ್ಮ ಸದನದಲ್ಲಿ ಚರ್ಚೆಯಾಗದೇ ಬೇರೆಲ್ಲಿ ಆಗುವುದಕ್ಕೆ ಸಾಧ್ಯವಿದೆ? ಅದಕ್ಕೆ ಅವಕಾಶವನ್ನು ಕೊಡಿ' ಎಂದು ಅವರು ಹೇಳುತ್ತಿದ್ದಾರೆ. ಮಾನ್ಯ ಬಸವರಾಜ ಹೊರಟ್ಟಿಯವರಿಗೆ ನೆನಪಿರುವಂತೆ, ವಿಧಾನ ಪರಿಷತ್ತಿನ ನಿಯಮಾವಳಿಗಳ ಸಮಿತಿ ಸಭೆಯಲ್ಲಿ ಈ ಬಗ್ಗೆ ಚರ್ಚೆ ಮಾಡುವಂತಹ ಪ್ರಯತ್ನವನ್ನು ಮಾಡಿದ್ದೇವೆ ಆದರೆ, ಯಾವುದೇ ತೀರ್ಮಾನವಾಗಿಲ್ಲ. ಮಾನ್ಯ ರಮೇಶ್‌ಕುಮಾರ್‌ರವರ ಅಭಿಪ್ರಾಯವನ್ನು ಮುಂದಿನ ನಿಯಮಾವಳಿಗಳ ಸಮಿತಿ ಸಭೆಯಲ್ಲಿ ತಿಳಿಸುವಂತಹ ಪ್ರಯತ್ನವನ್ನು ಮಾಡಲಾಗುತ್ತದೆ. ಆದಷ್ಟು ಬೇಗ ನಮ್ಮ ನಿಯಮಾವಳಿಗಳಲ್ಲಿ ಬದಲಾವಣೆ ಮಾಡುವಂತಹ ವ್ಯವಸ್ಥೆಯನ್ನು ಮಾಡದೇ ಹೋದರೆ, ಗಂಭೀರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯದೇ ಹಾಗೆಯೇ ಜಾರಿ ಹೋಗಿ ಬಿಡುತ್ತವೆ. ಇದು ಒಳ್ಳೆಯ ಪದ್ಧತಿಯಲ್ಲ. ನಿಯಮಾವಳಿಗಳ ಸಮಿತಿ ಸಭೆಯಲ್ಲಿರುವ ಹಿರಿಯ ಸದಸ್ಯರುಗಳ ಬೆಂಬಲ ತೆಗೆದುಕೊಂಡು ನಿಯಮಾವಳಿಗಳಿಗೆ ತಿದ್ದುಪಡಿ ತರುವಂತಹ ಪ್ರಯತ್ನವನ್ನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(671) 12.06.2017 1.10 TCH/GR**

ಉ) "ಎನ್.ಸಿ.ಟಿ.ಇ. ಹೊಸ ನಿಯಮಕ್ಕೆ–ಹಿಂದಿ ಶಿಕ್ಷಕರು ಕಂಗಾಲು"
50000 ಅಭ್ಯರ್ಥಿಗಳ ಭವಿಷ್ಯ ಕುರಿತು.

– – –

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, "ಎನ್.ಸಿ.ಟಿ.ಇ. ಹೊಸ ನಿಯಮಕ್ಕೆ–ಹಿಂದಿ ಶಿಕ್ಷಕರು ಕಂಗಾಲು" "50000 ಅಭ್ಯರ್ಥಿಗಳ ಭವಿಷ್ಯ ಡೋಲಾಯಮಾನ" ಎಂಬ ತಲೆಬರಹದಡಿಯಲ್ಲಿ ವಿಜಯವಾಣಿ ಪತ್ರಿಕೆಯಲ್ಲಿ ವರದಿಯಾದ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಗುಣಮಟ್ಟದ ಶಿಕ್ಷಣ ನೀಡಲು ಹಿಂದಿ ಶಿಕ್ಷಕರಾಗಲು ಪದವಿ ಹಂತದಲ್ಲಿ ಹಿಂದಿ ಐಚ್ಛಿಕ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡು ಬಿ.ಇಡಿ., ಪರೀಕ್ಷೆ ಉತ್ತೀರ್ಣರಾಗಿರಬೇಕಾಗುತ್ತದೆ. N.C.T.E.., (National Council for Teacher Education) ಮಾಡಿದ ಹೊಸ ನಿಯಮಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿರುವುದು. ಈ ಹೊಸ ನಿಯಮಾವಳಿಯಿಂದ ಅಭ್ಯರ್ಥಿಗಳು ಕಂಗಾಲಾಗಿದ್ದಾರೆ. ಈ ಹಿಂದಿನ ನಿಯಮದ ಪ್ರಕಾರ ಹಿಂದಿ ಪ್ರಚಾರ ಸಮಿತಿಗಳು ನಡೆಸಿರುವ ಭಾಷಾ ಪ್ರವೀಣ್, ರತ್ನ, ಪ್ರಕಾಶ್, ವಿದ್ವಾನ್ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಸುಮಾರು 50000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮುಂಬರುವ ಸರ್ಕಾರಿ ಹಿಂದಿ ಶಿಕ್ಷಕರ ನೇಮಕಾತಿಯಲ್ಲಿ ಅರ್ಜಿ ಸಲ್ಲಿಸುವಲ್ಲಿ ಅರ್ಹತೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಇದೊಂದು ಆಘಾತಕಾರಿ ಮತ್ತು ಅನ್ಯಾಯದ ಸಂಗತಿಯಾಗಿದೆ.

ಯಾವುದೇ ಹೊಸ ನಿಯಮವು ಜಾರಿಗೆ ತರುವಾಗ ಅದು ಪೂರ್ವಾನ್ವಯವಾಗಬಾರದು. ಈ ಹಿನ್ನೆಲೆಯಲ್ಲಿ, ಪದವಿಯ ಹಂತದಲ್ಲಿ ಹಿಂದಿ ವಿಷಯವನ್ನು ಐಚ್ಛಿಕ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡು ಬಿ.ಇಡಿ., ಮುಗಿಸಿರಬೇಕು ಎಂಬ ನಿಯಮವನ್ನು ಸರ್ಕಾರ 2016ಕ್ಕೆ ಜಾರಿಗೆ ತಂದಿರುವುದು. 2016ರ ಪೂರ್ವದಲ್ಲಿ ಹಿಂದಿ ಪರಿಷತ್ತುಗಳು ನಡೆಸಿದ (ಹಿಂದಿ ಶಿಕ್ಷಕ) ಪದವಿಗಳನ್ನು ಹೊಂದಿದ ಅಭ್ಯರ್ಥಿಗಳಿಗೆ ಸರ್ಕಾರ ಮುಂಬರುವ ನೇಮಕಾತಿಯಲ್ಲಿ ಅವಕಾಶ ಕಲ್ಪಿಸಿಕೊಡಲು ನಿರುದ್ಯೋಗಿ ಹಿಂದಿ ಶಿಕ್ಷಕರ ಸಂಘಟನೆಯವರು ಒತ್ತಾಯಿಸಿರುವರು. ಇದಲ್ಲದೆ ರಾಜ್ಯದಲ್ಲಿಯ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ನಿಧನ, ನಿವೃತ್ತಿ ಮತ್ತು ರಾಜೀನಾಮೆಯಿಂದ ತೆರವಾದ ಹುದ್ದೆಗಳನ್ನು 2016ರ N.C.T.E.., ಹೊಸ ನಿಯಮ ಜಾರಿಗೆ ತರುವ ಪೂರ್ವದಲ್ಲಿ ನೇಮಕ ಮಾಡಿಕೊಂಡಿರುವ ಹಿಂದಿ ಪರಿಷತ್ತುಗಳು ನಡೆಸಿರುವ ಪದವಿಗಳನ್ನು ಹೊಂದಿರುವ ಅಭ್ಯರ್ಥಿಗಳಿಗೆ ನೇಮಕಾತಿಗೆ ಅನುದಾನ ಸಹಿತ ಅನುಮೋದನೆ ನೀಡಲು ಇಲಾಖೆ ಒಪ್ಪಿಗೆ ನೀಡುವಂತೆ ಸಂಬಂಧಪಟ್ಟ ಶಿಕ್ಷಕರು ಹೋರಾಟ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಡೆಸುತ್ತಿರುವವರು. ಈ ಎಲ್ಲಾ ಹಿನ್ನೆಲೆಯಲ್ಲಿ ಸರ್ಕಾರ ನಿರುದ್ಯೋಗಿ ಹಿಂದಿ ಶಿಕ್ಷಕರಿಗೆ ಅನ್ಯಾಯವನ್ನು ಸರಿಪಡಿಸಲು ಮತ್ತು ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಗಮನಹರಿಸಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಕೆ.ಆರ್.ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ):-** ಸರ್ಕಾರದಿಂದ ಉತ್ತರವನ್ನು ತರಿಸಿಕೊಡುತ್ತೇನೆ. ಇದಕ್ಕೆ ನಾನು ಏನನ್ನು ಹೇಳಲಿ. ನನಗೇನು ಇದು ಖುಷಿ ಕೊಡುವುದಿಲ್ಲ. ಆ ತರಹದ ವ್ಯವಸ್ಥೆಯನ್ನು ನಾವು ನಿರ್ಮಾಣ ಮಾಡಿಕೊಂಡಿದ್ದೇವೆ.

## 4. ಸಚಿವರ ಹೇಳಿಕೆಗಳು

ಅ) ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ದೇವಿಕೊಪ್ಪ ಗ್ರಾಮದಲ್ಲಿ
ಹೆಸ್ಕಾಂನ ನಿರ್ಲಕ್ಷ್ಯತನದಿಂದ ಮೃತರಾಗಿರುವ ರೈತ ಕುಟುಂಬಕ್ಕೆ
ಪರಿಹಾರ ನೀಡುವ ಬಗ್ಗೆ.

- - -

**ಶ್ರೀ ಕೆ.ಆರ್.ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಶ್ರೀ ಶ್ರೀನಿವಾಸ ಮಾನೆಯವರು ದಿನಾಂಕ: 06.06.2017ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗಳಿಗೆ ಸಂಬಂಧಿಸಿದ ಉತ್ತರಗಳನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಲಿಖಿತ ಉತ್ತರದ ಪ್ರತಿ ಲಗತ್ತಿಸಲಾಗಿದೆ)**

ಆ) ಹಾಪ್ ಕಾಮ್ಸ್‌ನಲ್ಲಿ ಮಾವಿನ ಕಾಯಿಗಳನ್ನು ಹಣ್ಣು ಮಾಡಲು
ಕ್ಯಾಲ್ಷಿಯಂ ಕಾರ್ಬೈಡ್ ಅನ್ನು ಬಳಸುತ್ತಿರುವ ಬಗ್ಗೆ.

- - - -

**ಶ್ರೀ ಕೆ.ಆರ್.ರಮೇಶ್‌ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿರವರು ದಿನಾಂಕ:07.06.2017ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗಳಿಗೆ ಸಂಬಂಧಿಸಿದ ಉತ್ತರಗಳನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಲಿಖಿತ ಉತ್ತರ ಪ್ರತಿ ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**5. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**(ಪಟ್ಟಿಯನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:–** ಸಭೆಯ ಗಮನಕ್ಕೆ ಒಂದು ವಿಷಯ ತರುತ್ತಿದ್ದೇನೆ. ಆಡಳಿತ ಪಕ್ಷದ ಪರವಾಗಿ ಮುಖ್ಯ ಸಚೇತಕರು ಮತ್ತು ಎಲ್ಲಾ ಹಿರಿಯರು, ಅವರ ಪಕ್ಷದ ಒಂದು ಪ್ರಮುಖವಾದಂತಹ ಸಭೆ ಇದೆ. ಆ ಸಭೆಗೆ ನಾವೆಲ್ಲಾ ಹೋಗಲೇಬೇಕಾಗಿರುತ್ತದೆ. ದಯಮಾಡಿ ಅದಕ್ಕೆ ಅನುವು ಮಾಡಿಕೊಡಿ ಎಂದು ಕೇಳಿದ್ದಾರೆ. ಈ ಹಿನ್ನೆಲೆಯಲ್ಲಿ, ನನ್ನ ಹತ್ತಿರ ಮಾಹಿತಿ ಈಗಷ್ಟೇ ಬಂದಿದೆ. ವಿಧಾನಸಭೆಯನ್ನು ನಾಳೆ ಬೆಳಿಗ್ಗೆಯವರೆಗೆ ಮುಂದೂಡಿದ್ದಾರೆ. ಹಾಗಾಗಿ, ಆಡಳಿತ ಪಕ್ಷದ ಒಂದು ಕೋರಿಕೆ ಅಥವಾ ಬೇಡಿಕೆ, ಇಚ್ಛೆಯಂತೆ, ನಾನು ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 1 ಗಂಟೆ 14 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 13ನೇ ಜೂನ್ ಮಾಹೆ 2017ರ ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~